# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 10-02-2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಜಿ. ಮಂಜುನಾಥರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ – ಸದಸ್ಯರು | ಉಪ ಆಯುಕ್ತರು (ಆಸ್ತಿಗಳು), |
| ಲತಾ. ಕೆ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ), |
| ಎಂ.ಸಿ. ಶ್ರೀನಿವಾಸ್ – ಸದಸ್ಯರು | ಕಲ್ಯಾಣಾಧಿಕಾರಿ (ಆರ್.ಆರ್.ನಗರ), |
| ಮಂಜುನಾಥ – ಸದಸ್ಯರು | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಆರ್.ಆರ್.ನಗರ), (ಬನಶಂಕರಿ), |
| ಎಲ್. ನಾಗರತ್ನ – ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಬನಶಂಕರಿ), (ಆರ್.ಆರ್.ನಗರ), (ಕೆಂಪೇಗೌಡನಗರ), (ಹೊಂಬೇಗೌಡನಗರ), |
| ವರಲಕ್ಷ್ಮಿ. ಜೆ – ಸದಸ್ಯರು | |
| ಆಶಾ ಸುರೇಶ್ – ಸದಸ್ಯರು | |
| ಎನ್. ಜಯಪಾಲ – ಸದಸ್ಯರು | |
| ಲಾವಣ್ಯಗಣೇಶ್‌ರೆಡ್ಡಿ – ಸದಸ್ಯರು | |
| **ಗೈರು ಹಾಜರಾಗಿದ್ದ ಸದಸ್ಯರು** | |
| ವಿ. ವಾಗಿಶ್ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/226/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 02–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ (ಯೋಜನೆ) ರವರು ಕಡತದ ಕಂಡಿಕೆ ಸಂಖ್ಯೆ 19 ರಲ್ಲಿ ನಮೂದಿಸಿರುವ 6 ಕಾಮಗಾರಿಗಳ ಒಟ್ಟು ಮೊತ್ತ ರೂ.599.41 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡುವ ಸಲುವಾಗಿ 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಮುಖ್ಯ ಅಭಿಯಂತರರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕಂಡಿಕೆ ಸಂಖ್ಯೆ 24 ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ, ಲೆಕ್ಕ ಶೀರ್ಷಿಕೆ ಮೂಲ ಭೂತ ಸೌಕರ್ಯಗಳು ಮುಖ್ಯ ರಸ್ತೆ/ಆರ್ಟೆರಿಯಲ್/ಉಪ ಆರ್ಟೆರಿಯಲ್ ರಸ್ತೆಗಳು ಪಿ.ಸಂಖ್ಯೆ 2019 ರಲ್ಲಿ ಒಟ್ಟು 6 ಕಾಮಗಾರಿಗಳ ಮೊತ್ತ ರೂ.599.41 ಲಕ್ಷಗಳ ಅನುದಾನವನ್ನು ಒದಗಿಸಿಕೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 02–08–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿನ ಪಿ.2019 ರಲ್ಲಿ ಅನುದಾನ ಲಭ್ಯವಿಲ್ಲದೇ ಇರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## *02]. ವಿಷಯದ ಸಂಖ್ಯೆ :–ತೆಆಸ್ಥಾಸ/237/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎನ್. ಎಸ್. ನಂದೀಶರೆಡ್ಡಿ ರವರು ಹೆಚ್.ಎ.ಎಲ್. ಏರ್‌ಪೋರ್ಟ್

ವಾರ್ಡ್ 87ರ ಅನ್ನಸಂದ್ರಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾರ್ವಜನಿಕರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ರೂ.300.00 ಲಕ್ಷಗಳ ಅನುದಾನವನ್ನು ಮತ್ತು ವಾರ್ಡ್ 87ರ ನೆಲ್ಲೂರುಪುರದಿಂದ ರೆಡ್ಡಿಪಾಳ್ಯ ಎಲ್.ಬಿ.ಶಾಸ್ತ್ರಿನಗರ ಮೂಲಕ ವಿಭೂತಿಪುರ ಕೆರೆವರೆಗೆ ರಾಜಕಾಲುವೆ ಕಾಮಗಾರಿಗಳನ್ನು ಕೈಗೊಳ್ಳಲು ರೂ.400.00 ಲಕ್ಷ ಒಟ್ಟು ರೂ.700.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕೆಂದು ಕೋರಿ ಪತ್ರವನ್ನು ಸಲ್ಲಿಸಿರುತ್ತಾರೆ. ಪತ್ರವನ್ನು ಲಗತ್ತಿಸಿದೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂದಿಸಿದಂತೆ ಅನುದಾನದ ಮೊತ್ತ ರೂ.700.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸುವ ಸಲುವಾಗಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 03–08–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಲಭ್ಯವಿಲ್ಲದೇ ಇರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## ***03]. ವಿಷಯದ ಸಂಖ್ಯೆ :–ತೆಆಸ್ಥಾಸ/305/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 28–09–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 160 ರ 07 ಕಾಮಗಾರಿಗಳ ಅಂದಾಜು ಮೊತ್ತ ರೂ. 138.76 ಲಕ್ಷಗಳಿಗೆ ಶ್ರೀ ಎಂ ಶ್ರೀನಿವಾಸ್, ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ರವರು 2011–12 ನೇ ಸಾಲಿನ ಆಯವ್ಯಯದ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಅನುಮೋದನೆ ನೀಡಲು ತಮ್ಮ ಪತ್ರದ ಮುಖಾಂತರ ಕೋರಿರುತ್ತಾರೆ.

2011–12 ನೇ ಸಾಲಿನ ಕರಡು ಆಯವ್ಯಯ ಮಂಡಿಸುವ ಮುನ್ನ ಅಗತ್ಯ ತುರ್ತು ಕಾಮಗಾರಿಗಳಿಗಾಗಿ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡಿರುವ ಮೊತ್ತ ರೂ. 6600.00 ಲಕ್ಷಗಗಳು ಹಾಗೂ ಚಾಲ್ತಿ ಕಾಮಗಾರಿಗಳಿಗೆ ರೂ. 8500.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

( ರೂ. ಲಕ್ಷಗಳಲ್ಲಿ)

| 2011–12 ರ ಕರಡು ಆಯವ್ಯಯದಲ್ಲಿ ಒಟ್ಟಾರೆ ಮೀಸಲಿಟ್ಟ ಅನುದಾನ (6600+8500) | 2011–12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ ಜಾಬ್ ನಂಬರ್ ನೀಡಿರುವ ಮೊತ್ತ | ಜಾಬ್ ಸಂಖ್ಯೆ ನೀಡಲು ಸ್ಥಾಯಿ ಸಮಿತಿ ಮತ್ತು ಮಾನ್ಯ ಆಯುಕ್ತರವರಿಂದ ಅನುಮೋದಿತ ಮೊತ್ತ | ಜಾಬ್ ನೀಡುವುದರ ಬಗ್ಗೆ ಅನುಮೋದನೆಗೆ ಮಂಡಿಸಿರುವ ಮೊತ್ತ | ರಸ್ತೆ ಗುಂಡಿ ಮುಚ್ಚಲು ಜೆಂಟ್ ಪ್ಯಾಕರ್ ಮಿಸನ್ ಖರೀದಿಸಲು ಮೀಸಲಿಡಲು ಮೌಖಿಕವಾಗಿ ಸೂಚಿಸಿರುವ ಮೊತ್ತ | ಬಾಕಿ ಇರುವ ಮೊತ್ತ |
|---|---|---|---|---|---|
| 8500.000 | 2533.420 | 1383.77 | 485.08 | 2500.00 | 1597.73 |

2011–12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ 7 ಕಾಮಗಾರಿಗಳ ಅಂದಾಜು ಮೊತ್ತ ರೂ. 138.76 ಲಕ್ಷಗಳಿಗೆ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 28–09–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗೆ ಪಿ.0541 ಲೆಕ್ಕ ಶೀರ್ಷಿಕೆಯಲ್ಲಿ ಅನುದಾನ ಲಭ್ಯವಿಲ್ಲದೇ ಇರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## ***04]. ವಿಷಯದ ಸಂಖ್ಯೆ :–ತೆಆಸ್ಥಾಸ/310/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)45/2011–12, ದಿನಾಂಕ : 30–09–2011ರಲ್ಲಿ ವಿವರಿಸಿರುವಂತೆ, ಶ್ರೀ ಬಿ. ರುದ್ರೇಶ್, ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ (ರಿ), ನಂ. 208, ಮಿಲೇನಿಯಂ ಶಾಲೆ ಎದುರು, ಆರ್.ಎಂ.ವಿ. 2ನೇ ಹಂತ, ರಾಜಗೋಪಾಲ ರಸ್ತೆ, ಸಂಜಯನಗರ ಅಂಚೆ, ನಾಗಶೆಟ್ಟಿ ಹಳ್ಳಿ, ಬೆಂಗಳೂರು – 560 094. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಸಾಂಸ್ಕೃತಿಕ ನೆಲೆಗಟ್ಟಿಗಾಗಿ ಸಮಾಜದ ಉನ್ನತಿಗಾಗಿ ಶಿಕ್ಷಣದ ಪ್ರಗತಿಗಾಗಿ ಪರ್ಯಾಯಗಳನ್ನು ಹುಡುಕುವ ಮೂಲಕ ಸಮಾನತೆಯ ಮತ್ತು ಜನಪರಂಪರೆಯ ಸಮಾಜ ನಿರ್ಮಾಣಕ್ಕಾಗಿ

ಕಾರ್ಯನಿರ್ವಹಿಸುತ್ತಿದ್ದು, ಸಾಂಸ್ಕೃತಿಕ ಸಂಸ್ಥೆಯೆಂದು ಹೆಸರು ಮಾಡಿರುವುದಾಗಿ ತಿಳಿಸಿರುತ್ತಾರೆ. ಕಳೆದ 20 ವರ್ಷಗಳಿಂದ ರಂಗಭೂಮಿ, ಪೌರಾಣಿಕ, ಜನಪದ ಸಾಹಿತ್ಯ, ಪರಿಸರ, ಶಿಕ್ಷಣ ಗ್ರಾಮೀಣಾಭಿವೃದ್ಧಿ ಮುಂತಾದ ಎಲ್ಲಾ ರಂಗಗಳಲ್ಲೂ ಕೆಲಸ ಮಾಡುತ್ತಿರುವ ನಾಡಿನ ಸಾಹಿತಿ, ಚಿಂತಕರ, ಕಲಾವಿದರ ಮೆಚ್ಚುಗೆ ಪಡೆದಿರುವುದಾಗಿ ತಿಳಿಸಿರುತ್ತಾರೆ. ಪ್ರತಿ ವರ್ಷದಂತೆ ಈ ವರ್ಷವೂ ತಮ್ಮ ವೇದಿಕೆ ವತಿಯಿಂದ ನಾಟಕೋತ್ಸವ–2011 ಕಾರ್ಯಕ್ರಮವನ್ನು ನಯನ ರಂಗಮಂದಿರ ಮತ್ತು ರವೀಂದ್ರ ಕಲಾ ಕ್ಷೇತ್ರದಲ್ಲಿ ದಿನಾಂಕ 05.09.2011 ಮತ್ತು 06.09.2011 ರಂದು ಎರಡು ದಿನಗಳ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಈ ಎರಡು ದಿನಗಳಲ್ಲಿ ಎರಡು ನಾಟಕ ಮತ್ತು ಒಂದು ರಂಗ ಗೀತೆ ಕಾರ್ಯಕ್ರಮ ಮಾಡುತ್ತಿದ್ದು ಈ ಮೂರು ಕಾರ್ಯಕ್ರಮಗಳಿಗೂ ಪಾಲಿಕೆ ವತಿಯಿದ ಪ್ರಾಯೋಜನೆ/ಧನ ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

ಪೂಜ್ಯ ಮಹಾಪೌರರು ಹಾಗೂ ಶ್ರೀ ಎನ್.ಎಂ. ಕೃಷ್ಣ ಮೂರ್ತಿ ಸದಸ್ಯರು ವಾರ್ಡ್–19 (ಸಂಜಯ್ ನಗರ) ರವರು ಟಿಪ್ಪಣಿ ಬರೆದು ಸದರಿ ಸಂಘಕ್ಕೆ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 30–09–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.10,000/–(ಹತ್ತು ಸಾವಿರ)ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *051]. ವಿಷಯದ ಸಂಖ್ಯೆ :–ತೆಆಸ್ಥಾಸ/320/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)58/2011–12, ದಿನಾಂಕ : 03–10–2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ಹರೀಶ್. ಬಿ.ಇ. ಮಾನ್ಯ ಉಪ ಮಹಾಪೌರರು, ಟಿಪ್ಪಣಿ ಬರೆದು ಶ್ರೀ ಚಾಮರಾಜ್, ಸ್ಥಾಪಕರು, ಚಾಮರಾಜ್ ಕಲಾ ಮಂದಿರ, ಹೆಚ್. ಪಾರ್ವತಮ್ಮ ಹೀರೆಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ರವರು ನೀಡಿರುವ ಮನವಿ ಮತ್ತು ದಾಖಲೆಗಳನ್ನು ಲಗತ್ತಿಸುತ್ತಾ, ಸದರಿಯವರು ಚಾನ್ ಕೀ ಕರಾಟೆ ಆರ್ಟ್ ಅಕಾಡೆಮಿ(ರಿ) ಹಾಗೂ ಕಲಾ ಮಂದಿರ ಸಂಸ್ಥೆಯು ಹೆಚ್. ಪಾರ್ವತಮ್ಮ ಹಿರೇಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ಇಲ್ಲಿ ಸುಮಾರು 20 ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಯ ಮುಖಾಂತರ ಅನೇಕ ಬಡ ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವುದಾಗಿ ಪ್ರಸ್ತಾಪಿಸಿ, **ಮಾ:ಅನಿಲ್,** ನಂದಿನಿ ಬಡಾವಣೆ ಇವರು ದಿನಾಂಕ 26–06–2011 ರಂದು ನಗರದ ನಾಗರಭಾವಿ ವೃತ್ತದಿಂದ ಡಾ: ರಾಜ್ ಕುಮಾರ್ ಪುಣ್ಯ ಭೂಮಿ ಕಂಠೀರವ ಸ್ಟುಡಿಯೋ, ಇಲ್ಲಿಯವರೆಗೆ 8 ಕಿ.ಮೀ ದೂರದವರೆಗೆ **"ನಾನ್ ಸ್ಟಾಫ್ ಡಬಲ್ ಹ್ಯಾಂಡ್ ಕಾರ್ಟ್ ವೀಲ್"** ನ್ನು ಕೇವಲ 1 ಗಂಟೆ 14 ನಿಮಿಷದಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿ ಲಿಮ್ಕಾ ಪುಸ್ತಕದಲ್ಲಿ ದಾಖಲೆ ನಿರ್ಮಿಸಿ, ಈ ಮೂಲಕ ರಾಜ್ಯದ ಗೌರವವನ್ನು ಎತ್ತಿ ಹಿಡಿದಿರುತ್ತಾರೆ. ಇವರು ಬಡ ಕುಟುಂಬದಿಂದ ಬಂದವರಾಗಿರುತ್ತಾರೆ. ಪಾಲಿಕೆ ವತಿಯಿಂದ ಆತನ ಕುಟುಂಬಕ್ಕೆ ಆರ್ಥಿಕ ಸಹಾಯವನ್ನು ಮಹಾನಗರ ಪಾಲಿಕೆ ವತಿಯಿಂದ ಕೊಡಿಸಿ ಕೊಡಲು ಕೋರಿಕೊಂಡಿರುತ್ತಾರೆಂದು ತಿಳಿಸಿ, ಶ್ರೀ ಚಾಮರಾಜ್, ಸ್ಥಾಪಕರು, ಚಾಮರಾಜ್ ಕಲಾ ಮಂದಿರ, ಹೆಚ್. ಪಾರ್ವತಮ್ಮ ಹೀರೆಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ಇವರು ನೀಡಿರುವ ಪತ್ರವನ್ನು ಪರಿಗಣಿಸಿ ಧನ ಸಹಾಯ ಮಾಡಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಸಂಘ–ಸಂಸ್ಥೆಗಳಿಗೆ ಧನ ಸಹಾಯ/ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಆದರೆ ವೈಯ್ಯಕ್ತಿಕ ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/– ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ.

ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ. 10,000/- ದಿಂದ ಗರಿಷ್ಠ ರೂ. 1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ಪ್ರಸಕ್ತ 2011-12 ನೇ ಸಾಲಿನ ಮಹಾನಗರ ಪಾಲಿಕೆಯ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವಿಗೆ ರೂ. 10,000/- ಗಳ (ಹತ್ತು ಸಾವಿರಗಳು) ಸಹಾಯಧನವನ್ನು ಮಂಜೂರು ಮಾಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:*** ***ದಿನಾಂಕ : 03-10-2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.10,000/- (ಹತ್ತು ಸಾವಿರ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು***

## *06]. ವಿಷಯದ ಸಂಖ್ಯೆ :-ತೆಆಸ್ಥಾಸ/321/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)64/2011-12, ದಿನಾಂಕ : 10-10-2011ರಲ್ಲಿ ವಿವರಿಸಿರುವಂತೆ, ಶ್ರೀ ಗುರುದೇವ ನಾರಾಯಣ ಕುಮಾರ್, ಅಧ್ಯಕ್ಷರು, ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ (ನೋ), ನಂ. 619/620, 13ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು - 560 040. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಪ್ರತಿ ವರ್ಷದಂತೆ ಈ ವರ್ಷವೂ ಕನ್ನಡ ಚಳವಳಿಯ ಧೀಮಂತ ನಾಯಕರು, ಮಾಜಿ ಶಾಸಕರು ಆಗಿದ್ದ ಜಿ. ನಾರಾಯಣ ಕುಮಾರ್ ಸ್ಥಾಪಿತ ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಆಶ್ರಯದಲ್ಲಿ ನವೆಂಬರ್ 1 2011 ರಿಂದ ಒಂದು ತಿಂಗಳ ಕಾಲ ಅದ್ದೂರಿ "ಕನ್ನಡ ರಾಜ್ಯೋತ್ಸವ" ವನ್ನು ಕೆಂಪೇಗೌಡ ರಸ್ತೆಯಲ್ಲಿರುವ "ಬನ್ನಪ್ಪ ಪಾರ್ಕ್ ಆಟದ ಮೈದಾನ" ದಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತೇವೆಂದು ನವೆಂಬರ್ 1 ರಂದು ನಾಡಿನ ವೈಭವವನ್ನು ಸಾರುವ ಮೆರವಣಿಗೆಯಲ್ಲಿ ಜಾನಪದ ತಂಡಗಳು, ಸ್ತಬ್ಧ ಚಿತ್ರಗಳು, ಕಲಾವಿದರು ಪಾಲ್ಗೊಳ್ಳುವರು, ನವೆಂಬರ್ 1 ರಿಂದ ಸತತವಾಗಿ ಒಂದು ತಿಂಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತದೆಂದು ತಿಳಿಸುತ್ತಾ, ಪ್ರತಿ ವರ್ಷವು ಮಹಾನಗರ ಪಾಲಿಕೆ ಧನ ಸಹಾಯವನ್ನು ನೀಡುತ್ತಿರುವುದು ಸರಿಯಷ್ಟೆ, ಈ ವರ್ಷವು ರಾಜ್ಯೋತ್ಸವ ಕಾರ್ಯಕಲಾಪಗಳಿಗೆ ಮತ್ತು ಕಾರ್ಯಕ್ರಮದ ವ್ಯವಸ್ಥೆಗೆ ಬಹಳ ಖರ್ಚು ವೆಚ್ಚ ತಗುಲುತ್ತಿರುವುದು ಮಹಾನಗರ ಪಾಲಿಕೆ ವತಿಯಿಂದ ರೂ. 20.00 (ಇಪ್ಪತ್ತು ಲಕ್ಷ) ಧನ ಸಹಾಯವನ್ನು ನೀಡಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ 2010-11 ನೇ ಸಾಲಿಗೆ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಪಾಲಿಕೆ ವತಿಯಿಂದ ರೂ. 1.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:*** ***ದಿನಾಂಕ : 10-10-2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.1,00,000/- (ಒಂದು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು***

## *07]. ವಿಷಯದ ಸಂಖ್ಯೆ :-ತೆಆಸ್ಥಾಸ/322/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ)ಪಿಎಸ್‌ಆರ್(4)88/2011-12, ದಿನಾಂಕ : 10-10-2011ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ಶ್ರೀ ಜಯದುರ್ಗಾ ಮತ್ತು ಮಾರಿಯಮ್ಮ ದೇವಸ್ಥಾನ ಟ್ರಸ್ಟ್ (ರಿ), ನಂ. 1/ಎ, ಕೋರಮಂಗಲ 3ನೇ ಹಂತ, 80 ಅಡಿ ರಸ್ತೆ, ಶ್ರೀ ಜಯದುರ್ಗಾ ಮಾರಿಯಮ್ಮ ದೇವಸ್ಥಾನ ರಸ್ತೆ, ಕಮರ್ಷಿಯಲ್ ಟ್ಯಾಕ್ಸ್ ಆಫೀಸ್ ಎದುರು, ಬೆಂಗಳೂರು - 560 047 ರವರು ಮನವಿ ಸಲ್ಲಿಸಿ ಶಾಂತಿ ನಗರ ವಿಧಾನ ಸಭಾ ಕ್ಷೇತ್ರ (ಬಿ.ಬಿ.ಎಂ.ಪಿ. ವಾರ್ಡ್ ನಂ.116 ನೀಲಸಂದ್ರ) ವ್ಯಾಪ್ತಿಯಲ್ಲಿ

ಬರುವ ಕೋರಮಂಗಲ 3ನೇ ಹಂತ, 80 ಅಡಿ ರಸ್ತೆ, ಶ್ರೀ ಜಯದುರ್ಗಾ ಮಾರಿಯಮ್ಮ ದೇವಸ್ಥಾನಕ್ಕೆ ಕಳೆದ ವರ್ಷ ಅನುದಾನ ಮಂಜೂರು ಮಾಡುವಂತೆ ಅಗತ್ಯವಾದ ಮಾಹಿತಿಗಳೊಂದಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಅನುದಾನ ಮಂಜೂರಾತಿ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ. ಸದರಿ ದೇವಸ್ಥಾನದ ಕಟ್ಟಡ ಕಾಮಗಾರಿಯ ಒಟ್ಟು ಅಂದಾಜು ವೆಚ್ಚ ರೂ. 27.00 ಲಕ್ಷಗಳಾಗಿದ್ದು, ಹಣಕಾಸಿನ ಕೊರತೆಯಿಂದಾಗಿ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುತ್ತವೆ. ಈ ಪ್ರದೇಶದಲ್ಲಿ ಪರಿಶಿಷ್ಟ ಜಾತಿ/ಪಂಗಡದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದು (ಕೊಳಚೆ ಪ್ರದೇಶ) ಆರ್ಥಿಕ ಸಹಾಯವಿಲ್ಲದೆ ದೇವಸ್ಥಾನ ಅಭಿವೃದ್ಧಿಗೆ ಅನಾನುಕೂಲ ಉಂಟಾಗಿರುತ್ತದೆ ತಿಳಿಸಿ, ಪಾಲಿಕೆ ವತಿಯಿಂದ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸದರಿ ದೇವಸ್ಥಾನಕ್ಕೆ ರೂ. 10.00 (ಹತ್ತು ಲಕ್ಷ ರೂಪಾಯಿಗಳು ಮಾತ್ರ) ಗಳ ಅನುದಾನವನ್ನು ಮಂಜೂರು ಮಾಡುವ ಮೂಲಕ ದೇವಸ್ಥಾನದ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

2010–11 ನೇ ಸಾಲಿನಲ್ಲಿ ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಲೆಕ್ಕ ಶೀರ್ಷಿಕೆಯಡಿಯಲ್ಲಿ ಮೀಸಲಿರಿಸಲಾಗಿದ್ದ ರೂ. 10.00 ಕೋಟಿಗಳು ಹಂಚಿಕೆಯಾಗಿದ್ದರ ಹಿನ್ನೆಲೆಯಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 28–03–2011 ರಂದು ನಡೆದ ಸಭೆಯ ನಡವಳಿಗಳು ವಿಷಯದ ಸಂಖ್ಯೆ : ತೆಆಸ್ಥಾಸ/335/2010–11 ರಲ್ಲಿ ಸದರಿ ಸಂಸ್ಥೆಯ ಪ್ರಸ್ತಾವನೆಯನ್ನು ಕೈಬಿಡಲಾಗಿರುತ್ತದೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:*** ***ದಿನಾಂಕ : 10–10–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.10,000/– (ಹತ್ತು ಸಾವಿರ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು***

## ***08]. ವಿಷಯದ ಸಂಖ್ಯೆ :–ತೆಆಸ್ಥಾಸ/331/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)60/2011–12, ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಮಾನ್ಯ ಉಪಮಹಾಪೌರರು ಟಿಪ್ಪಣಿ ಬರೆದು ಶ್ರೀ ಆರ್. ಗೋಪಾಲ ಕೃಷ್ಣ, ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು, ಬೆಂಗಳೂರು – 560 001. ಇವರು ನೀಡಿರುವ ಬೀದಿ ದೀಪದ ಬಗ್ಗೆ ಸಂಶೋಧನಾ ವರದಿ ಮತ್ತು ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ಸಂಶೋಧನೆಯನ್ನು ನಡೆಸುತ್ತಿದ್ದು, ಇದಕ್ಕೆ ಆರ್ಥಿಕ ಸಹಾಯವನ್ನು ಕೇಳಿರುತ್ತಾರೆಂದು ತಿಳಿಸುತ್ತಾ, ಇದನ್ನು ಮಹಾನಗರ ಪಾಲಿಕೆ ವತಿಯಿಂದ ನೀಡಲು ಸಾಧ್ಯವಿದ್ದಲ್ಲಿ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಶ್ರೀ ಆರ್. ಗೋಪಾಲ ಕೃಷ್ಣ, ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು ರವರು ಉಪ ಮಹಾಪೌರರಿಗೆ ಮನವಿ ಸಲ್ಲಿಸಿ, ತಾನು 10 ವರ್ಷಗಳಿಂದ ಬೆಂಗಳೂರು ನಗರ ಪರಿಸರ ವಿಜ್ಞಾನದ ಅಧ್ಯಯನ ಮಾಡಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದು ಈಗ ತನ್ನ ಮಾರ್ಗದರ್ಶನದಲ್ಲಿ ಶ್ರೀಮತಿ ಪೂರ್ಣಿಮ ಡಿ.ಎಸ್. ಹಾಗೂ ಶ್ರೀಮತಿ ಬಿ. ನೇತ್ರಾವತಿ ಇವರುಗಳು ಬೆಂಗಳೂರು ನಗರದ ಸೌರಶಕ್ತಿ ಬೀದಿ ದೀಪಗಳ ಕುರಿತು ಅಧ್ಯಯನ ಸಂಶೋಧನೆ ಮಾಡುತ್ತಿದ್ದು, ರಾಯಲಸೀಮಾ ವಿಶ್ವವಿದ್ಯಾನಿಲಯದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಸೌರಶಕ್ತಿ ಬೀದಿ ದೀಪಗಳ ಬಗ್ಗೆ ಪಿ.ಹೆಚ್.ಡಿ. ಪದವಿಗೆ ನೊಂದಾಯಿಸಿದ್ದು ಎರಡು ವರ್ಷಗಳಿಂದ ಇದರ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆಂದು ತಿಳಿಸಿರುತ್ತಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸೌರಶಕ್ತಿ ಬೀದಿ ದೀಪಗಳ ಕುರಿತು ಸಂಶೋಧನ ಅಧ್ಯಯನ ನಡೆಸಲು ರೂ. 5.00 (ಐದು ಲಕ್ಷ ರೂಪಾಯಿಗಳು) ಅನುದಾನವನ್ನು ಮಂಜೂರು ಮಾಡಬೇಕಾಗಿ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ, ಅಧ್ಯಯನ ಪೀಠಗಳಿಗೆ ಅನುದಾನ ನೀಡಲು ನಿರ್ದೇಶನವಿರುತ್ತದೆ. **ಸಂಶೋಧನ ಅಧ್ಯಯನಕ್ಕೆ ಅನುದಾನ ನೀಡುವ ಕುರಿತು ಯಾವುದೇ ನಿರ್ದೇಶನವಿರುವುದಿಲ್ಲ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:** ದಿನಾಂಕ : 07–10–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.1,00,000/– (ಒಂದು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು*

## *09]. ವಿಷಯದ ಸಂಖ್ಯೆ :–ತೆಆಸ್ಥಾಸ/334/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)84/2011–12, ದಿನಾಂಕ : 13–10–2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಶ್ರೀ ಚಂದ್ರ, ಸದಸ್ಯರು ವಾರ್ಡ್ ಸಂಖ್ಯೆ 62, ರಾಮಸ್ವಾಮಿಪಾಳ್ಯ, ಹಾಗೂ ಶ್ರೀ ಬಾಬು, ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಷನ್ ದಂಡು ಪ್ರದೇಶ ರವರುಗಳ ಪತ್ರಗಳನ್ನು ಇದರೊಂದಿಗೆ ಲಗತ್ತಿಸುತ್ತಾ, ಮುನಿರೆಡ್ಡಿ ಪಾಳ್ಯದ ಪೌರಕಾರ್ಮಿಕರು ವಾಸವಾಗಿರುವ ಪ್ರದೇಶದಲ್ಲಿ ಗಂಗಮ್ಮ ದೇವಸ್ಥಾನವಿದ್ದು, ದೇವಸ್ಥಾನದ ವತಿಯಿಂದ ಸುಮಾರು 30 ವರ್ಷಗಳಿಂದ ದಸರಾ ಮಹೋತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಪ್ರತಿ ವರ್ಷದಂತೆ ಈ ವರ್ಷವು ದಸರಾ ಮಹೋತ್ಸವವನ್ನು ಆಚರಿಸಲಾಗಿದ್ದು, ಈ ಕಾರ್ಯಕ್ರಮಕ್ಕೆ ಸುಮಾರು 10.00 ಲಕ್ಷಗಳವರೆಗೆ ವೆಚ್ಚವಾಗಲಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ. 6.00 ಲಕ್ಷಗಳ ಅನುದಾನವನ್ನು ಒದಗಿಸುವಂತೆ ಕೋರಿರುತ್ತಾರೆ. ಈ ಸಂಬಂಧ ರೂ. 4.00 ಲಕ್ಷಗಳ ಅನುದಾನವನ್ನು ಮೇಲಿನ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಅದರಂತೆ ಪರಿಶೀಲಿಸಲಾಗಿ, ಪೂಜ್ಯ ಮಹಾಪೌರರ ಟಿಪ್ಪಣಿಯೊಂದಿಗೆ ಮಾನ್ಯ ನಗರ ಪಾಲಿಕೆ ಸದಸ್ಯರ ಪತ್ರ ಹಾಗೂ ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಶನ್ ದಂಡು ಪ್ರದೇಶ ರವರ ಪತ್ರಗಳು ಮತ್ತು ಕಾರ್ಯಕ್ರಮಗಳ ವಿವರಗಳ ಪಟ್ಟಿ ಮಾತ್ರ ಲಗತ್ತಾಗಿರುತ್ತದೆ.

ಕಳೆದ ಸಾಲಿನ ದಸರಾ ಮಹೋತ್ಸವ ಕಾರ್ಯಕ್ರಮಕ್ಕೆ ಪಾಲಿಕೆ ವತಿಯಿಂದ ಸದರಿ ಪಾಲಿಕೆ ಸದಸ್ಯರ ಹೆಸರಿಗೆ **(2010–11** ನೇ ಸಾಲಿಗೆ) **ರೂ. 2.00 ಲಕ್ಷಗಳ** ಅನುದಾನ/ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ. ಪ್ರಸಕ್ತ 2011–12ನೇ ಸಾಲಿನ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆ ಆಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:** ದಿನಾಂಕ : 13–10–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.2,00,000/– (ಎರಡು ಲಕ್ಷ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.*

## *10]. ವಿಷಯದ ಸಂಖ್ಯೆ :–ತೆಆಸ್ಥಾಸ/349/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)95/2011–12, ದಿನಾಂಕ : 27–10–2011ರಲ್ಲಿ ವಿವರಿಸಿರುವಂತೆ, ಶ್ರೀ ಹೆಚ್. ಆರ್. ಪಾರ್ಥಸಾರಥಿ, ಕಾರ್ಯದರ್ಶಿ, ಕರ್ನಾಟಕ ರಾಜ್ಯೋತ್ಸವ ಸಮಿತಿ, ನೃಪತುಂಗ ಮಂಟಪ, ನಂ. 229, 4ನೇ ಮುಖ್ಯರಸ್ತೆ, ಎಸ್.ಬಿ.ಎಂ. ಬ್ಯಾಂಕ್ ಎದುರು, ಚಾಮರಾಜಪೇಟೆ, ಬೆಂಗಳೂರು – 560 018 ರವರು ಮನವಿ ಸಲ್ಲಿಸಿ, ಪ್ರತಿ ವರ್ಷದಂತೆ ಈ ವರ್ಷವೂ "ಕರ್ನಾಟಕ ರಾಜ್ಯೋತ್ಸವ"ವನ್ನು ನವೆಂಬರ್ 1 ರಂದು ಮೈಸೂರು ಬ್ಯಾಂಕ್

ಹತ್ತಿರ ಇರುವ ನೃಪತುಂಗ ಮಂಟಪದಲ್ಲಿ ಆಚರಿಸುತ್ತಿದ್ದು, ಪ್ರತೀ ವರ್ಷವೂ ಕರ್ನಾಟಕ ರಾಜ್ಯೋತ್ಸವಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಹಾಯಧನವನ್ನಾಗಿ ನೀಡುತ್ತಿದ್ದೀರೆಂದು ಕಳೆದ ವರ್ಷವೂ ಸೇರಿದಂತೆ, ಈ ವರ್ಷವೂ ಕರ್ನಾಟಕ ರಾಜ್ಯೋತ್ಸವವನ್ನು ವೈಭವವಾಗಿ ಆಚರಿಸುವುದರಿಂದ ಪಾಲಿಕೆಯಿಂದ ರೂ. 25.00 ಲಕ್ಷಗಳನ್ನು ಸಹಾಯ ಧನವಾಗಿ ನೀಡಬೇಕಾಗಿ ಕೋರಿರುತ್ತಾರೆ.

ಸದರಿಯವರಿಗೆ 2008–09 ನೇ ಸಾಲಿನಲ್ಲಿ ರೂ. 5.00 ಲಕ್ಷಗಳ ಅನುದಾನ ಬಿಡುಗಡೆ ಯಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ**, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## ***11]. ವಿಷಯದ ಸಂಖ್ಯೆ :–ತೆಆಸ್ಥಾಸ/353/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)101/2011–12, ದಿನಾಂಕ : 02–11–2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಭಾರತ ವಿಕಾಸ ಪರಿಷದ್, ನಂ. 172, ಕವಿ ಲಕ್ಷ್ಮೀಶ ರಸ್ತೆ, ವಿ.ವಿ.ಪುರಂ, ಬೆಂಗಳೂರು – 4 ರವರು ಸಲ್ಲಿಸಿರುವ ಮನವಿಯನ್ನು ಲಗತ್ತಿಸುತ್ತಾ, ಸದರಿ ಸಂಘವು ಸಾಮಾಜಿಕ, ಸಾಂಸ್ಕೃತಿಕ ಸೇವಾ ಸಂಸ್ಥೆಯಾಗಿದ್ದು, ಜನರಲ್ಲಿ ದೇಶ ಪ್ರೇಮ, ಭಾರತೀಯತೆ ಮತ್ತು ಸ್ವಾಭಿಮಾನವನ್ನು ಉದ್ದೀಪಿಸುವುದು ಹಾಗೂ ರಾಷ್ಟ್ರೀಯ ಸಮೂಹ ಗಾಯನ, ರಸಪ್ರಶ್ನೆ ಕಾರ್ಯಕ್ರಮ, ಗುರುವಂದನಾ ಛಾತ್ರಾ, ವಿಕಾಲಾಂಗಿಗೆ ಸಹಾಯ ಹಾಗೂ ಪುನರ್ ವಸತಿ ಯೋಜನೆ, ಗ್ರಾಮ ವಿಕಾಸ ಯೋಜನೆ, ಉಚಿತ ಕಣ್ಣಿನ ತಪಾಸಣೆ/ಚಿಕಿತ್ಸಾ ಶಿಬಿರ ಇತ್ಯಾದಿಗಳನ್ನು ನಡೆಸಿಕೊಂಡು ಬರುತ್ತಿದ್ದು, ಸುಮಾರು 25 ವರ್ಷಗಳನ್ನು ಕಳೆದಿದ್ದು ರಜತ ಮಹೋತ್ಸವ ಕಾರ್ಯಕ್ರಮವನ್ನು ನಡೆಸಲು ಉದ್ದೇಶಿಸಿದ್ದು ಇದಕ್ಕೆ ಲಕ್ಷಾಂತರ ರೂಪಾಯಿಗಳ ವೆಚ್ಚವಾಗಲಿದ್ದು, ಪಾಲಿಕೆ ವತಿಯಿಂದ ರೂ. 10.00 ಲಕ್ಷಗಳ ಧನ ಸಹಾಯ ಕೋರಿರುತ್ತಾರೆಂದು ತಿಳಿಸಿ, ಸದರಿ ಭಾರತ ವಿಕಾಸ ಪರಿಷದ್ ಕರ್ನಾಟಕ ಇದಕ್ಕೆ ಧನ ಸಹಾಯ ಮಂಜೂರು ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ**, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:*** *ದಿನಾಂಕ : 02–11–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.10,000/– (ಹತ್ತು ಸಾವಿರ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು*

## *12]. ವಿಷಯದ ಸಂಖ್ಯೆ :–ತೆಆಸ್ಥಾಸ/370/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 05–11–2011ರಲ್ಲಿ ವಿವರಿಸಿರುವಂತೆ, Improvement to Roads and Drains in Swathntra nagara of K.R.Pura Sub div.in 47 (Est. Rs.100.00 lakhs). 2009–10ನೇ ಸಾಲಿನಲ್ಲಿ ಶೇ.22.75 ಅನುದಾನದಡಿ ನೀಡಲಾಗುತ್ತಿದ್ದ 047-10-N-W-E-R-IM-001. ಕಾಮಗಾರಿ ಸಂಕೇತವನ್ನು ರದ್ದುಪಡಿಸಿ 2010–11ನೇ ಸಾಲಿನಲ್ಲಿ 3 ಬದಲಿ ಕಾಮಗಾರಿಗಳನ್ನು ಕೈಗೊಳ್ಳುವುದರ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು, ಸಮಿತಿಯು ವಿಷಯದ ಸಂಖ್ಯೆ 258/2010–11 ದಿನಾಂಕ 14–03–2011 ರ ನಡವಳಿಯಲ್ಲಿ 2009–10ರ ಹಳೆ ಕಾಮಗಾರಿಯನ್ನು ನಿರ್ವಹಿಸಲು ತೀರ್ಮಾನಿಸಿದೆ.

ಪ್ರಸ್ತುತ ಶ್ರೀಮತಿ.ಕೆ.ಪೂರ್ಣಿಮ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ 53 ಇವರು ಪತ್ರ ನೀಡಿ ಸದರಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮರು ಮಂಡಿಸಲು ಕೋರಿರುತ್ತಾರೆ.

ಸದರಿ ಪ್ರಸ್ತವನೆಯನ್ನು 2011–12ನೇ ಸಾಲಿನ ಕರಡು ಆಯವ್ಯಯದ ಪುಟ ಸಂಖ್ಯೆ (171) ರಲ್ಲಿ ಪಿ1878 "ಶೇ.22.75% ಕಾಮಗಾರಿಗಳು ಪಿ1878" ಲೆಕ್ಕಶೀಷಿಕೆಯಡಿ ಮುಂದುವರೆದ ಕಾಮಗಾರಿಗಳು ಅಡಿ ಮೀಸಲಿರಿಸಿರುವ ರೂ.15030.00 ಲಕ್ಷಗಳಲ್ಲಿ 3 ಬದಲಿ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.100.00 ಲಕ್ಷಗಳಿಗೆ ಅನುಮೋದನೆ ಹಾಗೂ ಜಾಬ್ ನಂಬರ್ ನೀಡುವ ಬಗ್ಗೆ ಮರು ಪರಿಶೀಲಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

| Sl No | Name of Work | Est. Amount |
|---|---|---|
| 1 | Construction of CC Drain & Road at Chikkadevasandra in Basavanapura in W.N.53. | Rs.50.00 lakhs |
| 2 | Construction of CC Drain & Road at Rajivnagar in Basavanapura in W.N.53. | Rs.25.00 lakhs |
| 3 | Construction of CC Drain & Road at Priyankanagra in Basavanapura in W.N.53. | Rs.50.00 lakhs |

***ನಿರ್ಣಯ :*** ***ದಿನಾಂಕ : 05–11–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿತ ವಿಷಯದ ಬಗ್ಗೆ ಈಗಾಗಲೇ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ನಿರ್ಣಯ ಕೈಗೊಂಡಿರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## *13]. ವಿಷಯದ ಸಂಖ್ಯೆ :–ತೆಆಸ್ಥಾಸ/376/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)103/2011–12, ದಿನಾಂಕ : 05–11–2011ರಲ್ಲಿ ವಿವರಿಸಿರುವಂತೆ, ಶ್ರೀ ಜಿ. ಮಂಜುನಾಥ್ ರಾಜು, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮನವಿ ಸಲ್ಲಿಸಿ, ಮಾನ್ಯ ಉಪ ಮಹಾಪೌರರ ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ತಮ್ಮ ಪತ್ರದಲ್ಲಿ ಶ್ರೀಮತಿ ರೂಪಾ ಐಯ್ಯರ್, ವ್ಯವಸ್ಥಾಪಕರ ನಿರ್ದೇಶಕರು, ಇಂಡಿಯಾ ಕ್ಲಾಸಿಕ್ ಆರ್ಟ್ಸ್, ನಂ. 11, 1ನೇ ಕ್ರಾಸ್, 7ನೇ ಮುಖ್ಯರಸ್ತೆ, 7ನೇ ಬ್ಲಾಕ್, 4ನೇ ಹಂತ, ಬನಶಂಕರಿ 3ನೇ ಹಂತ, ಬೆಂಗಳೂರು – 560085. ವತಿಯಿಂದ ಯೂರೋಪ್ ದೇಶದಲ್ಲಿ ಪ್ರಪ್ರಥವಾಗಿ ವಿಶ್ವ ಕನ್ನಡ ಸಮ್ಮೇಳನ ಯೂರೋಪ್ 2011 ಎಂಬ ಕಾರ್ಯಕ್ರಮವನ್ನು 2011 ಅಕ್ಟೋಬರ್ 22 ಮತ್ತು 23 ರಂದು ನಡೆಸಲು ಉದ್ದೇಶಿಸಿರುವ ಮೇರೆಗೆ ಸದರಿ ಕನ್ನಡ ಕಾರ್ಯಕ್ರಮವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರು. 10.00 ಲಕ್ಷ ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸಿ, ಇಂಡಿಯಾ ಕ್ಲಾಸಿಕ್ ಆರ್ಟ್ಸ್ ರವರಿಗೆ ತುರ್ತಾಗಿ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ. 5.00 ಲಕ್ಷ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸಮಿತಿಯ ಮುಂದೆ ಸೂಕ್ತ ಟಿಪ್ಪಣಿಯನ್ನು ಮಂಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## 14]. ವಿಷಯದ ಸಂಖ್ಯೆ :–ತೆಆಸ್ಥಾಸ/379/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)100/2011–12, ದಿನಾಂಕ : 05–11–2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ದಯಾನಂದ್, ಮಾಜಿ ಉಪ ಮಹಾಪೌರರು ಮನವಿ ಸಲ್ಲಿಸಿ, ಲಾಲ್ ಬಹದ್ದೂರ್ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ರಿ) ನಂ. 56, ಮಾನಸ ನಿಲಯ, 3ನೇ 'ಎ' ಕ್ರಾಸ್, ಲಾಲ್ ಬಹದ್ದೂರ ನಗರ, ಬೆಂಗಳೂರು – 43 ಸಂಘವು ಸರ್ಕಾರದಲ್ಲಿ ನೊಂದಣಿಯಾಗಿರುತ್ತದೆ ಮತ್ತು ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ. ಅವರುಗಳಿಗೆ ಖರ್ಚಾಗಿರುವುದು ಸಹ ನನಗೆ ದೃಢವಾಗಿರುತ್ತದೆ. ಆದುದರಿಂದ ತಾವುಗಳು ಮೇಲ್ಕಾಣಿಸಿದ ಸಂಘಕ್ಕೆ ಅನುದಾನದ ಅಡಿಯಲ್ಲಿ ಈ ಹಣವನ್ನು ಮಂಜೂರು ಮಾಡಬಹುದು ಈ ಹಣದಿಂದ ಇನ್ನೂ ಹೆಚ್ಚಿನ ಉತ್ಸಾಹದಿಂದ ಕಾರ್ಯಕ್ರಮ ಸಾಮಾಜಿಕ ಕಾರ್ಯಕ್ರಮಗಳನ್ನು ಮತ್ತೆ ನಮ್ಮ ಲಾಲ್ ಬಹದ್ದೂರ ನಗರದ ನಿವಾಸಿಗಳಿಗೆ ಅನುಕೂಲ ಆಗುವ ರೀತಿಯಲ್ಲಿ ನಡೆದುಕೊಳ್ಳುತ್ತಾರೆಂದು ಆದುದರಿಂದ ಪಾಲಿಕೆಯು ಇಂತಹ ಸ್ವಯಂ ಪ್ರೇರಿತ ಸಂಘ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡಬೇಕು ಹಾಗೂ ಸಹಾಯ ಧನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪ್ರಧಾನ ಕಾರ್ಯದರ್ಶಿ, ಲಾಲ್ ಬಹದ್ದೂರ್ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ರಿ) ರವರು ಮನವಿ ಸಲ್ಲಿಸಿ, ತಮ್ಮ ಸಂಘದ ವತಿಯಿಂದ ದಿ: 15.08.2011 ರಂದು 750 ಬಡವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಣೆ, ಪ್ರೋತ್ಸಾಹಧನ, ಹಾಗೂ ಕಿಡ್ನಿ ವೈಪಲ್ಯದಿಂದ ಬಳಲುತ್ತಿರುವ ವಿದ್ಯಾರ್ಥಿಗೆ ರೂ. 10,000/– ಸಹಾಯಧನ ಹಾಗೂ ಗಾಂಧಿ ಜಯಂತಿ ಅಂಗವಾಗಿ ಕ್ರೀಡಾ ಸ್ಪರ್ಧೆಗಳನ್ನು ನಡೆಸಿರುವುದಾಗಿ ತಿಳಿಸಿ ಪಾಲಿಕೆ ವತಿಯಿಂದ ರೂ. 4.00 ಲಕ್ಷಗಳ ಧನ ಸಹಾಯ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ: ದಿನಾಂಕ : 05–11–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.10,000/– (ಹತ್ತು ಸಾವಿರ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## 15]. ವಿಷಯದ ಸಂಖ್ಯೆ :–ತೆಆಸ್ಥಾಸ/386/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ/ಆ)ಪಿಎಸ್‌ಆರ್(4)20/11–12, ದಿನಾಂಕ : 19–11–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಎನ್. ವೀರಣ್ಣ ಕೆ.ಆರ್. ಪುರಂ, ವಾರ್ಡ್ ಸಂಖ್ಯೆ–52 ರ ಸದಸ್ಯರು ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರು ಆದ ಇವರು ತಮ್ಮ ಪತ್ರದಲ್ಲಿ ಆಂಜನೇಯಸ್ವಾಮಿ ದೇವಸ್ಥಾನ ನವ ನಿರ್ಮಾಣ ಟ್ರಸ್ಟ್, ಬೆಂಗಳೂರು ರವರು ತಮ್ಮ ಪತ್ರದಲ್ಲಿ ಕೋರಿರುವಂತೆ ದೇವಸ್ಥಾನದ ವಾರ್ಷಿಕ ಕಾರ್ಯಕ್ರಮಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ. 2.00 ಲಕ್ಷಗಳ ಸಹಾಯಧ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸುತ್ತಾ "ಆಂಜನೇಯಸ್ವಾಮಿ ದೇವಸ್ಥಾನ ನವ ನಿರ್ಮಾಣ ಟ್ರಸ್ಟ್" ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 1.00 ಲಕ್ಷ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

2010–11 ನೇ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ: 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು

ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ಈಗಾಗಲೇ ಹಂಚಿಕೆಯಾಗಿದ್ದು, ಸಹಾಯಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯವಿರುವುದಿಲ್ಲ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 22-03-2011 ರ ಸಭೆಯ ತೀರ್ಮಾನದಂತೆ ಕ್ರ.ಸಂ. (41) ರಲ್ಲಿ ಸಂಘ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನಕ್ಕಾಗಿ ರೂ. 100.00 ಲಕ್ಷಗಳ ಮರು ಹೊಂದಾಣಿಕೆ ಮಾಡಿಕೊಂಡು 2010-11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

2010-11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011-12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:*** ***ದಿನಾಂಕ : 19-11-2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.1,00,000/- (ಒಂದು ಲಕ್ಷ) ಗಳ ಅನುದಾನವನ್ನು ಮಂಜೂರುಮಾಡುವುದೆಂದು ಸಮಿತಿಯು ತೀರ್ಮಾನಿಸಿತು***

## ***16]. ವಿಷಯದ ಸಂಖ್ಯೆ :-ತೆಆಸ್ಥಾಸ/387/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್‌ಆರ್(4)23/11-12, ದಿನಾಂಕ : 16-11-2011 ರಲ್ಲಿ ವಿವರಿಸಿರುವಂತೆ, ಶ್ರೀ ಲೋಕೇಶ್ವರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಡಾಡ್ಜ್ ಬಾಲ್ ಸಂಸ್ಥೆ (ರಿ), ನಂ. ಎಂ54, 9ನೇ 'ಬಿ' ಮುಖ್ಯರಸ್ತೆ, ಎಲ್.ಐ.ಸಿ. ಕಾಲೋನಿ, ಜೀವನ್ ಭೀಮಾನಗರ, ಬೆಂಗಳೂರು – 560 075 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಕರ್ನಾಟಕ ರಾಜ್ಯ ಡಾಡ್ಜ್‌ಬಾಲ್ ಸಂಸ್ಥೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ದಿನಾಂಕ 28-04-2011 ರಿಂದ 30-04-2011 ರವರೆಗೆ ಐದನೇ ರಾಷ್ಟ್ರೀಯ ಕಿರಿಯರ ಡಾಡ್ಜ್‌ಬಾಲ್ ಪಂದ್ಯಾವಳಿಗಳನ್ನು ಸಹಕಾರ ನಗರದ ಕೊಡಿಗೇಹಳ್ಳಿಯಲ್ಲಿರುವ ಬಿ.ಬಿ.ಎಂ.ಪಿ. ಆಟದ ಮೈದಾನದಲ್ಲಿ ಆಯೋಜಿಸಲಾಗಿದ್ದು ಪಂದ್ಯಾವಳಿಗಳಲ್ಲಿ ಭಾರತದ ಇತರೆ ರಾಜ್ಯಗಳಿಂದ 19 ಬಾಲಕರ ಮತ್ತು 18 ಬಾಲಕಿಯರ ತಂಡಗಳು ಒಟ್ಟು 37 ತಂಡಗಳು ಭಾಗವಹಿಸಿದ್ದವು. ಈ ಪಂದ್ಯಾವಳಿಗಳನ್ನು ಆಯೋಜಿಸಲು ರೂ. 9,35,000/- ಗಳು ವೆಚ್ಚವಾಗಿದ್ದು, ಈ ಪಂದ್ಯಾವಳಿಗಳಿಗೆ ವಸತಿ ವ್ಯವಸ್ಥೆ ಊಟದ ವ್ಯವಸ್ಥೆ ಪ್ರೇಕ್ಷಕರು ಕುಳಿತುಕೊಳ್ಳಲು ಆಸನದ ವ್ಯವಸ್ಥೆ, ಧ್ವನಿ ವರ್ಧಕ ಮತ್ತು ಇತರೆ ವೆಚ್ಚಗಳು ರೂ. 5,00,000/- ಭರಿಸಬೇಕಾಗಿರುವುದರಿಂದ ತಮ್ಮ ಸಂಸ್ಥೆಯ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲವಾದ್ದರಿಂದ ಪಾಲಿಕೆಯ ವತಿಯಿಂದ ಐದು ಲಕ್ಷ ರೂ.ಗಳ ಆರ್ಥಿಕ ನೆರವನ್ನು ಕೋರಿ ಈ ಹಿಂದೆಯೇ ಮನವಿ ಸಲ್ಲಿಸಲಾಗಿತ್ತು. ಆದುದರಿಂದ ಪಾಲಿಕೆಯ ವತಿಯಿಂದ ಆರ್ಥಿಕ ಧನ ಸಹಾಯವನ್ನು ಶೀಘ್ರವಾಗಿ ಬಿಡುಗಡೆ ಮಾಡಬೇಕಾಗಿ ಕೋರಿರುತ್ತಾರೆ.

ಶ್ರೀ ಎಸ್. ಆರ್. ವಿಶ್ವನಾಥ್, ಮಾನ್ಯ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ, ಬೆಂಗಳೂರು ನಗರ ಜಿಲ್ಲೆ ರವರು ಹಾಗೂ ಶ್ರೀ ಅಶ್ವತ್ಥ ನಾರಾಯಣ ಗೌಡ, ಮಾನ್ಯ ಸದಸ್ಯರು, ವಾರ್ಡ್-8 (ಕೊಡಿಗೇಹಳ್ಳಿ) ರವರು ಪತ್ರ ಬರೆದು ಸದರಿಯವರಿಗೆ ರೂ. 5.00 ಲಕ್ಷಗಳನ್ನು ಪಾಲಿಕೆಯ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ನೀಡಲು ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ **ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ,** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:*** ***ದಿನಾಂಕ : 16-11-2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.25,000/- (ಇಪ್ಪತ್ತೈದು ಸಾವಿರ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *17]. ವಿಷಯದ ಸಂಖ್ಯೆ :–ತೆಆಸ್ಥಾಸ/391/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 23.11.2011. ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 160ರ ವ್ಯಾಪ್ತಿಯಲ್ಲಿ ಗಟ್ಟಿಗೆರೆ ಸ್ಮಶಾನಕ್ಕೆ ಆರ್.ಸಿ.ಸಿ ತಡೆಗೋಡೆ ಮತ್ತು ಸ್ಮಶಾನದ ರಸ್ತೆಗೆ ಚರಂಡಿ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ. 13.80 ಲಕ್ಷಗಳಿಗೆ 2011–12 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0486" ಅಡಿ ಅನುಮೋದನೆ ನೀಡಲು ಹಾಗೂ ಜಾಬ್ ಸಂಖ್ಯೆ ನೀಡಲು ಮಂಡಿಸಲಾಗಿದೆ.

2011–12 ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ 100 ರಲ್ಲಿ ಲೆಕ್ಕಶೀರ್ಷಿಕೆ ಪಿ0486 ಸ್ಮಶಾನ ಮತ್ತು ಶವ ಸುಡುವ ಸ್ಥಳಗಳ ನಿರ್ವಹಣೆ ಮತ್ತು ದುರಸ್ಥಿ ( ಪ್ರತಿ ವಲಯ ರೂ. 25.00 ಲಕ್ಷದಂತೆ) ರೂ. 200.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಪ್ರತಿ ವಲಯಕ್ಕೆ ರೂ. 25.00 ಲಕ್ಷದಂತೆ ಅನುದಾನ ಮೀಸಲಿರಿಸಲಾಗಿದೆ.

ಮೇಲ್ಕಂಡ ಲೆಕ್ಕಶೀರ್ಷಿಕೆಯಡಿ ರಾಜರಾಜೇಶ್ವರಿನಗರ ವಲಯಕ್ಕೆ ಲಭ್ಯವಾಗುವ ಅನುದಾನ ರೂ. 25.00 ಲಕ್ಷಗಳಲ್ಲಿ ಮೇಲ್ಕಂಡ ಕಾಮಗಾರಿಯ ಅಂದಾಜು ಮೊತ್ತ ರೂ. 13.80 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ0486 ರ ಕಾರ್ಯಕ್ರಮ ಪಟ್ಟಿಗೆ ಸೇರಿಸಿಕೊಂಡು ಅನುಷ್ಟಾನಗೊಳಿಸುವ ಬಗ್ಗೆ ಹಾಗೂ ಜಾಬ್ ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ : 23–11–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ***

## *18]. ವಿಷಯದ ಸಂಖ್ಯೆ :–ತೆಆಸ್ಥಾಸ/393/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)72/11–12, ದಿನಾಂಕ : 19.11.2011. ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು, ಟಿಪ್ಪಣಿ ಬರೆದು ಶ್ರೀ ಕೆ. ಹೆಚ್. ರಾಮಲಿಂಗಾ ರೆಡ್ಡಿ, ಅಧ್ಯಕ್ಷರು, ಕರ್ನಾಟಕ ಭ್ರಷ್ಟಾಚಾರ ನಿರ್ಮೂಲನಾ ವೇದಿಕೆ (ರಿ), ಕೆ.ಎಸ್. ಹಳ್ಳಿ, ಕನ್ನಮಂಗಲ ಅಂಚೆ, ಬೆಂಗಳೂರು – 560 067. ರವರು ನೀಡಿರುವ ಮನವಿ ಮತ್ತು ದಾಖಲೆಗಳನ್ನು ಲಗತ್ತಿಸುತ್ತಾ ಸದರಿಯವರು ದಿನಾಂಕ 22–09–2011 ರಂದು ನಗರದ ಗಾಂಧಿ ಭವನದಲ್ಲಿ ಚುನಾವಣಾ ಸಮಗ್ರ ಸುಧಾರಣೆಗಳು ಎಂಬ ವಿಷಯದ ಮೇಲೆ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದು, ಈ ವಿಚಾರಣಾ ಸಂಕಿರಣದಲ್ಲಿ ಚರ್ಚಿಸಲು ಕಾನೂನು ತಜ್ಞರು, ನ್ಯಾಯಾಧೀಶರು, ಬುದ್ಧಿ ಜೀವಿಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಸುಮಾರು ರೂ. 3,33,000/– ಗಳ ವೆಚ್ಚವಾಗಲಿದೆ ಎಂದು ಅಂದಾಜು ವಿವರಗಳನ್ನು ತಿಳಿಸಿ, ಮಹಾನಗರ ಪಾಲಿಕೆಯಿಂದ ಸಹಾಯ ಅನುದಾನ ನೀಡುವಂತೆ ಕೋರಿರುತ್ತಾರೆಂದು ತಿಳಿಸಿ, ಸಾಮಾಜಿಕ ಪರಿವರ್ತನೆಯ ಹಿತದೃಷ್ಠಿಯಿಂದ ಇಂತಹ ವಿಚಾರ ಸಂಕಿರಣಗಳು ಇವತ್ತಿನ ದಿವಸಗಳಲ್ಲಿ ಅವಶ್ಯಕವೆನಿಸುತ್ತದೆ, ಮೇಲ್ಕಂಡ ಕಾರ್ಯಕ್ರಮಕ್ಕೆ ಅತಿಥಿಗಳ ಗೌರವ ಧನಕ್ಕೆ ತಗಲುವ ವೆಚ್ಚ ರೂ. 39,000/– ಗಳನ್ನು ಪಾಲಿಕೆ ವತಿಯಿಂದ ಭರಿಸುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ**, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ : ದಿನಾಂಕ : 19–11–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.10,000/– (ಹತ್ತು ಸಾವಿರ) ಗಳ ಅನುದಾನವನ್ನು ಮಂಜೂರುಮಾಡುವುದೆಂದು ಸಮಿತಿಯು ತೀರ್ಮಾನಿಸಿತು***

## *19]. ವಿಷಯದ ಸಂಖ್ಯೆ :–ತೆಲಆಸ್ಥಾಸ/395/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿಬಿಎಂಪಿ(ಆಕ)ಸಂಖ್ಯೆ : 734/ಕ.ಅ.ಸೇ/11–12, ದಿನಾಂಕ : 22–11–2011ರಲ್ಲಿ ವಿವರಿಸಿರುವಂತೆ, ಶ್ರೀ. ಟಿ.ಎನ್.ಜಗನ್ನಾಥ್ ರಾವ್ # 164, 16ನೇ ಕ್ರಾಸ್, 5ನೇ ಹಂತ, ಜೆ.ಪಿ.ನಗರ, ಬೆಂ–78. ರವರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಮನವಿ ಸಲ್ಲಿಸಿ, ಸದರಿಯವರು ನನ್ನ ಮಗಳಾದ ಕು॥ ಟಿ.ಜೆ.ನಿವೇದಿತಾ ಹುಟ್ಟಿನಿಂದಲೆ ಅಂಗವಿಕಲತೆ, ಅವಳಿಗೆ ಕಿವಿ ಕೇಳುವುದಿಲ್ಲ, ಮಾತು ಬರುವುದಿಲ್ಲ, ಬುದ್ಧಿ ಮಾಂದ್ಯತೆ ಮತ್ತು ಸ್ಪಾಷ್ಟಿಕ್ (Spastic-Left side) ಎಡ ಭಾಗ. ಈ ಎಲ್ಲಾಅಂಗವಿಕಲತೆ ಇದ್ದರೂ ಸಹ ನಿವೇದಿತ ಭರತನಾಟ್ಯವನ್ನು ಕಲಿತಿದ್ದಾಳೆ. ಅವಳ ವಿದ್ಯಾಭ್ಯಾಸ 4ನೇ ತರಗತಿಯವರೆಗೆ, ಅವಲು ಇನ್ನೊಬ್ಬರ ಸಹಾಯವಿಲ್ಲದೆ ಎಲ್ಲೂ ಹೋಗುವ ಹಾಗಿಲ್ಲ.

ನನ್ನ ಸಹೋದರಿ ಸುಭದ್ರ ಪ್ರಭು, ಭರತನಾಟ್ಯ ಕಲಿಸುವ ಶಾಲೆಯನ್ನು ನಡೆಸುತ್ತಿರುತ್ತಾರೆ. ನನ್ನ ಹೆಂಡತಿ ರಮಾ ಜನಗನ್ನಾಥ್, ಪ್ರಖ್ಯಾತ ಗಾಯಕಿ ಹಾಗೂ ಭರತನಾಟ್ಯ ಕಲಾವಿದೆ. ಇವರು ಕೂಚಿಪುಡಿ, ಆಂಧ್ರ ನಾಟ್ಯ ಹಾಗೂ ಭರತನಾಟ್ಯಗಳಿಗೆ ಹಿನ್ನೆಲೆ ಸಂಗೀತ ಸಹಕಾರ ನೀಡುತ್ತಿರುತ್ತಾರೆ. ಇವರುಗಳ ಮಾರ್ಗದರ್ಶನದಲ್ಲಿ ನಿವೇದಿತಾ ಭರತನಾಟ್ಯ ಅಭ್ಯಾಸ ಮಾಡುತ್ತಿರುತ್ತಾಳೆ.

ನಿವೇದಿತಾಳಿಗೆ ಈ ಎಲ್ಲಾ ಅಂಗವೈಕಲ್ಯತೆಗಳಿದ್ದರೂ, ಭರತನಾಟ್ಯ ಕಲಿತಿದ್ದಾಲೆ. ನಿವೇದಿತಾ ತನ್ನ 8ನೇ ವಯಸ್ಸಿನಿಂದ ನೃತ್ಯ ಕಾರ್ಯಕ್ರಮ ನೀಡುತ್ತಿದ್ದಾಳೆ. ಇಲ್ಲಿಯವರೆಗೆ ಸುಮಾರು 60ಕ್ಕೂ ಹೆಚು ನೃತ್ಯ ಕಾರ್ಯಕ್ರಮವನ್ನು ನೀಡಿದ್ದಾಳೆ. ನಿವೇದಿತಾಳ ಭರತನಾಟ್ಯ ರಂಗ ಪ್ರವೇಶ ದಿನಾಂಕ : 07–04–2007 ರಂದು ಎ.ಡಿ.ಎ.ರಂಗಮಂದಿರದಲ್ಲಿ ನೆರವೇರಿತು.

ಇವಳ ಸಾಧನೆಯನ್ನು ಪರಿಗಣಿಸಿ ಭಾರತ ಸರ್ಕಾರ ಇವಳಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ದಿನಾಂಕ : 03–12–2007ರ ವಿಶ್ವ ಅಂಗವಿಕಲ ದಿನದಂದು ನೀಡಿ ಗೌರವಿಸಿದೆ. ಅದೇ ದಿನ ಅಂದರೆ ನಮ್ಮ ಘನ ಕರ್ನಾಟಕ ಸರ್ಕಾರ ಸಹ ನಿವೇದಿತಾಳಿಗೆ ದಿನಾಂಕ : 03–12–2007 ರಂದು ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಕರ್ನಾಟಕ ಸಕಾರವು ನಿವೇದಿತಾಳಿಗೆ 2009ನೇ ಸಲಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಮೇಲಿನ ಪ್ರಶಸ್ತಿಯನ್ನಲ್ಲದೇ ನಿವೇದಿತಾ ಹತ್ತು ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದಾರೆ. ನಿವೇದಿತಾಳ ಈ ಎಲ್ಲಾ ಸಾಧನೆಯನ್ನು ಪರಿಗಣಿಸಿ ತಮ್ಮ ಘನ ಇಲಾಖೆಯ ವತಿಯಿಂದ ನೃತ್ಯ ಕಾರ್ಯಕ್ರಮಕ್ಕೆ ಅವಕಾಶ ನೀಡಬೇಕೆಂದು ಹಾಗೂ ಇದಕ್ಕಾಗಿ ರೂ.50,000– ಗಳ ಅನುದಾನವನ್ನು ನೀಡಲು ಕೋರಿರುತ್ತಾರೆ.

ಅಭ್ಯರ್ಥಿಯು ಹುಟ್ಟಿನಿದಲೂ ಅಂಗವಿಕಲತೆಯಾಗಿದ್ದು, ಇವರು ಸಾಧನೆ ಮಾಡಿರುವ ಎಲ್ಲಾ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂದಿಸಿದಂತೆ, ಕಲ್ಯಾನ ಕಾರ್ಯಕ್ರಮದ ಮಾರ್ಗಸೂಚಿಯ ಪ್ರಕಾರ ಅಂಗವಿಕಲರಿಗೆ ಉಪಕರಣಗಳನ್ನು ಒದಗಿಸುವುದು ಹಾಗೂ ಅಂಗವಿಕಲರ ಸೇವಾಕೇಂದ್ರಗಳಿಗೆ ಮತ್ತು ಬುದ್ಧಿಮಾಂಧ್ಯ ಮಕ್ಕಳಿಗೆ ಪ್ರೋತ್ಸಾಹಧನ ಮಾತ್ರ ನೀಡಬಹುದಾಗಿರುತ್ತದೆ, ಆದರೆ ನೃತ್ಯ ಕಾರ್ಯಕ್ರಮ ಹಾಗೂ ನೃತ್ಯ ಕಾರ್ಯಕ್ರಮಕ್ಕೆ ಸಹಾಯಧನದ ಅವಕಾಶ ನೀಡುವ ಕಾರ್ಯಕ್ರಮವಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 22–11–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.25,000/– (ಇಪ್ಪತ್ತೈದು ಸಾವಿರ) ಗಳ ಅನುದಾನವನ್ನು ಮಂಜೂರುಮಾಡುವುದೆಂದು ಸಮಿತಿಯು ತೀರ್ಮಾನಿಸಿತು***

## *20]. ವಿಷಯದ ಸಂಖ್ಯೆ :–ತೆಲಆಸ್ಥಾಸ/434/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)/ಪಿಆರ್/267/11–12, ದಿನಾಂಕ: 19–01–2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್–119, ಅರ್ಮುಗಂ ಮೊದಲಿಯಾರ್ ರಸ್ತೆ, ಕಲಾಸಿಪಾಳ್ಯಂನಲ್ಲಿ ಅವರುಗಳ ಸ್ವತ್ತಿಗೆ ಲಗತ್ತಾದಂತೆ (ಮಾರ್ಜಿನಲ್ ಲ್ಯಾಂಡ್) ಇರುವ ಜಾಗ ಕ್ರಯಕ್ಕೆ ನೀಡುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಎಂಎ 21 ಎಂಎನ್‌ಜಿ 76 ದಿನಾಂಕ 23–6–1976ರಲ್ಲಿ ಈ ಕೆಳಕಂಡವರಿಗೆ ಚದರ ಗಜ 1ಕ್ಕೆ ರೂ.150/–ರಂತೆ ಮಾರಾಟ ಮಾಡಲು ಆದೇಶವಾಗಿರುತ್ತದೆ.

1. ಶ್ರೀ ಅಬ್ದುಲ್ ಬಾಸಿತ್ : 13.6 x 19
2. ಶ್ರೀ ಬಿ.ಹೆಚ್. ಹರಿರಾಜ ರಾವ್ : $\frac{42+39}{2} \times \frac{22+19}{2}$
3. ಶ್ರೀ ಸೈಯದ್ ಮುಶ್ತಾಕ್ ಅಹಮದ್ : 13.6 x 19

ಈ ಮೇಲ್ಕಂಡ ಮೂರು ಜನರು ಹಣವನ್ನು ಸಂದಾಯ ಮಾಡಿದ್ದು ಕ್ರಮ ಸಂಖ್ಯೆ: 1 ಮತ್ತು 2 ಇವರು ಪಾಲಿಕೆ ವತಿಯಿಂದ ಕ್ರಯ ಪತ್ರ ಪಡೆದಿರುತ್ತಾರೆ. ಕ್ರಮ ಸಂಖ್ಯೆ: 3 ಶ್ರೀ ಸೈಯದ್ ಮುಶ್ತಾಖ್ ಅಹ್ಮದ್ ರವರಿಗೆ ಕ್ರಯ ಪತ್ರವಾಗಿರುವುದಿಲ್ಲ. ಕಾರಣ ಸ್ಥಳೀಯರಾದ ಪ್ಯಾರೇಜಾನ್ ಎಂಬುವರು ನ್ಯಾಯಾಲಯದಲ್ಲಿ ಓಎಸ್ ಸಂಖ್ಯೆ: 10701/91 ದಾವೆ ಹೂಡಿದ್ದು, ಶ್ರೀ ಸೈಯದ್ ಮುಶ್ತಾಖ್ ಅಹಮದ್ ರವರಿಗೆ ಮಂಜೂರಾಗಿರುವ ಜಾಗ ಅವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿರುತ್ತದೆ. ಗುತ್ತಿಗೆಯ ಅವದಿಯು ಮುಗಿದಿರುವುದರಿಂದ ಹಾಗೂ ಗುತ್ತಿಗೆ ಅವದಿ ನವೀಕರಿಸದೇ ಇರುವುದರಿಂದ ಮೊಕದ್ದಮೆ ವಜಾ ಆಗಿರುತ್ತದೆ. ತದನಂತರ ಓಎಸ್ ಸಂಖ್ಯೆ: 813/88 ದಾಖಲಾಗಿದ್ದು, ಅದು ಸಹ ವಜಾ ಆಗಿರುತ್ತದೆ. ಹೀಗಾಗಿ ಅವರಿಗೆ ಸರ್ಕಾರವು ಮಂಜೂರಾತಿ ನೀಡಿದ ನಿವೇಶನ ಕ್ರಯಪತ್ರ ಮಾಡಿರುವುದಿಲ್ಲ.

ದಿನಾಂಕ: 06–02–1998ರಲ್ಲಿ ಪಾಲಿಕೆಯ ಕಾನೂನು ಶಾಖೆ ಕ್ರಯಪತ್ರವನ್ನು ಮಾಡಿಕೊಡಲು ಅಭಿಪ್ರಾಯ ನೀಡಿರುತ್ತಾರೆ. ತದನಂತರ ಈ ಪ್ರಕರಣ ಮತ್ತೆ ಕಾನೂನು ಶಾಖೆಗೆ ಕಳುಹಿಸಲಾಗಿದ್ದು ದಿನಾಂಕ: 25–06–1999ರಲ್ಲಿ ಸರ್ಕಾರವು ನಿಗಧಿ ಪಡಿಸಿರುವ ದರ ತೀರ ಕಡಿಮೆ ಆಗಿರುವುದರಿಂದ ಮತ್ತೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲು ಅಭಿಪ್ರಾಯ ಪಟ್ಟಿರುತ್ತದೆ. ಮಂಜೂರುದಾರರು 1976ರಲ್ಲೇ ಹಣವನ್ನು ಸಂದಾಯ ಮಾಡಿದ್ದು ಮತ್ತೇ ಇವರಿಂದ ಈಗಿನ ದರದಲ್ಲಿ ಹಣಪಡೆದು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು ಸೂಕ್ತವಲ್ಲವೆಂದು ಕಾನೂನು ಶಾಖೆ ಆಭಿಪ್ರಾಯ ಮತ್ತೊಮ್ಮೆ ಕೋರಿದೆ ಮೇಲೆ ಈಗಾಗಲೆ ನೀಡಿರುವ ಅಭಿಪ್ರಾಯವೇ ಸರಿ ಎಂದು ಕಾನೂನು ಶಾಖೆಯು ಅಭಿಪ್ರಾಯ ಪಟ್ಟಿರುವುದರಿಂದ ಕಡತವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುತ್ತದೆ.

ದಿನಾಂಕ: 22–08–2002ರಂದು ಈ ಸಮಿತಿಯು ಆಯುಕ್ತರು ಟಿಪ್ಪಣಿ ಅನುಮೋದಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಳುಹಿಸಿದ್ದು, ಆ ಸಮಿತಿಯು ದಿನಾಂಕ:04–10–2002ರಲ್ಲಿ ದಿನಾಂಕ:22–08–2002ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯ ಒಪ್ಪುತ್ತಾ, ಈ ಸ್ವತ್ತಿನ ಮುಂದುಗಡೆ ಜಾಗವಿದ್ದು ಇದರ ಬಗ್ಗೆ ವಿವರವಾದ ವರದಿ ಇರುವುದಿಲ್ಲ ಹಾಗೂ ಈ ಜಾಗದಲ್ಲಿ ಅರ್ಧ ಭಾಗವನ್ನು ಅನಧಿಕೃತವಾಗಿ ಅಕ್ರಮಿಸಿ ಕೊಂಡಿರುತ್ತಾರೆ, ಇನ್ನುಳಿದ ಅರ್ಧ ಭಾಗವು ಅಕ್ರಮಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆದುದರಿಂದ, ಪೂರ್ಣ ಜಾಗದ ವಿಸ್ತೀರ್ಣವನ್ನು ಪಡೆದು ಪಾಲಿಕೆಯ ಅರ್ಥಿಕ ದೃಷ್ಟಿಯಿಂದ ಕಾನೂನು ಪ್ರಕಾರ ಕ್ರಮ ಕೈಗೊಂಡ ಕಡತವನ್ನು ಸಮಿತಿಗೆ ಮರು ಮಂಡಿಸಲು ತೀರ್ಮಾನಿಸಲಾಗಿರುತ್ತದೆ.

ಈ ಬಗ್ಗೆ ವಲಯಾಧಿಕಾರಿಗಳು ಸ್ವತ್ತಿನ ಸಂಖ್ಯೆ:10/2, ಶ್ರೀ ಸೈಯದ್ ಮುಶ್ತಾಖ್ ಅಹ್ಮದ್ ರವರಿಗೆ ಸೇರಿದ್ದು, ಈ ಜಾಗಕ್ಕೆ ಹೊಂದಿಕೊಂಡಿರುವ ಪಾಲಿಕೆಯ ಸ್ವತ್ತು 17X13.6 ಅಡಿಗಳು ಇದ್ದು, ಶ್ರೀ ಸೈಯದ್ ಮುಶ್ತಾಖ್ ಅಹ್ಮದ್ ರವರಿಗೆ ಓಡಾಡಲು ಈ ಜಾಗ ಮಾತ್ರ ಇರುತ್ತದೆ. ಆದುದರಿಂದ, ಅರ್ಜಿದಾರರಿಗೆ ಕ್ರಯಪತ್ರ ನೀಡುವ ಬಗ್ಗೆ ಆದೇಶಕ್ಕಾಗಿ ಮಂಡಿಸಿರುತ್ತಾರೆ.

ಭೂಮಾಪಕರೊಂದಿಗೆ ಸ್ಥಳ ಪರಿಶೀಲಿಸಲಾಗಿ, ಪ್ರಸ್ತುತ ಜಾಗ 13.6 x 17 ಇದ್ದು, ಈ ಜಾಗದ ಮುಂದೆ ಖಾಲಿ ಜಾಗವಿದ್ದು, ಆ ಜಾಗ ಪಾದಚಾರಿ ಜಾಗವಾಗಿರುತ್ತದೆ. ರಸ್ತೆಗಾಗಿ ಇರುವ ಜಾಗವನ್ನು ಮಂಜೂರಾತಿ ನೀಡಲು ರಹ ಇರುವುದಿಲ್ಲ. ಈ ವಿಷಯವನ್ನು ನಿರ್ಣಯಕ್ಕಾಗಿ ಸ್ಥಾಯಿಸಮಿತಿ ಮುಂದೆ ಮಂಡಿಸಲು ಅಭಿಪ್ರಾಯಿಸಲಾಗಿರುತ್ತದೆ.

ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಈಗಿನ ದರದಂತೆ ಈಗಾಗಲೇ ಸಂದಾಯವಾಗಿರುವ ಹಣವನ್ನು ಕಡಿಮೆಗೊಳಿಸಿ ಉಳಿದ ಮೊತ್ತವನ್ನು ಸಂದಾಯ ಮಾಡುವ ಷರತ್ತಿಗೆ ಒಳಪಟ್ಟು ಮಂಜೂರಾತಿ ನೀಡಿ ಕ್ರಯಪತ್ರ ನೀಡಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿ ಮಂಡಿಸಿದೆ.

***ನಿರ್ಣಯ : ದಿನಾಂಕ : 19–01–2012ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## 21]. ವಿಷಯದ ಸಂಖ್ಯೆ :–ತೆಆಸ್ಥಾಸ/435/2011–12

ಆಯುಕ್ತರ ಟಿಪ್ಪಣಿ ಸಂಖ್ಯೆಃ ಎ3(4)/ಪಿಆರ್/131/10–11, ದಿನಾಂಕ: 19–01–2012 ರಲ್ಲಿ ವಿವರಿಸಿರುವಂತೆ, ವಾರ್ಡ್ ನಂ:178 ರ ಸಿ–2, 9ನೇ ಅಡ್ಡರಸ್ತೆ, ಜೆ.ಪಿ.ನಗರ 2ನೇ ಹಂತ, ಬೆಂಗಳೂರು ಶ್ರೀ ತಿರುಮಲಗಿರಿ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನಕ್ಕೆ ಮುಂದಿನ 30–ವರ್ಷದ ಅವಧಿಗೆ ಗುತ್ತಿಗೆ ನವೀಕರಿಸುವ ಸಂಬಂಧ ಪಾಲಿಕೆ ಸ್ಥಾಯಿಸಮಿತಿ ಹಾಗೂ ಪಾಲಿಕೆ ಸಭೆಯಲ್ಲಿ ನವೀಕರಿಸಲು ನಿರ್ಣಯಿಸಿದ್ದು, ಸರ್ಕಾರದ ಅನುಮೋದನೆ ಕೋರಿ ಪತ್ರ ಬರೆಯಲಾಗಿರುತ್ತದೆ. ಸರ್ಕಾರವು ದಿನಾಂಕ:28–03–2011 ಮತ್ತು 28–07–2011 ರಲ್ಲಿ ಕೆಲವು ಮಾಹಿತಿ ನೀಡುವಂತೆ ಸೂಚಿಸಿದ್ದು, ಮಾಹಿತಿ ನೀಡಲಾಗಿರುತ್ತದೆ. ಸರ್ಕಾರವು ದಿನಾಂಕ:29–11–2011 ರಲ್ಲಿ ಮತ್ತೊಂದು ಪತ್ರ ಬರೆದು, ಹಿಂದಿನ ಸರ್ಕಾರದ ಪತ್ರದ 3ನೇ ಅಂಶದಲ್ಲಿ ಈ ಹಿಂದೆ ಸದರಿ ಸ್ವತ್ತನ್ನು ವಾರ್ಷಿಕ ರೂ.24,000/– ಗಳಿಗೆ ನಿಗಧಿಪಡಿಸಿ ನೀಡಲಾಗಿತ್ತು. ಈಗ ಅತಿ ಕಡಿಮೆ ಅಂದರೆ, ರೂ.2,500/–ಗಳಿಗೆ ವಾರ್ಷಿಕ ಗುತ್ತಿಗೆಯನ್ನು ನಿಗಧಿಪಡಿಸಲು ಸೂಕ್ತ ಸಮರ್ಥನೆಯನ್ನು ಒದಗಿಸುವಂತೆ ಸೂಚಿಸಿರುತ್ತದೆ. ಉಲ್ಲೇಖ(2)ರ ಪಾಲಿಕೆ ಸಭೆಯಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿ ದಿನಾಂಕ:24–01–2011 ರಲ್ಲಿ ತೀರ್ಮಾನಿಸಿರುವ ವಾರ್ಷಿಕ ಗುತ್ತಿಗೆ ಹಣ 24,000/–ರೂ.ಗಳ ಬದಲಾಗಿ 2500/–ರೂ. ನಿಗದಿಪಡಿಸ ಲಾಗಿರುತ್ತದೆಯೆಂದು ಸರ್ಕಾರಕ್ಕೆ ಪತ್ರ ಮುಖೇನ ತಿಳಿಸಲಾಗಿರುತ್ತದೆ. ಆದರೆ, ಸರ್ಕಾರವು ತನ್ನ ಪತ್ರದಲ್ಲಿ ಸಮರ್ಥನೀಯ ಕಾರಣಗಳನ್ನು ಒದಗಿಸಿರುವುದಿಲ್ಲ. ಆದುದರಿಂದ, ಸಮರ್ಥನೀಯ ಕಾರಣವನ್ನು ಒದಗಿಸುವಂತೆ ಸರ್ಕಾರವು ಸೂಚಿಸಿರುತ್ತದೆ.

ಈ ಸಂಬಂಧ ಹಿಂದೆ ಇರುವ ಹಾಗೆ ವಾರ್ಷಿಕ 24,000/– ರೂ. ನಿಗದಿಪಡಿಸಲು ಸೂಕ್ತ ನಿರ್ಣಯಕ್ಕಾಗಿ ಸ್ಥಾಯಿ ಸಮಿತಿಗಳ ಮುಂದೆ ಟಿಪ್ಪಣಿ ಮಂಡಿಸಲು ಅಭಿಪ್ರಾಯಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ವಾರ್ಷಿಕ ಗುತ್ತಿಗೆ ಹಣ ಹಿಂದೆ ಇರುವಂತೆ ವಾರ್ಷಿಕ 24,000/–ರೂ. ನಿಗದಿಪಡಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ : 19–01–2012ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## 22]. ವಿಷಯದ ಸಂಖ್ಯೆ :–ತೆಆಸ್ಥಾಸ/436/2011–12

ಆಯುಕ್ತರ ಟಿಪ್ಪಣಿ ಸಂಖ್ಯೆಃ ಜಆ(ಕ)ಪಿಎಸ್ಆರ್(4)167/11–12, ದಿನಾಂಕ: 24–01–2012 ರಲ್ಲಿ ವಿವರಿಸಿರುವಂತೆ, ಶ್ರೀ ಡಬ್ಲ್ಯೂ ಹೆಚ್. ಶಾಂತಕುಮಾರ್, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಂಗ ಸಂಗೀತ ಪರಿಷತ್ತು (ರಿ), ನಂ. 13, 1ನೇ ಕ್ರಾಸ್, ಚೋಳೂರು ಪಾಳ್ಯ, ಮಾಗಡಿ ರಸ್ತೆ, ಬೆಂಗಳೂರು – 560 023. ರವರು ಮನವಿ ಸಲ್ಲಿಸಿ, ಕನ್ನಡ ರಂಗಭೂಮಿ ಕ್ಷೇತ್ರದಲ್ಲಿ ಪೌರಾಣಿಕ ರಂಗಭೂಮಿ ತನ್ನದೇ ಆದ ಪ್ರಾಚೀನ ಮತ್ತು ಭವ್ಯ ಸಾಂಸ್ಕೃತಿಕ ಹಿನ್ನೆಲೆ ಹೊಂದಿರುವ ಕಲೆಯಾಗಿದ್ದು, ಪೌರಾಣಿಕ ನಾಟಕಗಳು ಇತ್ತೀಚಿನ ಆಧುನಿಕ ಮಾಧ್ಯಮಗಳ ಪ್ರಭಾವದಿಂದಾಗಿ ನಶಿಸಿ ಕಣ್ಮರೆಯಾಗುತ್ತಿದ್ದು, ಪ್ರಸ್ತುತ ಪೌರಾಣಿಕ ರಂಗಭೂಮಿಯ ಸಂಗೀತ ಮತ್ತು ಸಾಹಿತ್ಯವನ್ನು ಉಳಿಸಿ ಬೆಳೆಸುವ ಸಲುವಾಗಿ ರಾಜ್ಯಮಟ್ಟದ ಸಂಘಟನೆಯನ್ನು ಸ್ಥಾಪಿಸಿ ತನ್ಮೂಲಕ ರಂಗಭೂಮಿ ಕಲಾವಿದರ ಶ್ರೇಯೋಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಪರಿಷತ್ತಿನ ರಾಜ್ಯಮಟ್ಟದ ನಾಲ್ಕನೇಯ ರಂಗಸಂಗೀತ ಸಮ್ಮೇಳನವನ್ನು 29.01.2012 ಮತ್ತು 30.01.2012 ರಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಲಾಗಿದ್ದು, ಸಮ್ಮೇಳನದ ಅಂಗವಾಗಿ ಪೌರಾಣಿಕ ರಂಗಗೀತೆ, ರಂಗದೃಶ್ಯಾವಳಿ, ಪೌರಾಣಿಕ ನಾಟಕಗಳು ಮತ್ತು ವಿಚಾರ ಸಂಕಿರಣ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತೇವೆ. ಸದರಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ನೀಡಬೇಕೆಂದು ಕೋರಿ, ಅಂದಾಜು ಖರ್ಚು ವೆಚ್ಚದ ಪಟ್ಟಿಯನ್ನು ಲಗತ್ತಿಸುತ್ತಾ, ರಂಗಸಂಗೀತ ಸಮ್ಮೇಳನದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಹೆಚ್ಚಿನ ಅನುದಾನ ನೀಡಿ ಸಾಂಸ್ಕೃತಿಕ ಪರಂಪರೆಯ ಸಂಪ್ರದಾಯವನ್ನು ರಕ್ಷಿಸಿ ಬೆಳೆಸಲು ಪ್ರೋತ್ಸಾಹ ನೀಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011

ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12 ರಂತೆ 185 ಸಂಘ ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ಮೊತ್ತ ರೂ. 116.50 ಲಕ್ಷಗಳು. ಆದರೆ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯನ್ನು ತಿರಸ್ಕರಿಸುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ :</u>   <u>ದಿನಾಂಕ : 24–01–2012ರ ಆಯುಕ್ತರ ಟಿಪ್ಪಣಿ ಒಪ್ಪಿದೆ</u>***

## ***<u>23]. ವಿಷಯದ ಸಂಖ್ಯೆ :–ತೆಆಸ್ಥಾಸ/437/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆಃ ಎ3(4)/ಪಿಆರ್/184/11–12, ದಿನಾಂಕ: 22–11–2011 ರಲ್ಲಿ ವಿವರಿಸಿರುವಂತೆ, ವಾರ್ಡ್ –145ರ ಲಕ್ಕಸಂದ್ರ, 16ನೇ ಅಡ್ಡರಸ್ತೆಯ ನರ್ಸರಿ ಶಾಲೆ ಹಿಂಭಾಗದಲ್ಲಿರುವ ಪಾಲಿಕೆಯ 30x30 ಅಡಿಗಳ ಜಾಗವನ್ನು ಶ್ರೀ ಭುವನೇಶ್ವರಿ ಯುವಕರ ಬಳಗ (ರಿ) ರವರಿಗೆ ವ್ಯಾಯಾಮಶಾಲೆ ನಡೆಸುವ ಉದ್ದೇಶಕ್ಕಾಗಿ ದಿ: 17–05–1995 ರಲ್ಲಿ 3–ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದು, ಗುತ್ತಿಗೆ ಅವಧಿ ಮುಗಿದಿರುತ್ತದೆ. ನಂತರ, ಸರ್ಕಾರದ ಆದೇಶ ಸಂಖ್ಯೆ: ನಅಇ/236/ಎಂಇನ್‌ಜಿ/1995, ದಿನಾಂಕ: 15–04–1998 ರಲ್ಲಿ ವ್ಯಾಯಾಮಶಾಲೆ ಉದ್ದೇಶಕ್ಕೆ ಮಾತ್ರ ಎಂಬ ಷರತ್ತಿನೊಂದಿಗೆ ಚದರ ಅಡಿ 1 ಕ್ಕೆ 50/– ರೂ. ಹಾಗೂ ಇದರ ಮೇಲೆ ಶೇ:10ರಷ್ಟು ಹೆಚ್ಚಿಸಿ ಮಾರಾಟ ಮಾಡಲು ಆದೇಶಿಸಲಾಗಿರುತ್ತದೆ. ಈ ಸಂಘದವರಿಗೆ ಕ್ರಯದ ಮೊತ್ತ ಪಾವತಿಸುವಂತೆ ಪತ್ರ ಬರೆಯಲಾಗಿ, ಸಂಘವು ನಿಗಧಿತ ಅವಧಿಯಲ್ಲಿ ಹಣ ಪಾವತಿ ಮಾಡಿರುವುದಿಲ್ಲ. ನಂತರ, 2006ರಲ್ಲಿ ಸರ್ಕಾರದ ಮಾರ್ಗಸೂಚಿಯಂತೆ ಮಾರುಕಟ್ಟೆ ದರ ಹೆಚ್ಚಿಸಿರುವುದರಿಂದ, ವಾಣಿಜ್ಯ ದರ ನಿಗದಿಪಡಿಸಿ ಒಟ್ಟು 10,58,400/– ರೂ. ಪಾವತಿಸಲು ದಿನಾಂಕ: 01–06–2006 ಮತ್ತು 20–06–2006 ರಂದು ಪತ್ರ ಬರೆಯಲಾಗಿದ್ದರೂ ಸಹಾ ಸದರಿ ಸಂಘದವರು ಹಣ ಪಾವತಿ ಮಾಡಿರುವುದಿಲ್ಲ.

ಈ ಬಗ್ಗೆ ವಲಯಾಧಿಕಾರಿಗಳು ವರದಿಯಲ್ಲಿ ಮೇಲ್ಕಂಡ ಸಂಘವು ಈ ಪಾಲಿಕೆ ಸ್ವತ್ತಿನ ಕಟ್ಟಡದಲ್ಲಿ ವ್ಯಾಯಾಮಶಾಲೆ ನಡೆಸುತ್ತಿದ್ದು, ಕ್ರಯದ ಮೊತ್ತ ಪಾವತಿ ಮಾಡಿರುವುದಿಲ್ಲ ಆದುದರಿಂದ, ಈ ಸಂಘವು ಉಚಿತವಾಗಿ ವ್ಯಾಯಾಮಶಾಲೆ ನಡೆಸುತ್ತಿರುವುದರಿಂದ ರಿಯಾಯಿತಿ ದರ ನಿಧಿಪಡಿಸಿ ಮುಂದಿನ 5–ವರ್ಷಗಳಿಗೆ ಗುತ್ತಿಗೆ ನವೀಕರಿಸುವ ಬಗ್ಗೆ ಆದೇಶಕ್ಕೆ ಕಡತ ಮಂಡಿಸಿರುತ್ತಾರೆ.

ದಿನಾಂಕ: 01–03–2002ರ ಆಯುಕ್ತರ ಸುತ್ತೋಲೆ ಕಲಂ–7(4) ರಲ್ಲಿ ಗುತ್ತಿಗೆ ಹಣ ಸ್ಥಳದ ಹಾಲಿ ಮಾರುಕಟ್ಟೆ ದರಕ್ಕೆ 10%ರಷ್ಟು ವಾರ್ಷಿಕ ಗುತ್ತಿಗೆ ಹಣ ನಿಗಧಿಪಡಿಸಲು ಆದೇಶವಿರುತ್ತದೆ. ಶೇ:100%ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿಸಮಿತಿಗೆ, ಪಾಲಿಕೆಗೆ ಅಧಿಕಾರವಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 21–09–2011ರ ಸರ್ಕಾರದ ಮಾರ್ಗಸೂಚಿಯಂತೆ ವಸತಿಯೇತರ ಚದರ ಅಡಿ ಒಂದಕ್ಕೆ ರೂ.4,200/– ಗಳಿದ್ದು, ಅರ್ಜಿದಾರರುಗಳು ಕೋರಿರುವ ಜಾಗವು 900 ಚ.ಅಡಿಗಳಾಗುತ್ತದೆ. ಇದರಂತೆ 4200x900=37,80,000/– ರೂ. ಗಳಾಗುತ್ತದೆ. ಶೇ: 10%ರಷ್ಟು ವಾರ್ಷಿಕ ಗುತ್ತಿಗೆ ಹಣ 3,78,000/– ರೂ. ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 31,500/– ರೂ. ಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ಭುವನೇಶ್ವರಿ ಯುವಕರ ಬಳಗ (ರಿ)ರವರಿಗೆ ಬಾಕಿ ಇರುವ ಗುತ್ತಿಗೆ ಹಣ ಪಾವತಿಸಿಕೊಂಡು, ಸಾರ್ವಜನಿಕರಿಗೆ ಉಚಿತವಾಗಿ ವ್ಯಾಯಾಮಶಾಲೆ ನಡೆಸುವ ಷರತ್ತಿಗೊಳಪಟ್ಟು ಮುಂದಿನ 5–ವರ್ಷಗಳಿಗೆ ನವೀಕರಿಸುವ ಬಗ್ಗೆ ಮುಂದಿನ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ದಿನಾಂಕ: 22–11–2011 ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ ಶ್ರೀ ಭುವನೇಶ್ವರಿ ಯುವಕರ ಬಳಗ (ರಿ) ರವರಿಗೆ 5 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 10–01–2012ರ ನಿರ್ಣಯ.

***<u>ನಿರ್ಣಯ :</u>   <u>ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 10–01–2012 ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ500/– (ಐದು ನೂರು) ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***24]. ವಿಷಯದ ಸಂಖ್ಯೆ :–ತೆಆಸ್ಥಾಸ/438/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ: ಎ3(1)/ಪಿಆರ್/20/11–12, ದಿನಾಂಕ: 08–12–2011 ರಲ್ಲಿ ವಿವರಿಸಿರುವಂತೆ, ಸ್ವಾತಂತ್ರ ಹೋರಾಟಗಾರರಾದ ದಿವಂಗತ ಆರ್. ಧರ್ಮಲಿಂಗಂರವರ ಕುಟುಂಬದವರಿಗೆ ನಂಬರ್ 44, ಬಳೆಪೇಟೆ ಕ್ರಾಸ್, ಮುಕ್ಕಣ್ಣಶೆಟ್ಟಿ ರಾಮಣ್ಣ ಲೇನ್ ನಲ್ಲಿರುವ ನಗರ ಪಲಿಕೆಯ 6x6=36 ಚದರ ಅಡಿ ಜಾಗವನ್ನು ರೂ. 99,360/–ಗಳಿಗೆ ನಗರ ಪಾಲಿಕೆಯ ನಿರ್ಣಯದಂತೆ ಕ್ರಯಕ್ಕೆ ನೀಡುವ ಸಲುವಾಗಿ ಸರ್ಕಾರಕ್ಕೆ ದಿನಾಂಕ: 09–09–2011ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸರ್ಕಾರವು ತನ್ನ ಪತ್ರದ ಸಂಖ್ಯೆ:ನಅಇ 297 ಎಂಎನ್‌ಜಿ 2010, ದಿನಾಂಕ: 10–11–2011ರಲ್ಲಿ ಪತ್ರ ಬರೆದಿರುತ್ತದೆ.

ಸರ್ಕಾರವು ಇತ್ತೀಚಿಗೆ ಸ್ಥಿರಾಸ್ತಿಗಳ ಅಂದಾಜು ಮಾರುಕಟ್ಟೆ ದರಗಳ ಮೌಲ್ಯವನ್ನು ಪರಿಷ್ಕರಣೆ ಮಾಡಿ ಅಧಿಸೂಚನೆ ಹೊರಡಿಸಿರುತ್ತದೆ. ಇದನ್ನು ಅನುಸರಿಸಿ ಪರಿಸ್ಕೃತ ಪ್ರಸ್ತಾವನೆಯನ್ನು ತಯಾರಿಸಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಪಾಲಿಕೆಯ ಕೌನ್ಸಿಲ್ ಮುಂದೆ ಮಂಡಿಸಿ ನಿರ್ಣಯದೊಂದಿಗೆ ಸರ್ಕಾರಕ್ಕೆ ಕಳುಹಿಸಿಕೊಡುವಂತೆ ನಿರ್ದೇಶಿಸಿಸಿರುತ್ತದೆ.

ಸರ್ಕಾರದ ನಿರ್ದೇಶನವನ್ನು ಅನುಸರಿಸಿ ಸರ್ಕಾರವು ಸ್ಥಿರಾಸ್ತಿಗಳ ಮತ್ತು ಕಟ್ಟಡದ ಅಂದಾಜು ಮಾರುಕಟ್ಟೆ ದರಗಳ ಕುರಿತು ತನ್ನ ಸಂಖ್ಯೆ: ಸಿವಿಸಿ–19/2010–11, ದಿ: 21–09–2011 ರಂದು ಅಧಿಸೂಚನೆ ಹೊರಡಿಸಿದ್ದು, ಇದನ್ನು ಕಡತದಲ್ಲಿ ಮಂಡಿಸಿದೆ. ಇದರಂತೆ ಪ್ರಸ್ತುತ ಪ್ರದೇಶದಲ್ಲಿ ಚದರ ಅಡಿ ಒಂದಕ್ಕೆ ರೂ. 5200/– ಇದ್ದು, ಇದಕ್ಕೆ ಶೇ 40% ರಷ್ಟು (ವಾಣಿಜ್ಯ ಉದ್ದೇಶಕ್ಕೆ) ಹೆಚ್ಚಿಸಿ ಅಂದರೆ ರೂ. 2080/– ಆಗುತ್ತದೆ. ಅಂದರೆ ಒಟ್ಟು ಮೊತ್ತ ಚದರ ಅಡಿ 1ಕ್ಕೆ ರೂ. 5200+2080=7280/– ಆಗುತ್ತದೆ. ಇದರಂತೆ ಸ್ವತ್ತಿನ ಮೌಲ್ಯ 36X7280=ರೂ. 2,62,080/– ಆಗುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ದಿವಂಗತ ಆರ್. ಧರ್ಮಲಿಂಗಂ ರವರಿಗೆ ನೀಡುವ ಜಾಗದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ದಿನಾಂಕ: 08–12–2011ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ದಿವಂಗತ ಆರ್. ಧರ್ಮಲಿಂಗಂ ರವರ ಕುಟುಂಬಕ್ಕೆ ಸದರಿ ಸ್ವತ್ತನ್ನು ಕ್ರಯಕ್ಕೆ ನೀಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 10–01–2012ರ ನಿರ್ಣಯ.

***ನಿರ್ಣಯ : ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 10–01–2012ರ ನಿರ್ಣಯವನ್ನು ಒಪ್ಪಿದೆ.***

## ***25]. ವಿಷಯದ ಸಂಖ್ಯೆ :–ತೆಆಸ್ಥಾಸ/439/2011–12***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ: ಅಆ(ಕ)ಪಿಎಸ್‌ಆರ್(4)190/11–12, ದಿನಾಂಕ: 28–01–2012 ರಲ್ಲಿ ವಿವರಿಸಿರುವಂತೆ, ಪ್ರೋ.ಹೆಚ್.ಆರ್. ದಾಸೇಗೌಡ, ಕಾರ್ಯದರ್ಶಿ, ಗಾಂಧೀ ಭವನ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ರಿ), ಕುಮಾರ ಪಾರ್ಕ್ ಪೂರ್ವ, ಬೆಂಗಳೂರು – 560 001. ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಕಳೆದ 50 ವರ್ಷಗಳಿಂದ ಗಾಂಧೀಜಿಯವರು ಭಾರತಕ್ಕೆ ಸ್ವಾತಂತ್ರ ಗಳಿಸುವಲ್ಲಿ ಮಾಡಿದ ಸೇವೆ ಅವರು ಅನುಸರಿಸಿದ ತತ್ವದರ್ಶಗಳನ್ನು ರಾಜ್ಯದ ಎಲ್ಲಾ ಜನ ಸಮುದಾಯಕ್ಕೆ ಪ್ರಸಾರ ಮಾಡುತ್ತಿದ್ದು, ಸ್ಮಾರಕ ನಿಧಿ ಗಾಂಧೀ ಭವನದಲ್ಲಿ ಒಂದು ಉಚಿತ ವಾಚನಾಲಯವನ್ನು ನಡೆಸುತ್ತಿದ್ದು, ದಿನಂ ಪ್ರತಿ ಸುಮಾರು 70, 80 ಜನ ಓದುಗರು ವೃತ್ತ ಪತ್ರಿಕೆಗಳು, ಮಾಸ ಪತ್ರಿಕೆಗಳನ್ನು ಓದುತ್ತಿದ್ದಾರೆಂದು ಪ್ರಸ್ತುತ ಕೆಲವೇ ಕನ್ನಡ ದಿನ ಪತ್ರಿಕೆಗಳನ್ನು ವಾರಪತ್ರಿಕೆಗಳನ್ನು, ಮಾಸ ಪತ್ರಿಕೆಗಳನ್ನು ಒದಗಿಸುತ್ತಿದ್ದು, ಉಚಿತ ವಾಚನಾಲಯಕ್ಕೆ ಪೀಠೋಪಕರಣಗಳ ಕೊರತೆಯಿರುವುದಾಗಿ ತಿಳಿಸಿರುತ್ತಾರೆ. ತಮ್ಮ ಉಚಿತ ವಾಚನಾಲಯ ನಗರದ ಕೇಂದ್ರ ಭಾಗದಲ್ಲಿದ್ದೂ ಹೆಚ್ಚಿನ ಸಂಖ್ಯೆ ಓದುಗರನ್ನು ಆಕರ್ಷಿಸುತ್ತಿದ್ದು, ಓದುಗರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಬೇಕಾಗಿರುವ ಪ್ರಯುಕ್ತ ನಗರ ಸಭೆಯಲ್ಲಿ ಹೆಚ್ಚಿನ ಅನುದಾನ ನೀಡಲು ಕೋರಿರುತ್ತಾರೆ.

ಸದರಿಯವರಿಗೆ **2009–10** ನೇ ಸಾಲಿನಲ್ಲಿ ರೂ. **10,000/–** ಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನಗಳಿರುತ್ತವೆ.**

2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ಅನುಬಂಧ– 2 ರಲ್ಲಿ 185 ವಿವಿಧ ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಲಾಗಿರುತ್ತದೆ. ಉಳಿಕೆ ಮೊತ್ತ ರೂ. 116.50 ಲಕ್ಷಗಳು.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಪಾಲಿಕೆಯ ಸದ್ಯದ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ : ದಿನಾಂಕ : 28–01–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.10,000/– (ಹತ್ತು ಸಾವಿರ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು***

## 26]. ವಿಷಯದ ಸಂಖ್ಯೆ :–ತೆಆಸ್ಥಾಸ/440/2011–12

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆಃ ರಾರಾನವ/ಕ.ಶಾ/ಪಿಆರ್/12/11–12, ದಿನಾಂಕ: 28.01.2012 ರಲ್ಲಿ ವಿವರಿಸಿರುವಂತೆ, ಶ್ರೀ ಲೋಕಶೋಕ ವಿನಾಶಿನಿ ಸಮಾಜ ಸೇವಾ ಸಂಘ (ರಿ). ಸುಣ್ಣಕಲ್ಲುಪಾಳ್ಯ ಉತ್ತರಹಳ್ಳಿ ಮುಖ್ಯರಸ್ತೆ ಕೆಂಗೇರಿ, ಬೆಂಗಳೂರು–560060. ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಪ್ರತಿ ವರ್ಷ ರಾಷ್ಟ್ರೀಯ ಮತ್ತು ನಾಡ ಹಬ್ಬಗಳಿಂದ ಸ್ವಾತಂತ್ರ್ಯ ದಿನಾಚರಣೆ, ಕನ್ನಡ ರಾಜ್ಯೋತ್ಸವ, ಗಣರಾಜ್ಯೋತ್ಸವ, ಕನಕಜಯಂತಿ ಮೊದಲಾದ ಹಬ್ಬಗಳನ್ನು ಆಚರಿಸುತ್ತೇವೆ. ಈ ಸಮಾರಂಭಗಳಲ್ಲಿ ಸಂಗೀತ, ಸಾಹಿತ್ಯ, ರಂಗಭೂಮಿ ಮೊದಲಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನ ಮಾಡುವುದು, ಪ್ರತಿಭಾ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು. ವೃದ್ಧ ಮಹಿಳೆಯವರಿಗೆ ವಸ್ತ್ರದಾನ ಮಾಡುವುದು ಮುಂತಾದ ಮಹಿಳಾ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ. ಪ್ರತೀ ವರ್ಷ ತುಂಬಾ ಕಡುಬಡ ಜನರಿಗೆ ಉಚಿತ ಸಾಮೂಹಿಕ ವಿವಾಹಗಳನ್ನು ನಡೆಸಬೇಕೆಂದಿದ್ದೇವೆ. ಈ ಕಾರ್ಯದಲ್ಲಿ ವಧು ವರರಿಗೆ ಉಚಿತವಾಗಿ ಮಾಂಗಲ್ಯ, ವಸ್ತ್ರ, ಕಾಲುಂಗುರ, ಹೂವಿನ ಹಾರ ಇತ್ಯಾಧಿಗಳನ್ನು ಕೊಡಬೇಕಾಗಿದೆ ಹಾಗೂ ಅಲ್ಲಿಗೆ ಆಗಮಿಸಿದ ಸಾರ್ವಜನಿಕರಿಗೆಲ್ಲಾ ಅನ್ನ ಸಂತರ್ಪಣೆ ಏರ್ಪಡಿಸಬೇಕಾಗಿದೆ. ಈ ಸಮಾರಂಭಗಳಲ್ಲಿ ತಾವುಗಳು ದಯಮಾಡಿ ಆಗಮಿಸಬೇಕು ಹಾಗೂ ಈ ಕಾರ್ಯಗಳಿಗೆ ಅಪಾರ ಹಣದ ಅವಶ್ಯಕತೆ ಇರುವುದರಿಂದ ಪಲಿಕೆ ವತಿಯಿಂದ ರೂ.78,53,000/– (ರೂ. ಎಪ್ಪತ್ತೆಂಟು ಲಕ್ಷದ ಐವತ್ತಾಮೂರು ಸಾವಿರಗಳು ಮಾತ್ರ) ಗಳ ಸಹಾಯಧನ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಶ್ರೀಮತಿ ವೀಣಾ ನಾಗರಾಜ್, ಮಾನ್ಯ ಸದಸ್ಯರು ವಾರ್ಡ್ – 198 (ಹೆಮ್ಮಿಗೆಪುರ) ರವರು ಪತ್ರ ಬರೆದು ಸದರಿಇವರಿಗೆ ಸಹಾಯಧನ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

2011–12ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ಅನುಬಂಧ – 2 ರಲ್ಲಿ 185 ವಿವಿಧ ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಲಾಗಿರುತ್ತದೆ. ಉಳಿಕೆ ಮೊತ್ತ ರೂ.116.50 ಲಕ್ಷಗಳು.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯನ್ನು ತಿರಸ್ಕರಿಸುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ : ದಿನಾಂಕ : 28–01–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.***

## *27]. ವಿಷಯದ ಸಂಖ್ಯೆ :–ತೆಆಸ್ಥಾಸ/441/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆಃ ಜಆ(ಕ)ಪಿಎಸ್‌ಆರ್(4)187/11-12, ದಿನಾಂಕ: 30–01–2012 ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಹಲಸೂರಿನ ಶ್ರೀ ಸೋಮೇಶ್ವರ ಸ್ವಾಮಿ ದೇವಾಲಯದ ಕಾರ್ಯನಿವಾಹಕ ಅಧಿಕಾರಿ ಯವರು ಬರೆದಿರುವ ಪತ್ರದ ಪ್ರತಿಯನ್ನು ಲಗತ್ತಿಸುತ್ತಾ, ಸದರಿಯವರು ಶ್ರೀ ಕಾಮಾಕ್ಷಮ್ಮನವರ ಹೂವಿನ ಪಲ್ಲಕ್ಕಿ ಉತ್ಸವ, ಬ್ರಹ್ಮ ರಥೋತ್ಸವ, ತೆಪ್ಪೋತ್ಸವ, ದೇವಾಲಯದ ಸುಣ್ಣಬಣ್ಣ, ಜನರೇಟರ್, ವಿಶೇಷ ದಿನಗಳಲ್ಲಿ ನಡೆಯುವ ದೀಪಾಲಂಕಾರ ಇತ್ಯಾದಿಗಳಿಗಾಗಿ ಮಹಾನಗರ ಪಾಲಿಕೆ ವತಿಯಂದ 2010–11 ನೇ ಸಾಲಿನಲ್ಲಿ ರೂ. 10.00 ಲಕ್ಷಗಳ ಅನುದಾನ ಬಿಡುಗಡೆ ಮಾಡಿದ್ದು, ಪ್ರತಿ ವರ್ಷದಂತೆ 2011–12 ನೇ ಸಾಲಿನಲ್ಲಿ ನಡೆಯಲಿರುವ ಉತ್ಸವ ಕಾರ್ಯಕ್ರಮಕ್ಕೆ ಶೇ. 10.00 ರಷ್ಟು ಹೆಚ್ಚಿಸಿ ರೂ. 11.00 ಲಕ್ಷಗಳ ಅನುದಾನ ಬಿಡುಗಡೆ ಆಡುವಂತೆ ಕೋರಿರುತ್ತಾರೆ. ಸದರಿಯವರ ಮನವಿ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಹಣ ಬಿಡುಗಡೆ ಮಾಡುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟವರಿಗೆ ಆದೇಶಿಸಲು ಕೋರಿರುತ್ತಾರೆ.

ಸದರಿಯವರಿಗೆ **2010–11** ನೇ ಸಾಲಿನಲ್ಲಿ ರೂ. **10.00 ಲಕ್ಷ**ಗಳನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (101) ರಲ್ಲಿ "ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನ, ಹಲಸೂರು"** ರವರಿಗೆ **ರೂ. 10.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ಆದರೆ, ಮಾರ್ಗಸೂಚಿಗಳನ್ವಯ ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯನ್ನು ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 30–01–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನ, ಹಲಸೂರು ರವರಿಗೆ ಸಂಘ ಸಂಸ್ಥೆಗಳಿಗೆ 2011–12ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯ (ಅನುಬಂಧ–2) ಕ್ರಮಸಂಖ್ಯೆ 101ರಲ್ಲಿ ನಿಗಧಿಪಡಿಸಿರುವ ರೂ.10.00 ಲಕ್ಷ (ಹತ್ತು ಲಕ್ಷ) ಗಳ ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *28]. ವಿಷಯದ ಸಂಖ್ಯೆ :–ತೆಆಸ್ಥಾಸ/442/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆಃ ಅಆ(ಕ)ಪಿಎಸ್‌ಆರ್(4)181/11–12, ದಿನಾಂಕ: 30–01–2012 ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ಲಕ್ಷ್ಮೀ ನಾರಾಯಣ, ಮುಖ್ಯಮಂತ್ರಿಯವರ ಕಾರ್ಯದರ್ಶಿ ರವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು ಶ್ರೀ ಪಿ.ಕೆ. ಭರತ್ ಕುಮಾರ್ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್, ಬೆಂಗಳೂರು ಇವರು ಮಾನ್ಯ ಮುಖ್ಯ ಮಂತ್ರಿಯವರಿಗೆ ಸಲ್ಲಿಸಿರುವ ಮನವಿ ಪತ್ರವನ್ನು ಲಗತ್ತಿಸುತ್ತಾ, ಸದರಿ ಪತ್ರದಲ್ಲಿ ಕರ್ನಾಟಕ ರೋಲರ್ ಸ್ಕೇಟಿಂಗ್ ಅಸೋಸಿಯೇಷನ್ ಸಂಸ್ಥೆಯು ದಿನಾಂಕ 23.01.2012 ರಿಂದ 28.01.2012 ರವರೆಗೆ 49ನೇ ಸ್ಪೀಡ್ ರೋಲರ್ ಸ್ಕೇಟಿಂಗ್ ಛಾಂಪಿಯನ್ ಶಿಪ್ ಅನ್ನು ಬೆಂಗಳೂರಿನಲ್ಲಿ ಆಯೋಜಿಸುತ್ತಿದ್ದು, ಇದಕ್ಕಾಗಿ ರೂ. 5.00 ಲಕ್ಷಗಳ ಅನುದಾನ ಕೋರಿರುತ್ತಾರೆ. ಸದರಿ ಪತ್ರದ ಮೇಲೆ **ಮಾನ್ಯ ಮುಖ್ಯಮಂತ್ರಿಯವರು "ರೂ. 5.00 ಲಕ್ಷ ಅನುದಾನ ಒದಗಿಸಲು ಆದೇಶಿಸಿದೆ" ಎಂದು ಷರಾ ನಮೂದಿಸಿರುತ್ತಾರೆ.** ಮಾನ್ಯ ಮುಖ್ಯಮಂತ್ರಿಯವರ ಆದೇಶದನ್ವಯ ಕ್ರಮ ಜರುಗಿಸುವಂತೆ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ಅನುಬಂಧ– 2 ರಲ್ಲಿ 185 ವಿವಿಧ ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗದಿಪಡಿಸಲಾಗಿರುತ್ತದೆ. ಉಳಿಕೆ ಮೊತ್ತ ರೂ. 116.50 ಲಕ್ಷಗಳು.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಪಾಲಿಕೆಯ ಸದ್ಯದ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 30–01–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.5,00,000/– (ಐದು ಲಕ್ಷ)ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## ***29]. ವಿಷಯದ ಸಂಖ್ಯೆ :–ತೆಆಸ್ಥಾಸ/443/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4)188/11–12, ದಿನಾಂಕ: 30–01–2012 ರಲ್ಲಿ ವಿವರಿಸಿರುವಂತೆ, ಶ್ರೀ ಎನ್. ಆರ್. ನಂಜುಂಡೇ ಗೌಡ, ಅಧ್ಯಕ್ಷರು ಚಿಲ್ಡ್ರನ್ಸ್ ಇಂಡಿಯಾ, 1ನೇ ಮಹಡಿ, ''ಮೈ ಷುಗರ್'' ಬಿಲ್ಡಿಂಗ್, ಜೆ.ಸಿ. ರಸ್ತೆ, ಬೆಂಗಳೂರು – 560 002. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಕಳೆದ ಏಳು ವರ್ಷಗಳಿಂದಲೂ ಸತತವಾಗಿ ಬೆಂಗಳೂರು ನಗರದಲ್ಲಿ ಅಂತಾರಾಷ್ಟ್ರೀಯ ಮಕ್ಕಳ ಚಿತ್ರೋತ್ಸವವನ್ನು ತಮ್ಮ ಚಿಲ್ಡ್ರನ್ಸ್ ಇಂಡಿಯಾ ಸಂಸ್ಥೆಯಿಂದ ನಡೆಸಿಕೊಂಡು ಬರಲಾಗುತ್ತಿದೆ. ನಗರದ ವಿವಿಧ ಚಿತ್ರ ಮಂದಿರಗಳಲ್ಲಿ ದೇಶ ವಿದೇಶಗಳ ಅತ್ಯುತ್ತಮ ಮಕ್ಕಳ ಚಿತ್ರಗಳನ್ನು ಮಕ್ಕಳಿಗೆ ಉಚಿತವಾಗಿ ಪ್ರದರ್ಶಿಸುವುದರ ಜೊತೆಗೆ ಮಕ್ಕಳ ಮನೋವಿಕಾಸಕ್ಕೆ ಪೂರಕವಾಗುವಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ವಿಶೇಷವಾಗಿ ಮಹಾನಗರ ಪಾಲಿಕೆಯ ಶಾಲಾ ಮಕ್ಕಳನ್ನು ಅವರಿಗೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿ ಅವರನ್ನು ಪಾಲ್ಗೊಳ್ಳುವಂತೆ ವ್ಯವಸ್ಥೆ ಮಾಡಲಾಗುತ್ತಿದೆ. ಮಕ್ಕಳ ಚಿತ್ರಗಳು ಇನ್ನೂ ಹೆಚ್ಚು ಹೆಚ್ಚು ಮಕ್ಕಳಿಗೆ ಮತ್ತು ಎಲ್ಲಾ ವರ್ಗದ ಮತ್ತು ನಗರದ ಎಲ್ಲಾ ಬಡಾವಣೆಯ ಮಕ್ಕಳಿಗೂ ಲಭಿಸಬೇಕು ಎನ್ನುವ ಕಾರಣಕ್ಕೆ ಕಳೆದ ಫೆಬ್ರವರಿ ತಿಂಗಳಿಂದ ''ಮನೆ ಮುಂದೆ ಮಕ್ಕಳ ಸಿನಿಮಾ'' ಎಂಬ ಒಂದು ವಿಶೇಷ ಪರಿಕಲ್ಪನೆಯ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಫೆಬ್ರವರಿ 2012ರ ವರೆಗೆ ಮುಂದುವರೆಯಲಿದೆ. ಶನಿವಾರ ಮತ್ತು ಭಾನುವಾರ ಸಂಜೆ ನಗರದ ಮಹಾನಗರ ಪಾಲಿಕೆಯ ಬಡಾವಣೆಯ ಸಾರ್ವಜನಿಕ ಸ್ಥಳಗಳಲ್ಲಿ ಸಂಬಂಧಿಸಿದ ಪಾಲಿಕೆಯ ಸದಸ್ಯರ ಅಧ್ಯಕ್ಷತೆಯಲ್ಲಿ ಆಯ್ದ ಅತ್ಯುತ್ತಮ ಮಕ್ಕಳ ಸಿನಿಮಾವನ್ನು ಪ್ರದರ್ಶಿಸಲಾಗುತ್ತಿದೆ. ಇದು ಈಗಾಗಲೇ ಜನಪ್ರಿಯಗೊಂಡಿದ್ದು, ಯಶಸ್ವಿಯಾಗಿ ನಡೆಯುತ್ತಿದೆ. ಮಕ್ಕಳು ಮಾತ್ರವಲ್ಲದೆ ಪೋಷಕರು ಪಾಲ್ಗೊಳ್ಳುತ್ತಿದ್ದಾರೆ ಈ ಕಾರ್ಯಕ್ರಮ ಕೇವಲ ಮಕ್ಕಳ ಮನರಂಜನೆಗೆ ಮಾತ್ರ ಸೀಮಿತವಾಗಿರದೆ ಇವು ಅಪರೂಪದ ಅಂತಾರಾಷ್ಟ್ರೀಯ ಚಿತ್ರಗಳಾಗಿದ್ದು ಮಕ್ಕಳಿಗೂ ಪೋಷಕರಿಗೂ ಅರಿವು ಮೂಡಿಸುವಂತವುಗಳಾಗಿವೆ. ವರ್ಷಪೂರ್ತಿ ನಡೆಯುವ ಈ ವಿಶಿಷ್ಟ ಮತ್ತು ವಿನೂತನ ಕಾರ್ಯಕ್ರಮಕ್ಕೆ ಕನಿಷ್ಠ ರೂ. 25.00 ಲಕ್ಷ ಗಳ ಅನುದಾನವನ್ನು ಕೋರಲಾಗಿತ್ತು. ಏಳು ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗಿದೆ ಎಂದು ತಿಳಿದು ಬಂದಿದೆ. ದಯವಿಟ್ಟು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011

ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (80) ರಲ್ಲಿ "ಚಿಲ್ಡ್ರನ್ಸ್ ಇಂಡಿಯಾ"** ರವರಿಗೆ **ರೂ. 7.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ : ದಿನಾಂಕ : 30–01–2012ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಚಿಲ್ಡ್ರನ್ಸ್ ಇಂಡಿಯಾ (ರಿ), ಬೆಂಗಳೂರು ರವರಿಗೆ ಸಂಘ ಸಂಸ್ಥೆಗಳಿಗೆ 2011–12ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯ (ಅನುಬಂಧ–2) ಕ್ರಮಸಂಖ್ಯೆ 80ರಲ್ಲಿ ನಿಗಧಿಪಡಿಸಿರುವ ರೂ.7.00 ಲಕ್ಷ (ಏಳು ಲಕ್ಷ) ಗಳ ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## ***30]. ವಿಷಯದ ಸಂಖ್ಯೆ :–ತೆಆಸ್ಥಾಸ/444/2011–12***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 28–01–2012 ರಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕತ್ರಿಗುಪ್ಪೆ ಗ್ರಾಮದಲ್ಲಿ ಹಳೇ ವಾರ್ಡ್ ಸಂಖ್ಯೆ–54 ರಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ಸಂಖ್ಯೆ ಮುಖ್ಯ ಅಭಿಯಂತರರು (ದ) ADMN/APPL/105/198/09-10, Dated : 01.10.20099 ರಂದು ನೀಡಲಾಗಿದೆ. ಹಾಗೂ ದಿನಾಂಕ : 07.06.2009 ರಂದು ಕಾಮಗಾರಿ ಸಂಕೇತ ನಿರೀಕ್ಷಿಸಿ ಆಡಳಿತಾತ್ಮಕ ಅನುಮೋದನೆ ನೀಡಲು ಆಯುಕ್ತರು ಒಪ್ಪಿರುತ್ತಾರೆ. ಅದರಂತೆ ಕಾಮಗಾರಿ ಸಂಕೇತ ಸಂಖ್ಯೆ : 000-10-N-P-P-R-IM-041 ರನ್ನು ಕಾಮಗಾರಿಗೆ ನೀಡಲಾಗಿದೆ. ಸದರಿ ಕಾಮಗಾರಿ ಗುತ್ತಿಗೆಯನ್ನು ಶ್ರೀ.ಸುಬ್ರಮಣ್ಯ ರವರಿಗೆ 200–10ರ ದರಪಟ್ಟಿಗೆ ಹೋಲಿಸಿದಾಗ ಶೇಕಡ 7.99 ರಷ್ಟು ಹೆಚ್ಚುವರಿ ಹಾಗೂ ಒಟ್ಟು ಮೊತ್ತ ರೂ.52,43,672.00 ಗಳಿಗೆ ದಿನಾಂಕ : 24.10.2009ರ ಅಪರ ಆಯುಕ್ತರು (ದಕ್ಷಿಣ) ರವರ ಅಧ್ಯಕ್ಷತೆಯಲ್ಲಿ ನಡೆದ ಟೆಂಡರ್ ಅನುಮೋದನೆ ಸಮಿತಿಯಲ್ಲಿ ಅನುಮೋದಿಸಲಾಗಿದೆ. ಸದರಿ ಕಾಮಗಾರಿಗೆ ಬಿ.ಆರ್.ಸಂಖ್ಯೆ:181 ದಿನಾಂಕ : 15–10–2010 ರ ಮುಖಾಂತರ ಮೊದಲನೇ ಮತ್ತು ಭಾಗಶಃ ಬಿಲ್ಲನ್ನು ಪಾವತಿಸಲಾಗಿದೆ.

ಮೇಲ್ಕಂಡ ಕಾಮಗಾರಿಯು ತಾಂತ್ರಿಕ ಹಾಗೂ ಸ್ಥಳೀಯ ಅನಿವಾರ್ಯ ಕಾರಣಗಳಿಂದ ಕರಾರಿನ ಅವಧಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಸದರಿ ಕಾಮಗಾರಿಯು ಪೂರ್ಣಗೊಂಡಿದ್ದು 2ನೇ ಮತ್ತು ಅಂತಿಮ ಬಿಲ್ಲನ್ನು ಪಾವತಿಸಬೇಕಾಗಿರುತ್ತದೆ. ಕಾಮಗಾರಿ Revalidation ಮಾಡಬಹುದು ಹಾಗೂ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ : 28–01–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಒಪ್ಪಿದೆ.***

## ***31]. ವಿಷಯದ ಸಂಖ್ಯೆ :–ತೆಆಸ್ಥಾಸ/445/2011–12***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ: ಎ3(2)ಪಿಆರ್151/2011–12, ದಿನಾಂಕ: 28–01–2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ. 29 (ಹಳೇ ನಂ. 89) ರಲ್ಲಿ ಹೊಲಿಗೆ ತರಬೇತಿ ಕೇಂದ್ರವನ್ನು ನಡೆಸಲು ಮಹಾನಗರ ಪಾಲಿಕೆಗೆ ಸೇರಿದ ಕಟ್ಟಡ ಲಭ್ಯವಿಲ್ಲದ ಕಾರಣ ತರಬೇತಿ ಕೇಂದ್ರವನ್ನು ಖಾಸಗಿಯವರಾದ ಶ್ರೀ ಭೂಪಾಲ ರೆಡ್ಡಿ ಬಿನ್ ಅಶ್ವಥನಾರಾಯಣ, ನಂ. 1031, ಕಾಚರಕನಹಳ್ಳಿ, ಥಾಮಸ್ ಟೌನ್ ಹೆಣ್ಣೂರು ಮುಖ್ಯರಸ್ತೆ, ಬೆಂಗಳೂರು. ಇವರಿಗೆ ಸೇರಿದ ಕಟ್ಟಡದಲ್ಲಿ ನಡೆಸಲಾಗುತ್ತಿದ್ದು, ಈ ಕಟ್ಟಡಕ್ಕೆ ಬಾಡಿಗೆ ನೀಡಲು ಕೋರಿದ್ದರ ಹಿನ್ನೆಲೆಯಲ್ಲಿ, ಮುಖ್ಯ ಅಭಿಯಂತರರು (ಪೂರ್ವ) ಇವರು ಮಾಸಿಕ ರೂ. 2,000/– ರಂತೆ ನೀಡಬಹುದು ಎಂದು ವರದಿ ನೀಡಿದ್ದು, ಅದರಂತೆ ಸದರಿ ಹೊಲಿಗೆ ತರಬೇತಿ ಕೇಂದ್ರದ ಮಾಸಿಕ ರೂ. 2,000/– ರಂತೆ 1998ನೇ ಮಾರ್ಚ್ ಮಾಹೆಯಿಂದ ಬಾಡಿಗೆ ನೀಡಲು ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸಭೆಯ ದಿ: 19–06–1999 ವಿಷಯದ ಸಂಖ್ಯೆ:

1(18). ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಭೆಯ ದಿ: 14–07–1999 ವಿಷಯದ ಸಂಖ್ಯೆ: 50/99–2000 ರಂತೆ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳು ತೀರ್ಮಾನಿಸಿರುತ್ತವೆ.
ಶ್ರೀ ಭೂಪಾಲ ರೆಡ್ಡಿ, ಸದರಿ ಕಟ್ಟಡದ ಮಾಲೀಕರು ಮನವಿ ಸಲ್ಲಿಸಿ, ಈ ಹಿಂದೆ ಮಾಸಿಕ ಬಾಡಿಗೆ ರೂ. 5,000/– ಗಳನ್ನು ನೀಡುತ್ತಿದ್ದು, ಕಳೆದ 5 ವರ್ಷಗಳಿಂದ ಬಾಡಿಗೆ ದರವನ್ನು ಹೆಚ್ಚಿಸದೇ ಇರುವುದರಿಂದ ಬಾಡಿಗೆ ದರವನ್ನು 18,000/– ರೂ.ಗಳಿಗೆ ಹೆಚ್ಚಿಸಿ, ಕರಾರು ಪತ್ರವನ್ನು ಮಾಡಿಕೊಳ್ಳಬೇಕೆಂದು ಕೋರಿರುತ್ತಾರೆ.
ಅದರಂತೆ, ಮುಖ್ಯ ಅಭಿಯಂತರರು (ಪೂರ್ವ) ರವರು ಮತ್ತು ಜಂಟಿ ಆಯುಕ್ತರು (ಪೂರ್ವ) ಪಿ..ಡಬ್ಲ್ಯು.ಡಿ. ದರಪಟ್ಟಿಯಂತೆ ಮಾಸಿಕ ಬಾಡಿಗೆ 9,000 ರೂ.ಗಳಿಗೆ ಹೆಚ್ಚಿಸಿ ನಿಗಧಿಪಡಿಸಬಹುದಾಗಿ ವರದಿ ಮಾಡಿರುತ್ತಾರೆ.
ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಪ್ರಸ್ತಾವಿತ ಕಟ್ಟಡದ ವಿಸ್ತೀರ್ಣವು 405 ಚ.ಅಡಿ.ಗಳಷ್ಟು ವಿಸ್ತೀರ್ಣ ಇದ್ದು, ಹೊಲಿಗೆ ತರಬೇತಿ ಕೇಂದ್ರ ನಡೆಸಲು ಅವಶ್ಯವಾಗಿರುವುದರಿಂದ ಜಂಟಿ ಆಯುಕ್ತರು ಶಿಫಾರಸ್ಸಿನಂತೆ ಬಾಡಿಗೆ ನಿಗಧಿ ಪಡಿಸುವ ಕುರಿತು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 28–01–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಒಪ್ಪಿದೆ.***

## ***321. ವಿಷಯದ ಸಂಖ್ಯೆ :–ತೆಆಸ್ಥಾಸ/446/2011–12***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ ಃ 29–01–2012ರಲ್ಲಿ ವಿವರಿಸಿರುವಂತೆ, Providing RMC to Cross Roads of Muneshwara Block and M.R. Palya Main Road ಕಾಮಗಾರಿಗೆ 2009–10ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ 1771ಅಡಿ ಅಂದಾಜು ಮೊತ್ತ ರೂ. 99.00ಲಕ್ಷಗಳಿಗೆ 035-10-N-G-E-R-CO-005 ಕಾಮಗಾರಿ ಸಂಕೇತ ನೀಡಲಾಗಿತ್ತು. ವಾರ್ಡ್ ಸಂಖ್ಯೆ: 46ರಲ್ಲಿನ ಮುನೇಶ್ವರ ಬ್ಲಾಕ್ ಮತ್ತು ಎಂ.ಆರ್. ಪಾಳ್ಯ ಮುಖ್ಯ ರಸ್ತೆ ಹಾಗೂ ಅಡ್ಡ ರಸ್ತೆಗಳಿಗೆ ಆರ್.ಎಂ.ಸಿ. ಕಾಂಕ್ರಿಟ್ ಹಾಕುವ ಕಾಮಗಾರಿಯನ್ನು 2009–10ನೇ ಸಾಲಿನ ವಿಶೇಷ ಅನುದಾನದಡಿಯ ಲೆಕ್ಕ ಶೀರ್ಷಿಕೆ ಪಿ1771ರಲ್ಲಿ ರೂ. 99.00ಲಕ್ಷಗಳಿಗೆ ಕಾಮಗಾರಿ ಸಂಕೇತವನ್ನು ಪಡೆಯಲಾಗಿರುತ್ತದೆ. ಹಾಗೂ ಮುಖ್ಯ ಅಭಿಯಂತರರು (ಪೂರ್ವ) ರವರಿಂದ TS/CE(E)/JE/PR/210/164-133/09-10 ದಿನಾಂಕ 25/07/2009ರಂತೆ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿರುತ್ತದೆ. ತದನಂತರ TS/CE(E)/JE2/PR 210/27-05/09-10 ದಿನಾಂಕ: 29/07/2009ರಂತೆ ತಾಂತ್ರಿಕ ಮಂಜೂರಾತಿಯನ್ನು ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಗೆ 2010–11ನೇ ಸಾಲಿನ ವಿಶೇಷ ಅನುದಾನದಡಿಯಲ್ಲಿ ಟೆಂಡರ್ ಮುಖಾಂತರ ಗುತ್ತಿಗೆದಾರರಾದ ಶ್ರೀ. ಎಸ್.ಸಿ. ರಮೇಶ್ ರವರಿಗೆ ವಹಿಸಲಾಗಿತ್ತು. ಅಧೀಕ್ಷಕ ಅಭಿಯಂತರರು (ತಾಂತ್ರಿಕ ಮತ್ತು ಜಾಗೃತಿ) ರವರು ಸ್ಥಳ ಪರಿಶೀಲನೆ ನಡೆಸಿ, ಕೆಲವು ಮಾರ್ಪಾಡುಗಳನ್ನು ಸೂಚಿಸಿದ ಹಿನ್ನಲೆಯಲ್ಲಿ, ತಾಂತ್ರಿಕ ಪರಿಣಿತರಾದ ಬಿ.ಎಂ.ಎಸ್. ಕಾಲೇಜ್ ಅಫ್ ಇಂಜಿನಿಯರಿಂಗ್ ಹೈವೇ ವಿಭಾಗ ಪ್ರೊಫೇಸರ್ ಶ್ರೀ. ಜಗದೀಶ್ ರವರ ವರದಿ ಮೇರೆಗೆ ಮಂಜೂರಾದ ಮೊತ್ತದೊಳಗೆ ಮಾರ್ಪಾಡು ಅಂದಾಜು ಪಟ್ಟಿಯನ್ನು ತಯಾರಿಸಿ, ಅನುಮೋದನೆ ಪಡೆಯಲಾಗಿರುತ್ತದೆ. ಮೊದಲು ಅನುಮೋದನೆಗೊಂಡ ಕಾಮಗಾರಿಗೆ ಈ ಕೆಳಕಂಡಂತೆ ಬದಲಾವಣೆ ಮಾಡಿ ಅನುಮೋದನೆ ಪಡೆಯಲಾಗಿದೆ.

ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ವಿವರಣೆ ನೀಡಲಾಗಿದೆ.

| | | |
|---|---|---|
| 1 | ಮಂಜೂರಾದ ಅಂದಾಜು ಮೊತ್ತ | ರೂ. 99,00,000.00 |
| 2 | ಅನುಮೋದಿತ ಟೆಂಡರ್ ಮೊತ್ತ | ರೂ. 1,06,38,455.10 |
| 3 | ವರ್ಕ್ ಸ್ಲಿಪ್ ಮೊತ್ತ | ರೂ. 10,28,078.04 |
| 4 | ಇ.ಐ.ಆರ್.ಎಲ್. ಮೊತ್ತ | ರೂ. 22,27,574.00 |
| 5 | ಅನುಮೋದಿತ ಮಾರ್ಪಾಡು ಅಂದಾಜು ಹಾಗೂ ಜಾಬ್ ಕೋಡ್ ನವೀಕರಣದ ಮೊತ್ತ | ರೂ. 1,05,92,140.00 |
| 6 | ಪರಿಷ್ಕೃತ ಅಂದಾಜು ಪಟ್ಟಿಯ ಒಟ್ಟು ಮೊತ್ತ | ರೂ. 2,24,20,000.00 |
| 7 | ಅನುಮೋದನೆ ಹಾಗೂ ಜಾಬ್ ಸಂಖ್ಯೆ ನೀಡಬೇಕಾಗಿರುವ ಮೊತ್ತ | ರೂ. 1,17,73,946.83 |

ಈ ಪರಿಷ್ಕೃತ ಅಂದಾಜಿಗೆ ವಿವರಣೆಯನ್ನು ಮಾನ್ಯ ಆಯುಕ್ತರು ಕೋರಿದ್ದು, ವಿವರಣೆಯನ್ನು ಕಡತದ ಪುಟ ಸಂಖ್ಯೆ: 39, 40ರ ಕಂಡಿಕೆ 107, 108ರಲ್ಲಿ ನೀಡಲಾಗಿದೆ. ಸದರಿ ರಸ್ತೆಯು ಸಂಚಾರಿ ದಟ್ಟಣೆ ಇರತಕ್ಕ ಮುಖ್ಯ ರಸ್ತೆಯಾಗಿದ್ದು, ಜಯಮಹಲ್ ಹಾಗೂ ದಿಣ್ಣೂರು ಮುಖ್ಯ ರಸ್ತೆ ಸಂಪರ್ಕಗೊಂಡಿರುವ ರಸ್ತೆಯಾಗಿರುತ್ತದೆ ಹಾಗೂ ಒಂದು ವಾಣಿಜ್ಯ ಮುಂಗಟ್ಟು ಇರತಕ್ಕ ರಸ್ತೆಯಾಗಿರುತ್ತದೆ. ಈ ಬಗ್ಗೆ ಅಂದಿನ ಆಯುಕ್ತರು ಸ್ಥಳ ಪರಿಶೀಲಿಸಿ ಪರಿಷ್ಕೃತ ಅಂದಾಜು ಪಟ್ಟಿ ಸಲ್ಲಿಸಲು ನಿರ್ದೇಶನ ನೀಡಿರುವ ಮೇರೆಗೆ ಒಟ್ಟಾರೆ ರೂ. 224.20ಲಕ್ಷಗಳಿಗೆ ಪರಿಷ್ಕೃತ ಅಂದಾಜು ಪಟ್ಟಿಯನ್ನು ಸಲ್ಲಿಸಿ ಅನುಮೋದನೆ ಪಡೆಯಲಾಗಿರುತ್ತದೆ.

ಪರಿಷ್ಕೃತ ಅಂದಾಜು ಪಟ್ಟಿಗೆ ಒಟ್ಟು 5342.00ಚ.ಮೀ. ವಿಸ್ತೀರ್ಣಕ್ಕೆ ಕಾಂಕ್ರಿಟ್ ರಸ್ತೆ ನಿರ್ಮಾಣ ಮಾಡಲು ಮತ್ತು 670.00ಮೀ ಉದ್ದದ ಆರ್.ಸಿ.ಸಿ. ಚರಂಡಿಯನ್ನು ನಿರ್ಮಿಸಲು ಅನುವು ಮಾಡಿಕೊಂಡಿರುವುದನ್ನು ಅನುಮೋದನೆ ನೀಡಿಲಾಗಿದೆ. ಕಾಮಗಾರಿ ನಿರ್ವಹಣೆಗೆ ಅಂದಾಜು ಪಟ್ಟಿ ರೂ. 224.20ಲಕ್ಷಕ್ಕೆ ಅನುಮೋದನೆ ನೀಡಿದ್ದು, ಒಟ್ಟು 5342.00 ಚ.ಮೀ. ವಿಸ್ತೀರ್ಣ ಕಾಂಕ್ರಿಟ್ ಹಾಕಬೇಕಾಗಿದ್ದು, ಟೆಂಡರ್ ಮುಖಾಂತರ ಅನುಮೋದನೆಗೊಂಡಿರುವ ಕಾಮಗಾರಿಯಲ್ಲಿ 2500.00ಚ.ಮೀ. ವಿಸ್ತೀರ್ಣದಷ್ಟು ರಸ್ತೆಯನ್ನು ಮತ್ತು 300.00ಮೀ

ಆರ್.ಸಿ.ಸಿ. ಚರಂಡಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ. ಉಳಿಕೆ ಸುಮಾರು 2787.00ಚ.ಮೀ. ರಸ್ತೆಗೆ ಕಾಂಕ್ರಿಟ್ ಹಾಗೂ 370.00ಮೀ ಉದ್ದದ ಆರ್.ಸಿ.ಸಿ. ಚರಂಡಿ ಮತ್ತು ವಿಧ್ಯೂತ್ ಕಂಬಗಳನ್ನು ಬದಲಾಯಿಸಿ ಕೇಬಲ್ ಡಕ್ಟ್ ಹಾಕಲು ಒಟ್ಟಾರೆ ಅಂದಾಜು ಪಟ್ಟಿ (ರೂ. 65.70+ 52.00ಲಕ್ಷ) ರೂ. 117.74ಲಕ್ಷಕ್ಕೆ ಸಹ ಅನುಮೋದಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಉಳಿಕೆ ಕಾಮಗಾರಿಗೆ ಜಾಬ್ ಕೋಡ್ ನೀಡಲು ಮತ್ತು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅನುಷ್ಠಾನಗೊಳಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಕಾಮಗಾರಿ ಸ್ಥಾಯಿ ಸಮಿತಿ ಅನುಮೋದನೆಯನ್ನು ಈ ಕೆಳಕಂಡ ಅಂಶಗಳ ಮೇಲೆ ಕೋರಲಾಗಿದೆ.

1. ಈಗಾಗಲೇ ಅನುಮೋದನೆಗೊಂಡಿರುವ ಸದರಿ ಕಾಮಗಾರಿ ರೂ. 10592140.00ಗಳಿಗೆ ಪುನರ್ ನವೀಕರಣ ಮಾಡಿ ಜಾಬ್ ಸಂಖ್ಯೆ ನೀಡಲು ಕೋರಿದೆ.
2. ಹೆಚ್ಚುವರಿ ಮೊತ್ತ ರೂ. 11770000.00ಗಳಿಗೆ ಉಳಿಕೆ ಕಾಮಗಾರಿಯನ್ನು ಈ–ಪ್ರೋಕ್ಯೂರ್ಮೆಂಟ್ ಮುಖಾಂತರ ಕೈಗೆತ್ತಿಕೊಳ್ಳಲು ಆದೇಶಿಸಿದ್ದ ಮೇರೆಗೆ ಪ್ರತ್ಯೇಕವಾಗಿ ಈ ಕೆಳಕಂಡ ಅಂದಾಜುಗಳಿಗೆ ಜಾಬ್ ಸಂಖ್ಯೆ ದೊರಕಿಸಿಕೊಡಲು ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.

   "1. ವಾರ್ಡ್ ಸಂಖ್ಯೆ: 46ರ ಎಂ.ಆರ್. ಪಾಳ್ಯದ ಮುಖ್ಯ ರಸ್ತೆಗೆ ಸಿಮೆಂಟ್ ಕಾಂಕ್ರಿಟ್ ಒದಗಿಸುವ ಕಾಮಗಾರಿ ಅಂದಾಜು ಮೊತ್ತ ರೂ. 65.70ಲಕ್ಷಗಳು.

   2. ವಾರ್ಡ್ ಸಮ್ಖ್ಯೆ: 46ರ ಎಂ.ಆರ್. ಪಾಳ್ಯದ ಮುಖ್ಯ ರಸ್ತೆಗೆ ಆರ್.ಸಿ.ಸಿ. ಚರಂಡಿ ಮತ್ತು ಕೇಬಲ್ ಡಕ್ಟ್ ಒದಗಿಸುವ ಕಾಮಗಾರಿ ಅಂದಾಜು ಮೊತ್ತ ರೂ. 52.00ಲಕ್ಷಗಳು".

***ನಿರ್ಣಯ : ದಿನಾಂಕ : 29–01–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.***

## ***33]. ವಿಷಯದ ಸಂಖ್ಯೆ :–ತೆಆಸ್ಥಾಸ/447/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆಃ ಎ3(1)/ಪಿಆರ್/37/11–12, ದಿನಾಂಕ: 03–01–2012 ರಲ್ಲಿ ವಿವರಿಸಿರುವಂತೆ, ಸಹ ಕಂದಾಯ ಅಧಿಕಾರಿ ಚಿಕ್ಕಪೇಟೆ (ಬಿನ್ನಿಪೇಟೆ) ವಲಯದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂಖ್ಯೆ:31 ರಲ್ಲಿ ತಮ್ಮಯ್ಯಪ್ಪ ಪಾರ್ಕ್ ಹಿಂದಿನ ಕೊಳಚೆ ಪ್ರದೇಶದಲ್ಲಿ ವಾಸವಾಗಿರುವ 21 ಫಲಾನುಭವಿಗಳಿಗೆ ದಿನಾಂಕ:19–11–1991 ರಲ್ಲಿ ಪತಿ ಪತ್ನಿ ಇಬ್ಬರ ಹೆಸರಿಗೂ ಜಂಟಿಯಾಗಿ 10 ವರ್ಷದವರೆಗೂ ಬೇರೆ ಯಾರಿಗೂ ಮಾರಾಟ ಮಾಡಬಾರದೆಂಬ ಷರತ್ತಿನ ಮೇಲೆ ಸ್ವಾಧೀನ ಪತ್ರ ನೀಡಲಾಗಿರುತ್ತದೆ. ಅವರುಗಳು ಸದರಿ ಸ್ಥಳದಲ್ಲಿ ಕಟ್ಟಡಗಳನ್ನು ನಿರ್ಮಿಸಿಕೊಂಡು ವಾಸ ಮಾಡುತ್ತಿರುವುದಾಗಿ ತಿಳಿದು ಬಂದಿರುತ್ತದೆ.

ಸದರಿ ಸ್ಥಳದಲ್ಲಿ ಕಟ್ಟಡಗಳನ್ನು ನಿರ್ಮಿಸಿಕೊಂಡು ವಾಸಮಾಡುತ್ತಿರುವ ವಿಸ್ತೀರ್ಣದ ಅಳತೆಗಳು ಈ ಹಿಂದೆ ಅವರಿಗೆ ನೀಡಲಾಗಿರುವ ಸ್ವಾಧೀನ ಪತ್ರದಲ್ಲಿ ತಿಳಿಸಿರುವ ವಿಸ್ತೀರ್ಣಕ್ಕಿಂತ ಹೆಚ್ಚಾಗಿದ್ದು, ಈ ಬಗ್ಗೆ ಕಛೇರಿಯ ದಾಖಲಾತಿ ಪುಸ್ತಕದಲ್ಲಿ ಸಹ ಖಾತೆ ನೊಂದಾವಣಿಯಾಗಿದ್ದು, ಕಂದಾಯ ಸಹ ಪಾವತಿ ಮಾಡಿರುವುದಾಗಿ ತಿಳಿದು ಬಂದಿರುತ್ತದೆ. ಈ ರೀತಿ ಹೆಚ್ಚುವರಿ ವಿಸ್ತೀರ್ಣದಲ್ಲಿ ಫಲಾನುಭವಿಗಳು ಕಟ್ಟಿರುವ ವಿಸ್ತೀರ್ಣವನ್ನು ಸರಿಪಡಿಸುವ ವಿಚಾರದಲ್ಲಿ ಹಾಗೂ ಒತ್ತುವರಿಯಾಗಿ

ನಿರ್ಮಿಸಿಕೊಂಡಿರುವ ಜಾಗಕ್ಕೆ ಹಾಲಿ ಮಾರುಕಟ್ಟೆ ದರದಲ್ಲಿ ಹಣ ಪಾವತಿಸಿಕೊಂಡು ಕ್ರಯಕ್ಕೆ ನೀಡಬಹುದಾಗಿರುತ್ತದೆಂದು ವಲಯಾಧಿಕಾರಿಗಳು/ಜಂಟಿ ಆಯುಕ್ತರು (ಪಶ್ಚಿಮ) ರವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸುಮಾರು 10 ವರ್ಷಗಳಿಂದ ವಾಸವಾಗಿರುವ ಆರ್ಥಿಕವಾಗಿ ಹಿಂದುಳಿದವರು, ಬಡ ಕುಟುಂಬದವರಾಗಿರುವ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಜನಾಂಗಕ್ಕೆ ಸೇರಿದವರಾಗಿರುವ ಚಿಕ್ಕಪೇಟೆ (ಬಿನ್ನಿಪೇಟೆ) ವಲಯದ ತಮ್ಮಯ್ಯಪ್ಪ ಪಾರ್ಕ್ ಹಿಂದಿನ ಕೊಳಚೆ ಪ್ರದೇಶದ 21 ಫಲಾನುಭವಿಗಳಿಗೆ ಸ್ವಾಧೀನ ಪತ್ರದಲ್ಲಿ ತಿಳಿಸಿರುವ ವಿಸ್ತೀರ್ಣಕ್ಕಿಂತ ಹೆಚ್ಚುವರಿಯಾಗಿ ನಿರ್ಮಿಸಿಕೊಂಡಿರುವ ಈ ಪ್ರದೇಶದಲ್ಲಿ ದಿ:21–09–2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಚದರ ಅಡಿ ಒಂದಕ್ಕೆ ರೂ.1500/– ಗಳಾಗಿರುತ್ತದೆ. ಆದ್ದರಿಂದ ಹೆಚ್ಚುವರಿ ಜಾಗಕ್ಕೆ ಚದರ ಅಡಿ ಒಂದಕ್ಕೆ ರೂ.1500/– ಪಾವತಿಸಿಕೊಂಡು ಸದರಿ ಫಲಾನುಭವಿಗಳಿಗೆ ಕ್ರಯಪತ್ರ ನೀಡುವ ಬಗ್ಗೆ ಇತ್ತೀಚೀನ ಮಾರ್ಗಸೂಚಿ ದರಗಳಿಗೆ ಅನುಗುಣವಾಗಿ ದರವನ್ನು ನಿಗಧಿಪಡಿಸಿ, ಕ್ರಯಪತ್ರ ನೀಡಲು ಸರ್ಕಾರದ ಅನುಮೋದನೆ ಪಡೆಯುವ ಮಾನ್ಯ ಆಯುಕ್ತರ ದಿನಾಂಕ 03–01–2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24.01.2012ರ ನಿರ್ಣಯ.

***ನಿರ್ಣಯ :*** ***ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24–01–2012ರ ನಿರ್ಣಯವನ್ನು ಒಪ್ಪಿದೆ.***

## 34]. ವಿಷಯದ ಸಂಖ್ಯೆ :–ತೆಆಸ್ಥಾಸ/448/2011–12

ಆಯುಕ್ತರ ಟಿಪ್ಪಣಿ ಸಂಖ್ಯೆಃ ಎ3(4)/ಪಿಆರ್/178/11–12, ದಿನಾಂಕ: 10–01–2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್–119, ಮಾರಮ್ಮ ದೇವಸ್ಥಾನದ ಪಕ್ಕ ಕಲಾಸಿಪಾಳ್ಯ ಬಸ್ ನಿಲ್ದಾಣದ ಎದುರು ಪಾಲಿಕೆಯ 30x15 ಅಡಿಗಳ ಜಾಗವನ್ನು ಶ್ರೀಮತಿ. ವನಿತಾರವರಿಗೆ ದಿನಾಂಕ: 04–01–1989 ರಿಂದ 5–ವರ್ಷಗಳ ಅವಧಿಗೆ ವರ್ಕ್‌ಶಾಪ್ ನಡೆಸಲು ಮಾಸಿಕ 350/–ರೂ. ನಿಗಧಿಪಡಿಸಿ ಗುತ್ತಿಗೆಗೆ ನೀಡಲಾಗಿದ್ದು, ಗುತ್ತಿಗೆ ಅವಧಿ ಮುಗಿದಿರುತ್ತದೆ.

ಶ್ರೀ ಗೌಸ್ ಪಾಷಾರವರು ಅರ್ಜಿ ಸಲ್ಲಿಸಿ, ಈ ಗುತ್ತಿಗೆದಾರರ ಪತಿಯವರಾದ ಶ್ರೀ. ಪಳನಿರವರು ಗ್ಯಾರೇಜ್ ನಡೆಸುತ್ತಿದ್ದು, ಶ್ರೀ ಪಳನಿರವರು ಮರಣ ಹೊಂದಿರುವುದರಿಂದ, ಈ ಜಾಗದ ಉಸ್ತುವಾರಿ ತಾನೇ ನೋಡಿಕೊಳ್ಳುತ್ತಿದ್ದು, ಈ ಜಾಗವನ್ನು ಇಂದಿನ ಮಾರುಕಟ್ಟೆ ಬೆಲೆಗೆ ಕ್ರಯಕ್ಕೆ ಅಥವಾ ಗುತ್ತಿಗೆಗೆ ನೀಡಲು ಕೋರಿರುತ್ತಾರೆ.

ಈ ಬಗ್ಗೆ ವಲಯಾಧಿಕಾರಿಗಳು ಶ್ರೀಮತಿ. ವನಿತಾರವರಿಗೆ 5–ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿದ್ದು, ಈ ಸ್ವತ್ತನ್ನು ಶ್ರೀ ಗೌಸ್ ಪಾಷಾ ರವರಿಗೆ ಮರು ಗುತ್ತಿಗೆಗೆ ನೀಡಿದ್ದು, ಇವರು ಟ್ರಾವೆಲ್ಸ್ ಕಛೇರಿ ನಡೆಸುತ್ತಿರುತ್ತಾರೆ. ಸದರಿ ಗುತ್ತಿಗೆ ಅವಧಿ ಮುಗಿದಿರುವುದರಿಂದ ಹಾಗೂ ಶ್ರೀಮತಿ. ವನಿತಾರವರು ಮರು ಗುತ್ತಿಗೆ ನೀಡಿದ್ದು ಹಾಗೂ ಸದರಿ ಸ್ವತ್ತನ್ನು ಬೇರೆ ಉದ್ದೇಶಕ್ಕೆ ಬಳಸುತ್ತಿರುವುದಾಗಿ ವರದಿ ಮಾಡಿರುತ್ತಾರೆ. ಆದುದರಿಂದ, ಶ್ರೀಮತಿ. ವನಿತಾರವರಿಗೆ ನೀಡಿರುವ ಗುತ್ತಿಗೆ ರದ್ದುಪಡಿಸಿ, ಶ್ರೀ ಗೌಸ್ ಪಾಷಾರವರಿಗೆ ಗುತ್ತಿಗೆ ನೀಡುವ ಬಗ್ಗೆ ಸಂಬಂಧಿಸಿದ ಸ್ಥಾಯಿಸಮಿತಿ ಮತ್ತು ಪಾಲಿಕೆ ಸಭೆ ಮುಂದೆ ಸೂಕ್ತ ನಿರ್ಣಯಕ್ಕೆ ಮಂಡಿಸಲು ಅಭಿಪ್ರಾಯಿಸಲಾಗಿದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹೆಚ್ಚಿನ ಅವಧಿಗೆ ಸರ್ಕಾರದ ಪರವಾನಿಗೆ ಪಡೆಯಬೇಕು ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ.ಎಂ.ಡಿ./2002, ದಿನಾಂಕ:02–06–2003ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಠ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:21–09–2011ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ರೂ.7,280/–ಗಳಿದ್ದು, ಅರ್ಜಿದಾರರುಗಳು ಕೋರಿರುವ 30X15 ಅಡಿಗಳ ಜಾಗವು 450 ಚ.ಅಡಿಗಳಾಗುತ್ತದೆ. ಇದರಂತೆ 7280X450 = 32,76,000/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 3,27,600/– ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 27,300/– ರೂ.ಗಳಾಗುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಅರ್ಜಿದಾರರ ಮನವಿಯ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 10–01–2012ರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ಸ್ವತ್ತನ್ನು ಪಾಲಿಕೆಯ ವಶಕ್ಕೆ ಪಡೆಯಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24–01–2012.

***<u>ನಿರ್ಣಯ :</u>*** ***<u>ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24–01–2012ರ ನಿರ್ಣಯವನ್ನು ಒಪ್ಪಿದೆ.</u>***

## ***35]. ವಿಷಯದ ಸಂಖ್ಯೆ :–ತೆಆಸ್ಥಾಸ/449/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ: ಎ3(4)/ಪಿಆರ್/94/10–11, ದಿನಾಂಕ: 02–11–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್–167, 22ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಜಯನಗರ 3ನೇ ಬ್ಲಾಕ್, ಪಾಲಿಕೆ ಖಾಲಿ ನಿವೇಶನವನ್ನು ಪೆಟ್ಟಿ ಅಂಗಡಿಗೆ ಗುತ್ತಿಗೆ ನೀಡಲು ಶ್ರೀಮತಿ. ಬಸಮ್ಮ ರವರು ಕೋರಿರುತ್ತಾರೆ.

ಸ್ಥಳೀಯ ಅಧಿಕಾರಿಗಳ ಸ್ಥಳ ಪರಿಶೀಲಿಸಿ ನಕ್ಷೆಯೊಂದಿಗೆ ವರದಿಯಲ್ಲಿ ಅರ್ಜಿದಾರರು ಕೋರಿರುವ ಸ್ಥಳವು ಪಾಲಿಕೆ ನಿರ್ಮಿತ ಶೌಚಾಲಯದ ಹಿಂಭಾಗದ ದೊಡ್ಡಮೋರಿ ಮತ್ತು ಪಾಲಿಕೆ ಉದ್ಯಾನವನದ ಮಧ್ಯಭಾಗದ ಖಾಲಿ ಜಾಗವಾಗಿದ್ದು, ಅರ್ಜಿದಾರರು ಕೋರಿರುವ ಪೆಟ್ಟಿ ಅಂಗಡಿಗೆ ಸ್ಥಳವನ್ನು ಗುತ್ತಿಗೆಗೆ ನೀಡಲು ನಿಯಮಾನುಸಾರ ಮುಂದಿನ ಕ್ರಮಕ್ಕಾಗಿ ಕಡತ ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ಪರಿಶೀಲಿಸಲಾಗಿ ನಕ್ಷೆಯಂತೆ ಸ್ಥಳ ಲಭವಿದ್ದು, ತಾತ್ಕಾಲಿಕ ಪೆಟ್ಟಿ ಅಂಗಡಿ ಇಡುವ ಅರ್ಜಿದಾರರ ಕೋರಿಕೆಯನ್ನು ಪರಿಗಣಿಸುವ ಬಗ್ಗೆ ನಿರ್ಣಯಕ್ಕಾಗಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲು ಅಭಿಪ್ರಾಯಿಸಲಾಗಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ: ಉ.ಆ(ಕಂ)/ಪಿ.ಆರ್/115/01–02, ದಿನಾಂಕ: 01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಠ ಶೇ: 10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 21–09–2001ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ರೂ. 9100/–ಗಳಿದ್ದು, ಅರ್ಜಿದಾರರುಗಳು ಕೋರಿರುವ 10X10 ಅಡಿಗಳ ಜಾಗವು 100 ಚ.ಅಡಿಗಳಾಗುತ್ತದೆ. ಇದರಂತೆ 9100X100=9,10,000/– ರೂ. ಗಳಾಗುತ್ತದೆ. ಶೇ: 10%ರಷ್ಟು ವಾರ್ಷಿಕ ಗುತ್ತಿಗೆ ಹಣ 91,000/– ರೂ. ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 7585/– ರೂ. ಗಳಾಗುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆಯನ್ವಯ –1976ರ (6) ಹಾಗೂ (ಬಿ) II ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹೆಚ್ಚಿನ ಅವಧಿಗೆ ಸರ್ಕಾರದ ಪರವಾನಿಗೆ ಪಡೆಯಬೇಕು ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ.ಎಂ.ಡಿ/2002, ದಿನಾಂಕ: 02–06–2003ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಈ ಹಿನ್ನೆಲೆಯಲ್ಲಿ ನಗರಯೋಜನೆ ಅಭಿವೃದ್ದಿ ಸ್ಥಾಯಿ ಸಮಿತಿ ರವರು ಟಿಪ್ಪಣಿ ಪರಿಶೀಲಿಸಿ, ಪಾದಚಾರಿಗಳಿಗೆ ಅನಾನುಕೂಲವಾಗುವ ಹಿನ್ನೆಲೆಯಲ್ಲಿ ಮನವಿ ತಿಸ್ಕರಿಸಿರುತ್ತದೆ. ಅರ್ಜಿದಾರರು ಮತ್ತೊಮ್ಮೆ ಅರ್ಜಿ ಸಲ್ಲಿಸಿ, ಪಾದಚಾರಿಗಳಿಗೆ ಅನಾನುಕೂಲವಾಗುವುದಿಲ್ಲವೆಂದು ಮತ್ತೊಮ್ಮೆ ಪರಿಶೀಲಿಸಲು ಕೋರಿದ್ದು, ಈ ಬಗ್ಗೆ ವಲಯಾಧಿಕಾರಿಗಳು ಈ ಸ್ಥಳ ಪಾದಚಾರಿ ಮಾರ್ಗದಲ್ಲಿ ಬರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ನಕ್ಷೆ ಪರಿಶೀಲಿಸಲಾಗಿ ಪ್ರಸ್ತಾಪಿಸಿರುವ ಜಾಗದಲ್ಲಿ ರಾಜಕಾಲುವೆ ನಿರ್ವಹಣೆಗಾಗಿ ವಾಹನ ಸಂಚರಿಸುವುದು ಅತ್ಯವಶ್ಯಕವಾಗಿರುವುದರಿಂದ, ಈ ಜಾಗವನ್ನು ನೀಡುವುದು ಸೂಕ್ತವಾಗಿರುವುದಿಲ್ಲ

ವೆಂದು, ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ದಿನಾಂಕ: 02-11-2011ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಿ, ಸದರಿ ಅರ್ಜಿದಾರರು ಕೋರಿರುವ ಜಾಗದಲ್ಲಿ ರಾಜಕಾಲುವೆ ನಿರ್ವಹಣೆಗಾಗಿ ವಾಹನ ಸಂಚರಿಸುವುದು ಅತ್ಯಾವಶ್ಯಕವಾಗಿರುವ ಹಿನ್ನಲೆಯಲ್ಲಿ ಸದರಿ ಸ್ಥಳವನ್ನು ಗುತ್ತಿಗೆಗೆ ನೀಡುವುದು ಸಮಂಜಸವಲ್ಲವೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24-01-2012ರ ನಿರ್ಣಯ.

***ನಿರ್ಣಯ :*** ***ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24-01-2012ರ ನಿರ್ಣಯವನ್ನು ಒಪ್ಪಿದೆ.***

## ***36]. ವಿಷಯದ ಸಂಖ್ಯೆ :-ತೆಆಸ್ಥಾಸ/450/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆಃ ಎ3(4)/ಪಿಆರ್/42/10-11, ದಿನಾಂಕ: 03-01-2012 ರಲ್ಲಿ ವಿವರಿಸಿರುವಂತೆ, ವಾರ್ಡ್-144, ಲಾಲ್‌ಬಾಗ್ ಸಿದ್ದಾಪುರ ಮುಖ್ಯರಸ್ತೆ, ಗುಟ್ಟೆಪಾಳ್ಯದಲ್ಲಿನ 9600 ಚದರ ಅಡಿಗಳ ಪಾಲಿಕೆ ಸ್ವತ್ತನ್ನು ನ್ಯಾಷನಲ್ ಕೌನ್ಸಿಲ್ ಆಫ್ ವುಮೇನ್ ಇನ್ ಇಂಡಿಯಾ ರವರಿಗೆ ದಿನಾಂಕ:13-10-1980 ರಿಂದ 30 ವರ್ಷಗಳ ಅವಧಿಗೆ ವಾರ್ಷಿಕ ರೂ.200/- ಗುತ್ತಿಗೆ ಹಣ ನಿಗದಿಪಡಿಸಿ ಕೊಳಚೆ ಪ್ರದೇಶದ ಮಕ್ಕಳಿಗೆ ಶಾಲೆ ಹಾಗೂ ಇನ್ನಿತರೆ ಸೌಲಭ್ಯ ಒದಗಿಸುವ ಉದ್ದೇಶಕ್ಕೆ ಗುತ್ತಿಗೆಗೆ ನೀಡಲಾಗಿದ್ದು, ದಿನಾಂಕ:12-10-2010ಕ್ಕೆ ಗುತ್ತಿಗೆ ಅವಧಿ ಮುಗಿದಿರುತ್ತದೆ.

ನ್ಯಾಷನಲ್ ಕೌನ್ಸಿಲ್ ಆಫ್ ವುಮೇನ್ ಇನ್ ಇಂಡಿಯಾ ಸಂಸ್ಥೆಯವರು ಮನವಿ ಸಲ್ಲಿಸಿ ಸದರಿ ಸಂಸ್ಥೆಯು ಈ ಪ್ರದೇಶದಲ್ಲಿನ ಕೊಳಚೆ ಪ್ರದೇಶದಲ್ಲಿನ ಮಕ್ಕಳಿಗೆ ಶಿಶು ವಿಹಾರ ಮತ್ತು ವಯಸ್ಕರಿಗೆ ಹೊಲಿಗೆ ತರಬೇತಿ ಕೇಂದ್ರ, ವಯಸ್ಕರ ಶಿಕ್ಷಣ ಕೇಂದ್ರ, ಜಾಗೃತಿ ಕಾರ್ಯಕ್ರಮ, ವೈದ್ಯಕೀಯ ಶಿಬಿರ ಮತ್ತು ವೃತ್ತಿ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು ಗುತ್ತಿಗೆಯನ್ನು ಮುಂದಿನ 30 ವರ್ಷಗಳ ಅವಧಿಗೆ ನವೀಕರಿಸಲು ಕೋರಿರುತ್ತಾರೆ.

ಈ ಬಗ್ಗೆ ವಲಯಾಧಿಕಾರಿಗಳು ಸದರಿ ಸಂಸ್ಥೆಯವರು 2009-10ನೇ ಸಾಲಿನವರೆಗೆ ಗುತ್ತಿಗೆ ಹಣ ಪಾವತಿ ಮಾಡಿದ್ದು, ಸ್ಥಳದಲ್ಲಿ 20 ಚದರ ವಸತಿ ಕಟ್ಟಡವಿದ್ದು ಇಲ್ಲಿ ಶಿಶುವಿಹಾರ ಮತ್ತು ಹೊಲಿಗೆ ತರಬೇತಿ ಕೇಂದ್ರ ನಡೆಸುತ್ತಿದ್ದು, ಗುತ್ತಿಗೆ ನವೀಕರಿಸುವ ಬಗ್ಗೆ ಆದೇಶಕ್ಕಾಗಿ ಕಡತ ಮಂಡಿಸಿರುತ್ತಾರೆ.

ಸದರಿ ಸಂಸ್ಥೆಗೆ ಹಿಂದೆ ಗುತ್ತಿಗೆಗೆ ನೀಡಲಾಗಿದ್ದ ಒಟ್ಟು 9600 ಚದರ ಅಡಿ ಪ್ರದೇಶದ ಪೈಕಿ ಸ್ವತ್ತಿನ ಪೂರ್ವದ ಕಡೆ ಕಾವಲುಗಾರರ ಕೊಠಡಿ ಇರುವ ಕಟ್ಟಡ ಸೇರಿ 30*40 ಅಡಿಗಳ ಪ್ರದೇಶ ಮಾತ್ರ ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಿ ಉಳಿದ ಪ್ರದೇಶವನ್ನು ಪಾಲಿಕೆ ವಶಕ್ಕೆ ಪಡೆಯಲು ಅಭಿಪ್ರಾಯಿಸಲಾಗಿರುತ್ತದೆ.

ಪ್ರಸ್ತುತ ಜಾಗದ ವಿಸ್ತೀರ್ಣವು 30*40=1200 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ: 21-09-2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ವಸತಿಗೆ ಚದರ ಅಡಿ ಒಂದಕ್ಕೆ ರೂ.2500/- ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 1200x2500=3000000/-ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ:10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.300000/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.25000/- ಗಳಾಗುತ್ತದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಅ.ಕಂ/ಪಿಆರ್/115/01-02, ದಿನಾಂಕ:01-03-2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸ್ತುತ ಮಾರುಕಟ್ಟೆ ಬೆಲೆ ಕನಿಷ್ಠ ಶೇ 10% ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದೆಂದಿದೆ. ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂದಿದೆ.

ಈ ಮೇಲಿನ ಹಿನ್ನೆಲೆಯಲ್ಲಿ ನ್ಯಾಷನಲ್ ಕೌನ್ಸಿಲ್ ಆಫ್ ವುಮೇನ್ ಇನ್ ಇಂಡಿಯಾ ರವರಿಗೆ ನೀಡಿರುವ ಸ್ಥಳದ ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಗಳ ಅವಧಿಗೆ ನವೀಕರಿಸುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮೇರೆಗೆ ನ್ಯಾಷನಲ್ ಕೌನ್ಸಿಲ್ ಆಫ್ ವುಮೇನ್ ಇನ್ ಇಂಡಿಯಾ ರವರಿಗೆ ನೀಡಿರುವ ಸ್ಥಳದ ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಗಳ ಅವಧಿಗೆ ನವೀಕರಿಸುವ ಮಾನ್ಯ ಆಯುಕ್ತರ ದಿನಾಂಕ: 03-01-2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24.01.2012ರ ನಿರ್ಣಯ.

***ನಿರ್ಣಯ :*** ***ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24-01-2012 ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.500/-ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## 37]. ವಿಷಯದ ಸಂಖ್ಯೆ :-ತೆಆಸ್ಥಾಸ/451/2011-12

ಆಯುಕ್ತರ ಟಿಪ್ಪಣಿ ಸಂಖ್ಯೆ: ಎ3(2)/ಪಿಆರ್/26/11-12, ದಿನಾಂಕ: 10-06-2011 ರಲ್ಲಿ ವಿವರಿಸಿರುವಂತೆ, ದಿನಾಂಕ : 08.03.1977ರ ಸರ್ಕಾರಿ ಆದೇಶದಂತೆ ಪೂರ್ವ ವಲಯದಲ್ಲಿ ಬರುವ ಅಕ್ಕಿ ತಿಮ್ಮನಹಳ್ಳಿ, ಟ್ಯಾಂಕ್ ಬಂಡ್‌ನ 5-7.2 ಎಕರೆ ಪ್ರದೇಶವನ್ನು ಕರ್ನಾಟಕ ಹಾಕಿ ಅಸೋಸಿಯೇಷನ್ ಸಂಸ್ಥೆಗೆ ಈ ಕೆಳಕಂಡ ಷರತ್ತಿನ ಮೇಲೆ ವಾರ್ಷಿಕ ಗುತ್ತಿಗೆ ರೂ.100/-ಗಳನ್ನು ವಿಧಿಸಿ ಕರಾರು ನೊಂದಾಯಿಸಿದ ದಿನಾಂಕದಿಂದ 99 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದ್ದು, ದಿನಾಂಕ:22-06-1977ರಲ್ಲಿ ಕರಾರನ್ನು ನೊಂದಾಯಿಸಲಾಗಿರುತ್ತದೆ.

**ಷರತ್ತುಗಳ ವಿವರ**

1. ಗುತ್ತಿಗೆದಾರರು ನೀಡಲಾಗಿರುವ ಪ್ರದೇಶ ಹಾಕಿ ಕ್ರೀಡಾಂಗಣ ನಿರ್ಮಿಸಲು ಉಪಯೋಗಿಸುವುದು ಹೊರತು ಬೇರೆ ಯಾವ ಉದ್ದೇಶಕ್ಕೂ ಉಪಯೋಗಿಸಬಾರದು ಹಾಗೂ ಯಾವುದೇ ರೀತಿಯಲ್ಲಿ ಪರಬಾರೆಯೂ ಸಹ ಮಾಡಬಾರದು.
2. ಪ್ರಸ್ತುತ ಜಾಗದಲ್ಲಿ ಹಾಕಿ ಕ್ರೀಡಾಂಗಣ ನಿರ್ವಹಿಸದೇ ಇದ್ದ ಪಕ್ಷದಲ್ಲಿ ಸದರಿ ಸ್ವತ್ತನ್ನು ಯಾವುದೇ ಪರಿಹಾರ ಕೋರದೆ ಪಾಲಿಕೆಗೆ ಹಿಂದಿರುಗಿಸತಕ್ಕದ್ದು.
3. ಅತ್ಯಾಧುನಿಕ ಕ್ರೀಡಾಂಗಣ ನಿರ್ಮಿಸುವ ಉದ್ದೇಶಕ್ಕಾಗಿ ಆಗಾಗ್ಗೆ ನಿರ್ಮಿಸುವ ಕಟ್ಟಡಗಳ ಹೊರತು ಬೇರೆ ಉದ್ದೇಶಕ್ಕೆ ಉಪಯೋಗಿಸಬಾರದು.
4. ಪ್ರಸ್ತುತ ಜಾಗದ ಯಾವುದೇ ಭಾಗ ಯಾವುದೇ ಅವಧಿಯಲ್ಲಿ ಅವಶ್ಯವಿಲ್ಲವೆನಿಸಿದಲ್ಲಿ ಆ ಭಾಗವನ್ನು ಪರಿಹಾರವಿಲ್ಲದೆ ಪಾಲಿಕೆಗೆ ಹಿಂದಿರುಗಿಸುವುದು.
5. ಗುತ್ತಿಗೆದಾರರು ಪ್ರತಿ ವರ್ಷ ಜೂನ್-30ರ ಒಳಗಾಗಿ ವಾರ್ಷಿಕ ಗುತ್ತಿಗೆ ರೂಪಾಯಿ 100/- ಸಂದಾಯ ಮಾಡುವುದು.
6. ಗುತ್ತಿಗೆದಾರರು ಕರಾರಿನ ಯಾವುದೇ ಷರತ್ತು ಉಲ್ಲಂಘಿಸಿದಲ್ಲಿ ಪಾಲಿಕೆಯು ನೋಟಿಸು ನೀಡಿ ಆಸ್ತಿ ಕಟ್ಟಡಗಳ ಸಮೇತ ಯಾವುದೇ ಪರಿಹಾರ ನೀಡದೆ ವಶಕ್ಕೆ ಪಡೆಯಬಹುದು.
7. ಗುತ್ತಿಗೆದಾರರಿಂದ ಬಾಕಿ ಇರುವ ಮೊತ್ತವನ್ನು ಭೂ-ಕಂದಾಯದ ಬಾಕಿ ಎಂಬುದಾಗಿ ವಸೂಲಿ ಮಾಡಬಹುದು.
8. ಗುತ್ತಿಗೆ ಅವಧಿ ಮುಗಿದ ತರುವಾಯ ಗುತ್ತಿಗೆದಾರನು ಸ್ವತ್ತನ್ನು ಕಟ್ಟಡಗಳ ಸಮೇತ ಪಾಲಿಕೆಯ ವಶಕ್ಕೆ ನೀಡುವುದು. ವಿಫಲವಾದಲ್ಲಿ ಪಾಲಿಕೆಯು ಯಾವುದೇ ನ್ಯಾಯಾಲಯಕ್ಕೆ ಮೊರೆ ಹೋಗದೆ ಪರಿಹಾರವೂ ನೀಡದೆ ಸ್ವತ್ತನ್ನು ವಾಪಸ್ಸು ಪಡೆಯಬಹುದು.

ಕರ್ನಾಟಕ ವಿಧಾನ ಪರಿಷತ್ತು ಅರ್ಜಿ ಸಮಿತಿಗೆ ಶ್ರೀ.ನಾರಾಯಣಸ್ವಾಮಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಮುಖಾಂತರ ದೂರು ಸಲ್ಲಿಸಲಾಗಿದ್ದು, ಇದರಲ್ಲಿ ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯಲ್ಲಿ ಗುತ್ತಿಗೆಗೆ ನೀಡಲಾಗಿರುವ ಷರತ್ತನ್ನು ಉಲ್ಲಂಘಿಸಿರುವುದರಿಂದ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ಅರ್ಜಿ ಸಮಿತಿಯ ಸಭೆಗಳಲ್ಲಿ ಚರ್ಚಿಸಿದ ತರುವಾಯ ದಿನಾಂಕ 26-04-2011ರಂದು ಉಪ ಆಯುಕ್ತರು (ಆಸ್ತಿಗಳು) ಜಂಟಿ ಆಯುಕ್ತರು (ಪೂರ್ವ) ರವರು ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್‌ಗೆ ಭೇಟಿ ನೀಡಿ ಸ್ಥಳ ಪರೀಶೀಲನೆ ನಡೆಸಿ ಪರಿಶೀಲನಾ ವರದಿ ನೀಡಲಾಗಿರುವ ಪ್ರಮುಖ ಅಂಶಗಳು ಈ ಕೆಳಕಂಡಂತೆ ಇವೆ.

ಗುತ್ತಿಗೆಗೆ ನೀಡಿದ ಒಟ್ಟು ವಿಸ್ತೀರ್ಣ 2,49,163 ಚದರ ಅಡಿ ಪೈಕಿ ಕರ್ನಾಟಕ ರಾಜ್ಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯವರು 1997ರಲ್ಲಿ 4ನೇ ರಾಷ್ಟ್ರೀಯ ಕ್ರೀಡಾಕೂಟ ನಡೆದ ಸಂದರ್ಭದಲ್ಲಿ 2 ಸಿಂಥೆಟಿಕ್ ಹಾಕಿ ಪಿಚ್‌ಗಳನ್ನು ನಿರ್ಮಿಸಿ ಇಲಾಖೆಯ 1 ಕಛೇರಿ ಮತ್ತು ಭಾರತೀಯ ಕ್ರೀಡಾ ಪ್ರಾಧಿಕಾರ ನಿರ್ವಹಿಸುವ ವಸತಿ ನಿಲಯ ನಿರ್ಮಿಸಿ 1,62,894 ಚದರ ಅಡಿ ಪ್ರದೇಶ ರಾಜ್ಯ ಸರ್ಕಾರದ ಇಲಾಖೆಯ ನಿಯಂತ್ರಣದಲ್ಲಿ ಈವರೆವಿಗೂ ಇರುತ್ತದೆ.

ಹಾಕಿ ಅಸೋಸಿಯೇಷನ್ ಮತ್ತು ಕ್ರೀಡಾ ಇಲಾಖೆಯ ಮದ್ಯ ಬೈಲಾಟ್ರಲ್ ಎಂಒಯು ತಯಾರಿಸಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಗೆ ಸಲ್ಲಿಸಿದ್ದು, ಈವರೆವಿಗೂ ಅನುಮೋದನೆ ದೊರಕಿರುವುದಿಲ್ಲ. ಹಾಕಿ ಅಸೋಸಿಯೇಷನ್‌ರವರು ರಾಜ್ಯ ಸರ್ಕಾರದ ಮಟ್ಟದಲ್ಲಿರುವ ಎಲ್ಲಾ ಸಂಪನ್ಮೂಲಗಳನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಚಟುವಟಿಕೆಗಳನ್ನು ನಡೆಸುತ್ತಿದೆ.

1996ರಿಂದ ಸಂಘವು ಕ್ಲಬ್ ಹೌಸ್ ಕಾರ್ಯಚಟುವಟಿಕೆಗಳು ಪ್ರಾರಂಭಿಸಿದ್ದು, ಸದಸ್ಯರುಗಳ ಉಪಯೋಗಕ್ಕಾಗಿ ಈಜುಕೊಳ, ಉಪಹಾರ ಮಂದಿರ, ಬಿಲಿಯರ್ಡ್ಸ್, ಮತ್ತು ಸ್ನೂಕರ್ ಆಟದ ಕೊಠಡಿ, ಕಾರ್ಡ್ಸ್ ಆಟದ ಕೊಠಡಿ, ವ್ಯಾಯಾಮ ಶಾಲೆ, ಮದ್ಯಪಾನದ ಬಾರ್, ಮತ್ತು ಪಾರ್ಟಿಹಾಲ್‌ಗಳೊಂದಿಗೆ ಕಛೇರಿಗಳ ಕಟ್ಟಡವನ್ನು ಹೊಂದಿದ್ದು, ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಪ್ರದೇಶ ಹೊರತುಪಡಿಸಿ ಉಳಿದ ಪ್ರದೇಶ 86,869 ಚದರ ಅಡಿ ಸಂಘದ ಉಪಯೋಗದಲ್ಲಿರುತ್ತದೆ. ಈ ಪ್ರದೇಶಕ್ಕೆ ಪ್ರತ್ಯೇಕ ಖಾತೆಯು ಹೊಂದಿದ್ದು, ಕಟ್ಟಡ ನಿರ್ಮಾಣಕ್ಕಾಗಿ 2004ರಲ್ಲಿ ನಕ್ಷೆ ಮಂಜುರಾತಿ ಪಡೆದಿರುತ್ತಾರೆ. ಹಾಗೂ

ಈವರೆವಿಗೂ ಕರ ಇತ್ಯಾದಿಗಳನ್ನು ಪಾಲಿಕೆಗೆ ಸಂದಾಯ ಮಾಡಿರುತ್ತಾರೆ. 2010–11ನೇ ಸಾಲಿನಲ್ಲಿ ಸಂಘದ ಒಟ್ಟು ವಾರ್ಷಿಕ ಆದಾಯ 72,45,100/– ಗಳಿದ್ದು, ರೂ.66,55,451ರೂ ಗಳು ಖರ್ಚಾಗಿವೆ ಎಂಬುದನ್ನು ದಾಖಲಿಸಿದೆ.

ಗುತ್ತಿಗೆ ಕರಾರಿನ ಷರತ್ತಿನ ಅನ್ವಯ ಸಂಘವು ನೀಡಲಾಗಿರುವ ಪ್ರದೇಶ ಹಾಕಿ ಕ್ರೀಡಾಂಗಣ ನಿರ್ಮಿಸಲು ಮಾತ್ರ ಉಪಯೋಗಿಸಬೇಕು ಬೇರೆ ಯಾವ ಉದ್ದೇಶಕ್ಕು ಉಪಯೋಗಿಸಬಾರದು ಎಂಬುದಾಗಿದೆ. ಈ ರೀತಿ ನಿರ್ವಹಿಸದೆ ಇದ್ದ ಪಕ್ಷದಲ್ಲಿ ಸ್ವತ್ತನ್ನು ಯಾವುದೇ ಪರಿಹಾರ ಕೊಡದೆ ಪಾಲಿಕೆಗೆ ಹಿಂದುರಿಸತಕ್ಕದ್ದು, ಎಂಬುದಾಗಿರುತ್ತದೆ. ಷರತ್ತು ಉಲ್ಲಂಘಿಸಿದಲ್ಲಿ ಪಾಲಿಕೆಯು ನೋಟಿಸ ನೀಡಿ ಆಸ್ತಿ ಕಟ್ಟಡಗಳ ಸಮೇತ ವಶಕ್ಕೆ ಪಡೆಯಬಹುದಾಗಿದೆ.

ಈ ಹಿನ್ನೆಲೆಯಲ್ಲಿ ದಿನಾಂಕ:27–04–2011 ರಂದು ಅಧ್ಯಕ್ಷರು, ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್‌ಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿಮಾಡಿ ಉಲ್ಲಂಘನೆ ನಿಮಿತ್ತ ಗುತ್ತಿಗೆ ಕರಾರು ರದ್ದುಪಡಿಸಿ ಕಟ್ಟಡ ಸಮೇತ ಯಾವುದೇ ಪರಿಹಾರವಿಲ್ಲದೇ ಏಕೆ ವಾಪಸ್ಸು ಪಡೆಯಬಾರದು ಎಂಬುದಾಗಿ ವಿವರಣೆ ನೀಡಲು ಕೇಳಲಾಗಿತ್ತು.

ದಿನಾಂಕ:11–05–2011 ರಂದು ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್ ಸಂಸ್ಥೆಯ ಗೌರವ ಕಾರ್ಯದರ್ಶಿಯವರ ಈ ಕಾರಣ ಕೇಳಿ ನೀಡಿರುವ ನೋಟೀಸ್‌ಗೆ ಈ ಕೆಳಕಂಡಂತೆ ಉತ್ತರವನ್ನು ಸಲ್ಲಿಸಿರುತ್ತಾರೆ.

1. ಕಾರ್ಡ್ಸ್ ಆಟಕ್ಕೆ ಸಂಬಂಧಿಸಿದಂತೆ ವಿವರಿಸುತ್ತಾ ಈ ಆಟವು ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ "Leisure Sport", ಎಂಬುದಾಗಿ ಪರಿಗಣಿಸಲಾಗಿರುತ್ತದೆ. ಸಂಸ್ಥೆಯ ಬೈಲಾ ಅನುಸಾರ ಈ ಆಟವನ್ನು ಆಡಲು ಅವಕಾಶ ಕಲ್ಪಿಸಲಾಗಿದೆಯೇ ಹೊರತು ಜೂಜು ಅಥವಾ ವಾಣಿಜ್ಯ ಹಿತದೃಷ್ಟಿಯಿಂದಲ್ಲ ಎಂಬುದಾಗಿ ತಿಳಿಸಿರುತ್ತಾರೆ.

2. ಈ ಸಂಸ್ಥೆಯಲ್ಲಿ ಕ್ಲಬ್ ಹೌಸಿನ ಸೌಕರ್ಯಗಳು ಅಂದರೆ, ಸಾಮಾಜಿಕ ಚಟುವಟಿಕೆಗಳಿಗಾಗಿ ಸಭಾ ಭವನಗಳು ಅತಿಥಿಗಳಿಗೆ ಮತ್ತು ಸಂಸ್ಥೆಯ ಸದಸ್ಯರುಗಳಿಗೆ ಕೊಠಡಿಗಳನ್ನು ಹಾಕಿ ಪಂದ್ಯಾವಳಿ ಮತ್ತು ಕ್ಯಾಂಪ್ ನಡೆಯುವ ಸಮಯದಲ್ಲಿ ಕ್ರೀಡಾಪಟುಗಳ ಅವಶ್ಯಕತೆಗಳಿಗಾಗಿ ಕೇಂದ್ರ ಸರ್ಕಾರದ ಕ್ರೀಡಾ ಮತ್ತು ಸಾಂಸ್ಕೃತಿಕ ಇಲಾಖೆಯ ಮಾರ್ಗಸೂಚಿಯನುಸಾರ ನಿರ್ಮಿಸಿ ನಿರ್ವಹಿಸಲಾಗುತ್ತಿದೆ. ಇದಕ್ಕೆ ಪ್ರತಿ ವರ್ಷ ನೊಂದಾಯಿತ ಕೋಡ್ ಪಡೆದು ಲಕ್ಸರಿ ಟ್ಯಾಕ್ಸ್‌ನ್ನು ಸಹಾ ಪಾವತಿಸಲಾಗುತ್ತಿದೆಯೆಂದು ತಿಳಿಸಿರುತ್ತಾರೆ.

3. 15 ವರ್ಷಗಳ ಹಿಂದೆಯೇ ಅಬಕಾರಿ ಇಲಾಖೆಯ ಪರವಾನಿಗೆ ಪಡೆದು ಆ ಇಲಾಖೆಗೆ ಗುತ್ತಿಗೆ ಕರಾರನ್ನು ಸಹ ನೀಡಿ ಸಂಸ್ಥೆಯ ಸದಸ್ಯರುಗಳ ಉಪಯೋಗಕ್ಕಾಗಿ ಸಾಮಾಜಿಕ ಮತ್ತು "Leisure", ಚಟುವಟಿಕೆಯ ಭಾನವೆಯಿಂದ ಯಾವುದೇ ವಾಣಿಜ್ಯ ಹಿತದೃಷ್ಟಿಯಿಲ್ಲದೇ ಈ ಸೌಲಭ್ಯ ಉಪಯೋಗಿಸಲಾಗುತ್ತಿದೆ.

4. ಈ ಚಟುವಟಿಕೆಗಳು ಕ್ರೀಡಾ ಪೂರಕವಾಗಿದ್ದು, ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಮೋದನೆಗಳನ್ನು ಪಡೆದು ಗುತ್ತಿಗೆಗೆ ನೀಡಲಾಗಿರುವ ಪ್ರದೇಶದ ಅಲ್ಪ ಪ್ರದೇಶವನ್ನು ಉಪಯೋಗಿಸಲಾಗುತ್ತಿದೆ. ಇದು ಗುತ್ತಿಗೆ ಕರಾರಿನ ಉಲ್ಲಂಘನೆಯಾಗುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಹಾಗೂ ಈ ಕಾರ್ಯಗಳು ಉದ್ದೇಶ ಪೂರ್ವಕವಾಗಿ ಮಾಡದೇ ಇರುವುದರಿಂದ ಇದನ್ನು ಹಾಕಿ ಆಟದ ಬೆಳವಣಿಗೆಯ ದೃಷ್ಠಿಯಿಂದ ಮಾಡಲಾಗಿರುವುದರಿಂದ ವಿಶಾಲ ಮನೋಭಾವನೆಯಿಂದ ಈ ವಿವರಣೆಯನ್ನು ಪರಿಗಣಿಸಿ ಕರ್ನಾಟಕದಲ್ಲಿ ಹಾಕಿ ಆಟಕ್ಕೆ ಪ್ರೋತ್ಸಾಹ ನೀಡುವಲ್ಲಿ ಸಹಕಾರ ನೀಡಲು ಕೋರಿರುತ್ತಾರೆ.

ಮೇಲಿನ ವಿವರಣೆ ಪರಾಮರ್ಶಿಸಲಾಗಿ ಗುತ್ತಿಗೆ ಕರಾರು ಪತ್ರದಲ್ಲಿರುವ ನಿಬಂಧನೆಗಳಲ್ಲಿ ನೀಡಲಾಗಿರುವ ಪ್ರದೇಶ ಹಾಕಿ ಕ್ರೀಡಾಂಗಣ ನಿರ್ಮಿಸಲು ಉಪಯೋಗಿಸಬೇಕೇ ಹೊರತು ಬೇರೆ ಯಾವ ಉದ್ದೇಶಕ್ಕೂ ಬಳಸಬಾರದಾಗಿದ್ದು, ಹಾಕಿ ಸಂಸ್ಥೆಯು ನೀಡಿರುವ ವಿರಣೆಯು ಮನವರಿಕೆಯಾಗುವಂತಹದು ಇರುವುದಿಲ್ಲ.

ಆದುದರಿಂದ ಗುತ್ತಿಗೆ ರದ್ದು ಪಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಅವಶ್ಯಕವಾಗಿರುತ್ತದೆ. ಗುತ್ತಿಗೆಯ ಪಾಲಿಕೆಯ ಠರಾವಿನ ನಂತರ ಸರ್ಕಾರಿ ಆದೇಶದಂತೆ ಮಂಜೂರಾತಿ ನೀಡಿರುವುದರಿಂದ ಸಂಬಂಧಪಟ್ಟ

ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ನಿರ್ಣಯದೊಂದಿಗೆ ಗುತ್ತಿಗೆ ರದ್ದುಪಡಿಸಲು ಸರ್ಕಾರಕ್ಕೆ ಪ್ರಸ್ತಾಪಿಸಬಹುದಾಗಿದ್ದು, ಈ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮೇರೆಗೆ, ಕರ್ನಾಟಕ ಹಾಕಿ ಅಸೋಸಿಯೇಷನ್‌ರವರು ಲಾಭದಾಯಕವಾದ ಚಟುವಟಿಕೆಗಳನ್ನು ನಡೆಸುತಿದ್ದು, ಸದರಿ ಗುತ್ತಿಗೆಯನ್ನು ರದ್ದುಪಡಿಸುವ ದಿನಾಂಕ 10–06–2011ರ ಮಾನ್ಯ ಆಯುಕ್ತರ ಪ್ರಸ್ತಾವನೆಯನ್ನು ಮಾರ್ಪಡಿಸಿ, ಪಾಲಿಕೆಯ ಆದಾಯದ ಹಿತ ದೃಷ್ಟಿಯಿಂದ ವಾರ್ಷಿಕ ಗುತ್ತಿಗೆ ಮೊತ್ತವನ್ನು 18 ಲಕ್ಷ ರೂ ಗಳನ್ನು ನಿಗಧಿಪಡಿಸಿ ಗುತ್ತಿಗೆಯನ್ನು ಮುಂದುವರೆಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24.01.2012 ರ ನಿರ್ಣಯ.

*–ಮುಂದೂಡಿದೆ–*

## *38]. ವಿಷಯದ ಸಂಖ್ಯೆ :–ತೆಆಸ್ಥಾಸ/452/2011–12*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 01–02–2012 ರಲ್ಲಿ ವಿವರಿಸಿರುವಂತೆ, Relocation of HQT command compound wall along Sir C.V. Raman ಕಾಮಗಾರಿಗೆ 2007–08ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ1243 ಅಡಿ ವರ್ಕ್‌ಕೋಡ್ ನೀಡಲಾಗಿದೆ. ಮರುನವೀಕರಣಕ್ಕೆ ರೂ.278.39 ಅನುದಾನದ ಅವಶ್ಯವಿದ್ದು, 2011–12ನೇ ಸಾಲಿನ ಆಯವ್ಯಯದಲ್ಲಿ ಸದರಿ ಲೆಕ್ಕಶೀರ್ಷಿಕೆಯಡಿ ರೂ.100.00 ಲಕ್ಷ ಮಾತ್ರ ನಿಗಧಿ ಆಗಿರುತ್ತದೆ. ಲೆಕ್ಕಶೀರ್ಷಿಕೆ ಪಿ0537 ಅಡಿ ಮೀಸಲಿಟ್ಟ ರೂ.974.05 ಗಳ ಮುಂದುವರೆದ ಕಾಮಗಾರಿಗಳ ಅನುದಾನದಲ್ಲಿ ಪಿ1243ಗೆ ರೂ 178.39 ಗಳನ್ನು ಮರುಹೊಂದಾಣಿಕೆ ಮಾಡಿಕೊಂಡು ಮರು ನವೀಕರಿಸಲು, ಕರ್ನಾಟಕ ಮುನಿಸಿಪಲ್ ಕಾಯಿದೆ 1976ರ ಸೆಕ್ಷನ್ 172ರ ಪ್ರಕಾರ, ಮರುಹೊಂದಾಣಿಕೆ Re-appropriation (ಪ್ರಸ್ಥಾವನೆಯನ್ನು) ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ : ದಿನಾಂಕ : 01–02–2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಒಪ್ಪಿದೆ.*

## *ವಿಷಯದ ಸಂಖ್ಯೆ :–ತೆಆಸ್ಥಾಸ/453/2011–12*

*ನಿರ್ಣಯ : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ವತ್ತುಗಳಲ್ಲಿ ಸುಮಾರು 1000 ರಿಂದ 1200 ದೂರ ಸಂಪರ್ಕ ಗೋಪುರಗಳಿದ್ದು, ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಹೆಚ್ಚಿನ ಆಧಾಯವನ್ನು ಕ್ರೋಢಿಕರಿಸಿಕೊಂಡು ಆರ್ಥಿಕವಾಗಿ ಸದೃಢಗೊಳ್ಳಲು ತಲಾ ಒಂದು ಗೋಪುರಕ್ಕೆ ಮಾಸಿಕ ರೂ.2000/– (ಎರಡು ಸಾವಿರ) ಗಳಂತೆ ಬಾಡಿಗೆಯನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.*

ಜಿ. ಮಂಜುನಾಥ್‌ರಾಜು
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 27–02–2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀಯುತರುಗಳಾದ : | | |
| ಜಿ. ಮಂಜುನಾಥರಾಜು | – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ | – ಸದಸ್ಯರು | ಸಹಾಯಕ ಆಯುಕ್ತರು (ಆಸ್ತಿಗಳು), |
| ಲತಾ. ಕೆ | – ಸದಸ್ಯರು | ಶಿಕ್ಷಣಾಧಿಕಾರಿ, |
| ಎಂ.ಸಿ. ಶ್ರೀನಿವಾಸ್ | – ಸದಸ್ಯರು | ಮುಖ್ಯ ಅಭಿಯಂತರರು (ಬೃ.ನೀ.ಗಾ), |
| ವಿ. ವಾಗಿಶ್ | – ಸದಸ್ಯರು | ಸಹಾಯಕ ನಿರ್ದೇಶಕರು (ನಗರ ಯೋಜನೆ), |
| ಮಂಜುನಾಥ | – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ), (ಪೂರ್ವ), (ಕೆ.ಆರ್.ಪುರಂ), |
| ಎಲ್. ನಾಗರತ್ನ | – ಸದಸ್ಯರು | ಕಲ್ಯಾಣಾಧಿಕಾರಿ, |
| ವರಲಕ್ಷ್ಮಿ. ಜೆ | – ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಜೆ.ಜೆ.ಆರ್.ನಗರ), |
| ಆಶಾ ಸುರೇಶ್ | – ಸದಸ್ಯರು | |
| ಎನ್. ಜಯಪಾಲ | – ಸದಸ್ಯರು | |
| ಲಾವಣ್ಯಗಣೇಶ್‌ರೆಡ್ಡಿ | – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/349/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)95/2011–12, ದಿನಾಂಕ : 27–10–2011ರಲ್ಲಿ ವಿವರಿಸಿರುವಂತೆ, ಶ್ರೀ ಹೆಚ್. ಆರ್. ಪಾರ್ಥಸಾರಥಿ, ಕಾರ್ಯದರ್ಶಿ, ಕರ್ನಾಟಕ ರಾಜ್ಯೋತ್ಸವ ಸಮಿತಿ, ನೃಪತುಂಗ ಮಂಟಪ, ನಂ. 229, 4ನೇ ಮುಖ್ಯರಸ್ತೆ, ಎಸ್.ಬಿ.ಎಂ. ಬ್ಯಾಂಕ್ ಎದುರು, ಚಾಮರಾಜಪೇಟೆ, ಬೆಂಗಳೂರು – 560 018 ರವರು ಮನವಿ ಸಲ್ಲಿಸಿ, ಪ್ರತಿ ವರ್ಷದಂತೆ ಈ ವರ್ಷವೂ "ಕರ್ನಾಟಕ ರಾಜ್ಯೋತ್ಸವ"ವನ್ನು ನವೆಂಬರ್ 1 ರಂದು ಮೈಸೂರು ಬ್ಯಾಂಕ್ ಹತ್ತಿರ ಇರುವ ನೃಪತುಂಗ ಮಂಟಪದಲ್ಲಿ ಆಚರಿಸುತ್ತಿದ್ದು, ಪ್ರತೀ ವರ್ಷವೂ ಕರ್ನಾಟಕ ರಾಜ್ಯೋತ್ಸವಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಹಾಯಧನವನ್ನಾಗಿ ನೀಡುತ್ತಿದ್ದೀರೆಂದು ಕಳೆದ ವರ್ಷವೂ ನೇರಿದಂತೆ, ಈ ವರ್ಷವೂ ಕರ್ನಾಟಕ ರಾಜ್ಯೋತ್ಸವವನ್ನು ವೈಭವವಾಗಿ ಆಚರಿಸುವುದರಿಂದ ಪಾಲಿಕೆಯಿಂದ ರೂ. 25.00 ಲಕ್ಷಗಳನ್ನು ಸಹಾಯ ಧನವಾಗಿ ನೀಡಬೇಕಾಗಿ ಕೋರಿರುತ್ತಾರೆ.

ಸದರಿಯವರಿಗೆ 2008–09 ನೇ ಸಾಲಿನಲ್ಲಿ ರೂ. 5.00 ಲಕ್ಷಗಳ ಅನುದಾನ ಬಿಡುಗಡೆ ಯಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

*ನಿರ್ಣಯ : ಆಯುಕ್ತರ ಟಿಪ್ಪಣಿ ದಿನಾಂಕ 27/10/2011ರಲ್ಲಿ ಪ್ರಸ್ತಾಪಿಸಿರುವ ಸಮಿತಿಗೆ ರೂ.5.00ಲಕ್ಷ ಅನುದಾನ ನೀಡುವುದೆಂದು ನಿರ್ಣಯಿಸಲಾಗಿದೆ.*

## *02]. ವಿಷಯದ ಸಂಖ್ಯೆ :–ತೆಆಸ್ಥಾಸ/376/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)103/2011–12, ದಿನಾಂಕ : 05–11–2011ರಲ್ಲಿ ವಿವರಿಸಿರುವಂತೆ, ಶ್ರೀ ಜಿ. ಮಂಜುನಾಥ್ ರಾಜು, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮನವಿ ಸಲ್ಲಿಸಿ, ಮಾನ್ಯ ಉಪ ಮಹಾಪೌರರ ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ತಮ್ಮ ಪತ್ರದಲ್ಲಿ ಶ್ರೀಮತಿ ರೂಪಾ ಐಯ್ಯರ್, ವ್ಯವಸ್ಥಾಪಕರ ನಿರ್ದೇಶಕರು, ಇಂಡಿಯಾ ಕ್ಲಾಸಿಕ್ ಆರ್ಟ್ಸ್, ನಂ. 11, 1ನೇ ಕ್ರಾಸ್, 7ನೇ ಮುಖ್ಯರಸ್ತೆ, 7ನೇ ಬ್ಲಾಕ್, 4ನೇ ಹಂತ, ಬನಶಂಕರಿ 3ನೇ ಹಂತ, ಬೆಂಗಳೂರು – 560085. ವತಿಯಿಂದ ಯೂರೋಪ್ ದೇಶದಲ್ಲಿ ಪ್ರಪ್ರಥವಾಗಿ ವಿಶ್ವ ಕನ್ನಡ ಸಮ್ಮೇಳನ ಯೂರೋಪ್ 2011 ಎಂಬ ಕಾರ್ಯಕ್ರಮವನ್ನು 2011 ಅಕ್ಟೋಬರ್ 22 ಮತ್ತು 23 ರಂದು ನಡೆಸಲು ಉದ್ದೇಶಿಸಿರುವ ಮೇರೆಗೆ ಸದರಿ ಕನ್ನಡ ಕಾರ್ಯಕ್ರಮವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರು. 10.00 ಲಕ್ಷ ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸಿ, ಇಂಡಿಯಾ ಕ್ಲಾಸಿಕ್ ಆರ್ಟ್ಸ್ ರವರಿಗೆ ತುರ್ತಾಗಿ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ. 5.00 ಲಕ್ಷ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸಮಿತಿಯ ಮುಂದೆ ಸೂಕ್ತ ಟಿಪ್ಪಣಿಯನ್ನು ಮಂಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## *03]. ವಿಷಯದ ಸಂಖ್ಯೆ :–ತೆಆಸ್ಥಾಸ/451/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಎ3(2)/ಪಿಆರ್/26/11–12, ದಿನಾಂಕ: 10–06–2011 ರಲ್ಲಿ ವಿವರಿಸಿರುವಂತೆ, ದಿನಾಂಕ : 08.03.1977ರ ಸರ್ಕಾರಿ ಆದೇಶದಂತೆ ಪೂರ್ವ ವಲಯದಲ್ಲಿ ಬರುವ ಅಕ್ಕಿ ತಿಮ್ಮನಹಳ್ಳಿ, ಟ್ಯಾಂಕ್ ಬಂಡ್‌ನ 5–7.2 ಎಕರೆ ಪ್ರದೇಶವನ್ನು ಕರ್ನಾಟಕ ಹಾಕಿ ಅಸೋಸಿಯೇಷನ್ ಸಂಸ್ಥೆಗೆ ಈ ಕೆಳಕಂಡ ಷರತ್ತಿನ ಮೇಲೆ ವಾರ್ಷಿಕ ಗುತ್ತಿಗೆ ರೂ.100/– ಗಳನ್ನು ವಿಧಿಸಿ ಕರಾರು ನೊಂದಾಯಿಸಿದ ದಿನಾಂಕದಿಂದ 99 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದ್ದು, ದಿನಾಂಕ:22.06.1977ರಲ್ಲಿ ಕರಾರನ್ನು ನೊಂದಾಯಿಸಲಾಗಿರುತ್ತದೆ.

**ಷರತ್ತುಗಳ ವಿವರ**

1. ಗುತ್ತಿಗೆದಾರರು ನೀಡಲಾಗಿರುವ ಪ್ರದೇಶ ಹಾಕಿ ಕ್ರೀಡಾಂಗಣ ನಿರ್ಮಿಸಲು ಉಪಯೋಗಿಸುವುದು ಹೊರತು ಬೇರೆ ಯಾವ ಉದ್ದೇಶಕ್ಕೂ ಉಪಯೋಗಿಸಬಾರದು ಹಾಗೂ ಯಾವುದೇ ರೀತಿಯಲ್ಲಿ ಪರಬಾರೆಯೂ ಸಹ ಮಾಡಬಾರದು.
2. ಪ್ರಸ್ತುತ ಜಾಗದಲ್ಲಿ ಹಾಕಿ ಕ್ರೀಡಾಂಗಣ ನಿರ್ವಹಿಸದೇ ಇದ್ದ ಪಕ್ಷದಲ್ಲಿ ಸದರಿ ಸ್ವತ್ತನ್ನು ಯಾವುದೇ ಪರಿಹಾರ ಕೋರದೆ ಪಾಲಿಕೆಗೆ ಹಿಂದಿರುಗಿಸತಕ್ಕದ್ದು.
3. ಅತ್ಯಾಧುನಿಕ ಕ್ರೀಡಾಂಗಣ ನಿರ್ಮಿಸುವ ಉದ್ದೇಶಕ್ಕಾಗಿ ಆಗಾಗ್ಗೆ ನಿರ್ಮಿಸುವ ಕಟ್ಟಡಗಳ ಹೊರತು ಬೇರೆ ಉದ್ದೇಶಕ್ಕೆ ಉಪಯೋಗಿಸಬಾರದು.
4. ಪ್ರಸ್ತುತ ಜಾಗದ ಯಾವುದೇ ಭಾಗ ಯಾವುದೇ ಅವಧಿಯಲ್ಲಿ ಅವಶ್ಯವಿಲ್ಲವೆನಿಸಿದಲ್ಲಿ ಆ ಭಾಗವನ್ನು ಪರಿಹಾರವಿಲ್ಲದೆ ಪಾಲಿಕೆಗೆ ಹಿಂದಿರುಗಿಸುವುದು.
5. ಗುತ್ತಿಗೆದಾರರು ಪ್ರತಿ ವರ್ಷ ಜೂನ್–30ರ ಒಳಗಾಗಿ ವಾರ್ಷಿಕ ಗುತ್ತಿಗೆ ರೂಪಾಯಿ 100/– ಸಂದಾಯ ಮಾಡುವುದು.
6. ಗುತ್ತಿಗೆದಾರರು ಕರಾರಿನ ಯಾವುದೇ ಷರತ್ತು ಉಲ್ಲಂಘಿಸಿದಲ್ಲಿ ಪಾಲಿಕೆಯು ನೋಟಿಸು ನೀಡಿ ಆಸ್ತಿ ಕಟ್ಟಡಗಳ ಸಮೇತ ಯಾವುದೇ ಪರಿಹಾರ ನೀಡದೆ ವಶಕ್ಕೆ ಪಡೆಯಬಹುದು.
7. ಗುತ್ತಿಗೆದಾರರಿಂದ ಬಾಕಿ ಇರುವ ಮೊತ್ತವನ್ನು ಭೂ–ಕಂದಾಯದ ಬಾಕಿ ಎಂಬುದಾಗಿ ವಸೂಲಿ ಮಾಡಬಹುದು.

8. ಗುತ್ತಿಗೆ ಅವಧಿ ಮುಗಿದ ತರುವಾಯ ಗುತ್ತಿಗೆದಾರನು ಸ್ವತ್ತನ್ನು ಕಟ್ಟಡಗಳ ಸಮೇತ ಪಾಲಿಕೆಯ ವಶಕ್ಕೆ ನೀಡುವುದು. ವಿಫಲವಾದಲ್ಲಿ ಪಾಲಿಕೆಯು ಯಾವುದೇ ನ್ಯಾಯಾಲಯಕ್ಕೆ ಮೊರೆ ಹೋಗದೆ ಪರಿಹಾರವೂ ನೀಡದೆ ಸ್ವತ್ತನ್ನು ವಾಪಸ್ಸು ಪಡೆಯಬಹುದು.

ಕರ್ನಾಟಕ ವಿಧಾನ ಪರಿಷತ್ತು ಅರ್ಜಿ ಸಮಿತಿಗೆ ಶ್ರೀ.ನಾರಾಯಣಸ್ವಾಮಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಮುಖಾಂತರ ದೂರು ಸಲ್ಲಿಸಲಾಗಿದ್ದು, ಇದರಲ್ಲಿ ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯಲ್ಲಿ ಗುತ್ತಿಗೆಗೆ ನೀಡಲಾಗಿರುವ ಷರತ್ತನ್ನು ಉಲ್ಲಂಘಿಸಿರುವುದರಿಂದ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ಅರ್ಜಿ ಸಮಿತಿಯ ಸಭೆಗಳಲ್ಲಿ ಚರ್ಚಿಸಿದ ತರುವಾಯ ದಿನಾಂಕ 26–04–2011ರಂದು ಉಪ ಆಯುಕ್ತರು (ಆಸ್ತಿಗಳು) ಜಂಟಿ ಆಯುಕ್ತರು (ಪೂರ್ವ) ರವರು ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್‌ಗೆ ಭೇಟಿ ನೀಡಿ ಸ್ಥಳ ಪರೀಶೀಲನೆ ನಡೆಸಿ ಪರಿಶೀಲನಾ ವರದಿ ನೀಡಲಾಗಿರುವ ಪ್ರಮುಖ ಅಂಶಗಳು ಈ ಕೆಳಕಂಡಂತೆ ಇವೆ.

ಗುತ್ತಿಗೆಗೆ ನೀಡಿದ ಒಟ್ಟು ವಿಸ್ತೀರ್ಣ 2,49,163 ಚದರ ಅಡಿ ಪೈಕಿ ಕರ್ನಾಟಕ ರಾಜ್ಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯವರು 1997ರಲ್ಲಿ 4ನೇ ರಾಷ್ಟ್ರೀಯ ಕ್ರೀಡಾಕೂಟ ನಡೆದ ಸಂದರ್ಭದಲ್ಲಿ 2 ಸಿಂಥೆಟಿಕ್ ಹಾಕಿ ಪಿಚ್‌ಗಳನ್ನು ನಿರ್ಮಿಸಿ ಇಲಾಖೆಯ 1 ಕಛೇರಿ ಮತ್ತು ಭಾರತೀಯ ಕ್ರೀಡಾ ಪ್ರಾಧಿಕಾರ ನಿರ್ವಹಿಸುವ ವಸತಿ ನಿಲಯ ನಿರ್ಮಿಸಿ 1,62,894 ಚದರ ಅಡಿ ಪ್ರದೇಶ ರಾಜ್ಯ ಸರ್ಕಾರದ ಇಲಾಖೆಯ ನಿಯಂತ್ರಣದಲ್ಲಿ ಈವರೆವಿಗೂ ಇರುತ್ತದೆ.

ಹಾಕಿ ಅಸೋಸಿಯೇಷನ್ ಮತ್ತು ಕ್ರೀಡಾ ಇಲಾಖೆಯ ಮದ್ಯ ಬೈಲಾಟ್ರಲ್ ಎಂಒಯು ತಯಾರಿಸಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಗೆ ಸಲ್ಲಿಸಿದ್ದು, ಈವರೆವಿಗೂ ಅನುಮೋದನೆ ದೊರಕಿರುವುದಿಲ್ಲ. ಹಾಕಿ ಅಸೋಸಿಯೇಷನ್‌ರವರು ರಾಜ್ಯ ಸರ್ಕಾರದ ಮಟ್ಟದಲ್ಲಿರುವ ಎಲ್ಲಾ ಸಂಪನ್ಮೂಲಗಳನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಚಟುವಟಿಕೆಗಳನ್ನು ನಡೆಸುತ್ತಿದೆ.

1996ರಿಂದ ಸಂಘವು ಕ್ಲಬ್ ಹೌಸ್ ಕಾರ್ಯಚಟುವಟಿಕೆಗಳು ಪ್ರಾರಂಭಿಸಿದ್ದು, ಸದಸ್ಯರುಗಳ ಉಪಯೋಗಕ್ಕಾಗಿ ಈಜುಕೊಳ, ಉಪಹಾರ ಮಂದಿರ, ಬಿಲಿಯರ್ಡ್ಸ್, ಮತ್ತು ಸ್ನೂಕರ್ ಆಟದ ಕೊಣೆ, ಕಾರ್ಡ್ಸ್ ಆಟದ ಕೊಣೆ, ವ್ಯಾಯಾಮ ಶಾಲೆ, ಮದ್ಯಪಾನದ ಬಾರ್, ಮತ್ತು ಪಾರ್ಟಿಹಾಲ್‌ಗಳೊಂದಿಗೆ ಕಛೇರಿಗಳ ಕಟ್ಟಡವನ್ನು ಹೊಂದಿದ್ದು, ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಪ್ರದೇಶ ಹೊರತುಪಡಿಸಿ ಉಳಿದ ಪ್ರದೇಶ 86,869 ಚದರ ಅಡಿ ಸಂಘದ ಉಪಯೋಗದಲ್ಲಿರುತ್ತದೆ. ಈ ಪ್ರದೇಶಕ್ಕೆ ಪ್ರತ್ಯೇಕ ಖಾತೆಯು ಹೊಂದಿದ್ದು, ಕಟ್ಟಡ ನಿರ್ಮಾಣಕ್ಕಾಗಿ 2004ರಲ್ಲಿ ನಕ್ಷೆ ಮಂಜುರಾತಿ ಪಡೆದಿರುತ್ತಾರೆ. ಹಾಗೂ ಈವರೆವಿಗೂ ಕರ ಇತ್ಯಾದಿಗಳನ್ನು ಪಾಲಿಕೆಗೆ ಸಂದಾಯ ಮಾಡಿರುತ್ತಾರೆ. 2010–11ನೇ ಸಾಲಿನಲ್ಲಿ ಸಂಘದ ಒಟ್ಟು ವಾರ್ಷಿಕ ಆದಾಯ 72,45,100/– ಗಳಿದ್ದು, ರೂ.66,55,451ರೂ ಗಳು ಖರ್ಚಾಗಿವೆ ಎಂಬುದನ್ನು ದಾಖಲಿಸಿದೆ.

ಗುತ್ತಿಗೆ ಕರಾರಿನ ಷರತ್ತಿನ ಅನ್ವಯ ಸಂಘವು ನೀಡಲಾಗಿರುವ ಪ್ರದೇಶ ಹಾಕಿ ಕ್ರೀಡಾಂಗಣ ನಿರ್ಮಿಸಲು ಮಾತ್ರ ಉಪಯೋಗಿಸಬೇಕು ಬೇರೆ ಯಾವ ಉದ್ದೇಶಕ್ಕು ಉಪಯೋಗಿಸಬಾರದು ಎಂಬುದಾಗಿದೆ. ಈ ರೀತಿ ನಿರ್ವಹಿಸದೆ ಇದ್ದ ಪಕ್ಷದಲ್ಲಿ ಸ್ವತ್ತನ್ನು ಯಾವುದೇ ಪರಿಹಾರ ಕೊಡದೆ ಪಾಲಿಕೆಗೆ ಹಿಂದುರಿಸತಕ್ಕದ್ದು, ಎಂಬುದಾಗಿರುತ್ತದೆ. ಷರತ್ತು ಉಲ್ಲಂಘಿಸಿದಲ್ಲಿ ಪಾಲಿಕೆಯು ನೋಟಿಸ ನೀಡಿ ಆಸ್ತಿ ಕಟ್ಟಡಗಳ ಸಮೇತ ವಶಕ್ಕೆ ಪಡೆಯಬಹುದಾಗಿದೆ.

ಈ ಹಿನ್ನೆಲೆಯಲ್ಲಿ ದಿನಾಂಕ:27–04–2011 ರಂದು ಅಧ್ಯಕ್ಷರು, ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್‌ಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿಮಾಡಿ ಉಲ್ಲಂಘನೆ ನಿಮಿತ್ತ ಗುತ್ತಿಗೆ ಕರಾರು ರದ್ದುಪಡಿಸಿ ಕಟ್ಟಡ ಸಮೇತ ಯಾವುದೇ ಪರಿಹಾರವಿಲ್ಲದೇ ಏಕೆ ವಾಪಸ್ಸು ಪಡೆಯಬಾರದು ಎಂಬುದಾಗಿ ವಿವರಣೆ ನೀಡಲು ಕೇಳಲಾಗಿತ್ತು.

ದಿನಾಂಕ:11–05–2011 ರಂದು ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್ ಸಂಸ್ಥೆಯ ಗೌರವ ಕಾರ್ಯದರ್ಶಿಯವರ ಈ ಕಾರಣ ಕೇಳಿ ನೀಡಿರುವ ನೋಟೀಸ್‌ಗೆ ಈ ಕೆಳಕಂಡಂತೆ ಉತ್ತರವನ್ನು ಸಲ್ಲಿಸಿರುತ್ತಾರೆ.

1. ಕಾರ್ಡ್ಸ್ ಆಟಕ್ಕೆ ಸಂಬಂಧಿಸಿದಂತೆ ವಿವರಿಸುತ್ತಾ ಈ ಆಟವು ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ "Leisure Sport", ಎಂಬುದಾಗಿ ಪರಿಗಣಿಸಲಾಗಿರುತ್ತದೆ. ಸಂಸ್ಥೆಯ ಬೈಲಾ ಅನುಸಾರ ಈ ಆಟವನ್ನು ಆಡಲು ಅವಕಾಶ ಕಲ್ಪಿಸಲಾಗಿದೆಯೇ ಹೊರತು ಜೂಜು ಅಥವಾ ವಾಣಿಜ್ಯ ಹಿತದೃಷ್ಟಿಯಿಂದಲ್ಲ ಎಂಬುದಾಗಿ ತಿಳಿಸಿರುತ್ತಾರೆ.

2. ಈ ಸಂಸ್ಥೆಯಲ್ಲಿ ಕ್ಲಬ್ ಹೌಸಿನ ಸೌಕರ್ಯಗಳು ಅಂದರೆ, ಸಾಮಾಜಿಕ ಚಟುವಟಿಕೆಗಳಿಗಾಗಿ ಸಭಾ ಭವನಗಳು ಅತಿಥಿಗಳಿಗೆ ಮತ್ತು ಸಂಸ್ಥೆಯ ಸದಸ್ಯರುಗಳಿಗೆ ಕೊಠಡಿಗಳನ್ನು ಹಾಕಿ ಪಂದ್ಯಾವಳಿ ಮತ್ತು ಕ್ಯಾಂಪ್ ನಡೆಯುವ ಸಮಯದಲ್ಲಿ ಕ್ರೀಡಾಪಟುಗಳ ಅವಶ್ಯಕತೆಗಳಿಗಾಗಿ ಕೇಂದ್ರ ಸರ್ಕಾರದ ಕ್ರೀಡಾ ಮತ್ತು ಸಾಂಸ್ಕೃತಿಕ ಇಲಾಖೆಯ ಮಾರ್ಗಸೂಚಿಯನುಸಾರ ನಿರ್ಮಿಸಿ ನಿರ್ವಹಿಸಲಾಗುತ್ತಿದೆ. ಇದಕ್ಕೆ ಪ್ರತಿ ವರ್ಷ ನೊಂದಾಯಿತ ಕೋಡ್ ಪಡೆದು ಲಕ್ಸರಿ ಟ್ಯಾಕ್ಸ್‌ನ್ನು ಸಹಾ ಪಾವತಿಸಲಾಗುತ್ತಿದೆಯೆಂದು ತಿಳಿಸಿರುತ್ತಾರೆ.

3. 15 ವರ್ಷಗಳ ಹಿಂದೆಯೇ ಅಬಕಾರಿ ಇಲಾಖೆಯ ಪರವಾನಿಗೆ ಪಡೆದು ಆ ಇಲಾಖೆಗೆ ಗುತ್ತಿಗೆ ಕರಾರನ್ನು ಸಹ ನೀಡಿ ಸಂಸ್ಥೆಯ ಸದಸ್ಯರುಗಳ ಉಪಯೋಗಕ್ಕಾಗಿ ಸಾಮಾಜಿಕ ಮತ್ತು "Leisure", ಚಟುವಟಿಕೆಯ ಭಾನವೆಯಿಂದ ಯಾವುದೇ ವಾಣಿಜ್ಯ ಹಿತದೃಷ್ಟಿಯಿಲ್ಲದೇ ಈ ಸೌಲಭ್ಯ ಉಪಯೋಗಿಸಲಾಗುತ್ತಿದೆ.

4. ಈ ಚಟುವಟಿಕೆಗಳು ಕ್ರೀಡಾ ಪೂರಕವಾಗಿದ್ದು, ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಮೋದನೆಗಳನ್ನು ಪಡೆದು ಗುತ್ತಿಗೆಗೆ ನೀಡಲಾಗಿರುವ ಪ್ರದೇಶದ ಅಲ್ಪ ಪ್ರದೇಶವನ್ನು ಉಪಯೋಗಿಸಲಾಗುತ್ತಿದೆ. ಇದು ಗುತ್ತಿಗೆ ಕರಾರಿನ ಉಲ್ಲಂಘನೆಯಾಗುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಹಾಗೂ ಈ ಕಾರ್ಯಗಳು ಉದ್ದೇಶ ಪೂರ್ವಕವಾಗಿ ಮಾಡದೇ ಇರುವುದರಿಂದ ಇದನ್ನು ಹಾಕಿ ಆಟದ ಬೆಳವಣಿಗೆಯ ದೃಷ್ಠಿಯಿಂದ ಮಾಡಲಾಗಿರುವುದರಿಂದ ವಿಶಾಲ ಮನೋಭಾವನೆಯಿಂದ ಈ ವಿವರಣೆಯನ್ನು ಪರಿಗಣಿಸಿ ಕರ್ನಾಟಕದಲ್ಲಿ ಹಾಕಿ ಆಟಕ್ಕೆ ಪ್ರೋತ್ಸಾಹ ನೀಡುವಲ್ಲಿ ಸಹಕಾರ ನೀಡಲು ಕೋರಿರುತ್ತಾರೆ.

ಮೇಲಿನ ವಿವರಣೆ ಪರಾಮರ್ಶಿಸಲಾಗಿ ಗುತ್ತಿಗೆ ಕರಾರು ಪತ್ರದಲ್ಲಿರುವ ನಿಬಂಧನೆಗಳಲ್ಲಿ ನೀಡಲಾಗಿರುವ ಪ್ರದೇಶ ಹಾಕಿ ಕ್ರೀಡಾಂಗಣ ನಿರ್ಮಿಸಲು ಉಪಯೋಗಿಸಬೇಕೇ ಹೊರತು ಬೇರೆ ಯಾವ ಉದ್ದೇಶಕ್ಕೂ ಬಳಸಬಾರದಾಗಿದ್ದು, ಹಾಕಿ ಸಂಸ್ಥೆಯು ನೀಡಿರುವ ವಿರಣೆಯು ಮನವರಿಕೆಯಾಗುವಂತಹದು ಇರುವುದಿಲ್ಲ.

ಆದುದರಿಂದ ಗುತ್ತಿಗೆ ರದ್ದು ಪಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಅವಶ್ಯಕವಾಗಿರುತ್ತದೆ. ಗುತ್ತಿಗೆಯ ಪಾಲಿಕೆಯ ಠರಾವಿನ ನಂತರ ಸರ್ಕಾರಿ ಆದೇಶದಂತೆ ಮಂಜೂರಾತಿ ನೀಡಿರುವುದರಿಂದ ಸಂಬಂಧಪಟ್ಟ

ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ನಿರ್ಣಯದೊಂದಿಗೆ ಗುತ್ತಿಗೆ ರದ್ದುಪಡಿಸಲು ಸರ್ಕಾರಕ್ಕೆ ಪ್ರಸ್ತಾಪಿಸಬಹುದಾಗಿದ್ದು, ಈ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮೇರೆಗೆ, ಕರ್ನಾಟಕ ಹಾಕಿ ಅಸೋಸಿಯೇಷನ್‌ರವರು ಲಾಭದಾಯಕವಾದ ಚಟುವಟಿಕೆಗಳನ್ನು ನಡೆಸುತಿದ್ದು, ಸದರಿ ಗುತ್ತಿಗೆಯನ್ನು ರದ್ದುಪಡಿಸುವ ದಿನಾಂಕ 10-06-2011ರ ಮಾನ್ಯ ಆಯುಕ್ತರ ಪ್ರಸ್ತಾವನೆಯನ್ನು ಮಾರ್ಪಡಿಸಿ, ಪಾಲಿಕೆಯ ಆದಾಯದ ಹಿತ ದೃಷ್ಟಿಯಿಂದ ವಾರ್ಷಿಕ ಗುತ್ತಿಗೆ ಮೊತ್ತವನ್ನು 18 ಲಕ್ಷ ರೂ ಗಳನ್ನು ನಿಗಧಿಪಡಿಸಿ ಗುತ್ತಿಗೆಯನ್ನು ಮುಂದುವರೆಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24.01.2012 ರ ನಿರ್ಣಯ.

**-ಮುಂದೂಡಿದೆ-**

## 04]. ವಿಷಯದ ಸಂಖ್ಯೆ :-ತೆಆಸ್ಥಾಸ/454/2011-12

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)127/11-12, ದಿನಾಂಕ : 02-02-2012 ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು, ಭಾರತೀಯ ಸಾಮಗಾನ ಸಭಾ, ನಂ. 8, 4ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018. ರವರು ನೀಡಿರುವ ಪತ್ರವನ್ನು ಲಗತ್ತಿಸುತ್ತಾ, ಸದರಿ ಸಂಸ್ಥೆಯವರು ಬೆಂಗಳೂರಿನ ನಾಗರೀಕರಿಗೆ ನಿರಂತರವಾಗಿ ಶಾಸ್ತ್ರೀಯ ಸಂಗೀತದ ಕಾರ್ಯಕ್ರಮವನ್ನು ಆಯೋಜಿಸುವುದಲ್ಲದೇ, ಶಾಸ್ತ್ರೀಯ ಸಂಗೀತದ ಪತ್ರಗಾರ ನಿರ್ಮಿಸುವುದು, ವಿಚಾರ ಸಂಕಿರಣಗಳನ್ನು ಆಯೋಜಿಸುವುದು, ಪ್ರತಿಭಾಶೋಧ ಹಾಗೂ ಪ್ರಾದೇಶಿಕವಲ್ಲದೇ ರಾಷ್ಟ್ರ ಮಟ್ಟದ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಆಯೋಜಿಸಲಾಗುವುದೆಂದು ತಿಳಿಸಿ, ಕರ್ನಾಟಕದ ಹೆಮ್ಮೆಯ ಪುತ್ರ ಹಾಗೂ ಭಾರತ ರತ್ನ ಪಂಡಿತ್ ಭೀಮಸೇನ್ ಜೋಶಿ ರವರ ಸ್ಮರಣಾರ್ಥವಾಗಿ ದಿನಾಂಕ 01-10-2011 ರಂದು ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಒಂದು ದಿನದ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಇದಕ್ಕಾಗಿ ಸುಮಾರು ರೂ. 7.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುವ ಹಿನ್ನೆಲೆಯಲ್ಲಿ ಸದರಿಯವರ ಮನವಿಯನ್ನು ಪರಿಗಣಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಿರುತ್ತಾರೆ.

ಶ್ರೀ ಆರ್. ಆರ್. ರವಿಶಂಕರ್, ಮ್ಯಾನೇಜಿಂಗ್ ಟ್ರಸ್ಟೀ, ಭಾರತೀಯ ಸಮಾಗಾನ ಸಭಾ, ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಭಾರತೀಯ ಸಮಾಗಾನ ಸಭಾ ಸಂಸ್ಥೆಯು ಭಾರತರತ್ನ ಪಂಡಿತ್ ಭೀಮಸೇನ ಜೋಷಿ ರವರ ಸ್ಮರಣಾರ್ಥ ದಿನಾಂಕ 01-10-2011 ರಂದು ಚೌಡಯ್ಯ ಸ್ಮಾರಕ ಭವನದಲ್ಲಿ ಗಾಯನ ಗೋಷ್ಠಿಯನ್ನು ಏರ್ಪಡಿಸಿದ್ದು, ಮಾಸ್ಟರ್ ಆಕಾಶ್ ರವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಕೊಳಲು ಮತ್ತು ಬಾಂಬೆ ಜಯಶ್ರೀ ರವರಿಂದ ಶಾಸ್ತ್ರೀಯ ಗಾಯನವನ್ನು ಏರ್ಪಡಿಸಿದ್ದು, ಶ್ರೀ ಮಹೇಶ್ ಜೋಷಿ, ನಿರ್ದೇಶಕರು ಚಂದನ, ಶ್ರೀ ಮುದ್ದು ಮೋಹನ್, ನಿರ್ದೇಶಕರು ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಶ್ರೀ ವಿನಾಯಕ ತ್ರೋವಿ ಕೊಳಲು ವಾದಕರು ಮುಖ್ಯ ಅತಿಥಿಗಳಾಗಿ ಆಗಮನಿಸಿದ್ದು ದೂರದರ್ಶನದಿಂದ ಮಾಸ್ಟರ್ ಆಕಾಶ್ ರವರ ಕಾರ್ಯಕ್ರಮವನ್ನು ಸೆರೆ ಹಿಡಿದಿದ್ದು, ಸದರಿ ಕಾರ್ಯಕ್ರಮದಲ್ಲಿ ಬಿ.ಬಿ.ಎಂ.ಪಿ. ಚಿಹ್ನೆಯನ್ನು ಸಭಾಂಗಣದ ಹಿಂದಿನ ಪರದೆಯಲ್ಲಿ ಮುದ್ರಿಸಿರುವುದಾಗಿ ತಿಳಿಸಿ, ಸದರಿ ಕಾರ್ಯಕ್ರಮಕ್ಕೆ ಅನುದಾನ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಮುಂಗಡವಾಗಿ ಅನುದಾನ

ಲಭ್ಯವಾಗಿರುವುದಿಲ್ಲವೆಂದು ತಿಳಿಸಿ ರೂ. 4,09,000/- (ರೂ. ನಾಲ್ಕು ಲಕ್ಷದ ಒಂಭತ್ತು ಸಾವಿರ) ಗಳ ಖರ್ಚು-ವೆಚ್ಚಗಳ ಪಟ್ಟಿಯನ್ನು ಸಲ್ಲಿಸಿ, ಪಾಲಿಕೆ ವತಿಯಿಂದ ಕೂಡಲೇ ಸಹಾಯಧನವನ್ನು ಮಂಜೂರು ಮಾಡಬೇಕಾಗಿ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011-12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03-09-2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011-12 ರಂತೆ 185 ಸಂಘ / ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ

ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (168) ರಲ್ಲಿ "ಭಾರತೀಯ ಸಾಮಗಾನ ಸಭಾ",** ರವರಿಗೆ **ರೂ. 4.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಿರುವುದು ಸರಿಯಷ್ಟೆ. ಆದರೆ ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಗೆ ಅನುದಾನ ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ಆಯುಕ್ತರ ದಿನಾಂಕ : 02/02/2012 ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.4.00 ಲಕ್ಷ ಅನುದಾನ ನೀಡುವುದೆಂದು ತೀರ್ಮಾನಿಸಿದೆ.***

## *05]. ವಿಷಯದ ಸಂಖ್ಯೆ :-ತೆಆಸ್ಥಾಸ/455/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)141/11-12, ದಿನಾಂಕ : 02-02-2012 ರಲ್ಲಿ ವಿವರಿಸಿರುವಂತೆ, ಶ್ರೀ ಪುಟ್ಟ ರಾಮಾರಾಧ್ಯ, ಸಂಸ್ಥೆಯ ಕಾರ್ಯದರ್ಶಿ, ಶ್ರೀ ಶಾರದಾ ಮಾತಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ದತ್ತಿ (ರಿ) ನಂ. 1, 4ನೇ ಅಡ್ಡರಸ್ತೆ, ರಾಮಕ್ಕ ಬ್ಲಾಕ್, ಮುದ್ದಮ್ಮ ಗಾರ್ಡನ್ ಬಡಾವಣೆ, ಬೆನ್‌ಸನ್ ಟೌನ್ ಅಂಚೆ, ಬೆಂಗಳೂರು ರವರು ರವರಿಗೆ ಮನವಿ ಸಲ್ಲಿಸಿ ಕಳೆದ 11 ವರ್ಷಗಳಿಂದ ಹೆಚ್ಚಿನ ಅವಧಿಯಿಂದ ತಮ್ಮ ಸಂಸ್ಥೆಯು ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆಯಿಂದ ಬುದ್ದಿಮಾಂದ್ಯ ಮಕ್ಕಳ ಶಾಲೆ ನಡೆಸಲು ಅನುಮತಿಯನ್ನು ಪಡೆದು ನಡೆಸುತ್ತಿರುತ್ತದೆ. ಆದರೆ ತಮ್ಮ ಸಂಸ್ಥೆಗೆ ರಾಜ್ಯ ಸರ್ಕಾರದಿಂದಲೇ ಆಗಲಿ ಅಥವಾ ಕೇಂದ್ರ ಸರ್ಕಾರದಿಂದಲೇ ಆಗಲಿ ಯಾವುದೇ ರೀತಿಯ ಅನುದಾನ ದೊರೆತಿರುವುದಿಲ್ಲವೆಂದು, ಕಳೆದ ವರ್ಷ 2010-11 ನೇ ಸಾಲಿಗಾಗಿ ಪಾಲಿಕೆಯಿಂದ ರೂ. 1.00 ಲಕ್ಷ ಅನುದಾನವನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ಹಾಗೆ 2011-12 ನೇ ಸಾಲಿಗೆ ತಮ್ಮ ಸಂಸ್ಥೆಗೆ ಅಧ್ಯಕ್ಷರು ತೆರಿಗೆಗಳು ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರಿಗೆ ಮನವಿಯನ್ನು ಸಲ್ಲಿಸಿರುವುದು ಸರಿಯಷ್ಟೆ. ಅದರಂತೆ ವಾರ್ಷಿಕ ಬಜೆಟ್ ನಲ್ಲಿ ತಮ್ಮ ಸಂಸ್ಥೆಯ ಹಣವನ್ನು ಮೀಸಲಿಟ್ಟಿರುತ್ತಾರೆ. ಆದ್ದರಿಂದ, ಪಾಲಿಕೆ ವತಿಯಿಂದ ತಮ್ಮ ಸಂಸ್ಥೆಗೆ ಆರ್ಥಿಕ ಸಹಾಯವನ್ನು ನೀಡಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ **2010-11 ನೇ** ಸಾಲಿನಲ್ಲಿ **ರೂ. 1.00 ಲಕ್ಷಗಳ** ಅನುದಾನ ಬಿಡುಗಡೆ ಮಾಡಲಾಗಿರುತ್ತದೆ

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನಗಳಿರುತ್ತವೆ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011-12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03-09-2011

ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011-12ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (88) ರಲ್ಲಿ "ಶ್ರೀ ಶಾರದಾ ಮಾತಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ದತ್ತಿ (ರಿ)"** ರವರಿಗೆ **ರೂ. 2.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ಆದರೆ, ಮಾರ್ಗಸೂಚಿಗಳನ್ವಯ ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯನ್ನು ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ಆಯುಕ್ತರ ದಿನಾಂಕ : 02/02/2012 ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.2.00 ಲಕ್ಷ ನೀಡುವುದೆಂದು ನಿರ್ಣಯಿಸಿದೆ.***

## *06]. ವಿಷಯದ ಸಂಖ್ಯೆ :-ತೆಆಸ್ಥಾಸ/456/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ/ಆ)ಪಿಎಸ್ಆರ್(4)18/11-12, ದಿನಾಂಕ : 27-05-2011 ರಲ್ಲಿ ವಿವರಿಸಿರುವಂತೆ, ಪ್ರಧಾನ ಕಾರ್ಯದರ್ಶಿ, ಶ್ರೀ ಕಾಲಭೈರವ ಕಲಾನಿಕೇತನ (ರಿ) ನಂ. 1442, 16ನೇ ಮುಖ್ಯರಸ್ತೆ, ಮುನೇಶ್ವರ ಬ್ಲಾಕ್, ಬೆಂಗಳೂರು-26. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಘದ ವತಿಯಿಂದ ದಿನಾಂಕ 20.09.2010 ರಿಂದ 28.09.2010 ರವರೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಬೆಂಗಳೂರು ನಿರ್ಮಾಪಕ ನಾಡಪ್ರಭು ಕೆಂಪೇಗೌಡರ 500ನೇ ಸಿಂಹಾಸನಾರೋಹಣ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಿದ್ದು, ಇದಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಆಯವ್ಯಯ ಸಭೆಯ ತೀರ್ಮಾನದಂತೆ ತಮ್ಮ ಸಂಸ್ಥೆಗೆ ತೀರ್ಮಾನದ ಕ್ರ.ಸಂ. 31 ರಲ್ಲಿ ಹಣ ಮಂಜೂರಾಗಿದ್ದು, ಸದರಿ ಹಣವನ್ನು ಬಿಡುಗಡೆಮಾಡಿಕೊಡಬೇಕಾಗಿ ವಿನಂತಿಸಿ, ಸದರಿ ತೀರ್ಮಾನ 31ರ ಕ್ರಮ ಸಂಖ್ಯೆಯಲ್ಲಿ ಕಾಲಭೈರವೇಶ್ವರ ಕಲಾಭವನ, ಶ್ರೀನಗರ ಎಂದು ತಪ್ಪಾಗಿ ನಮೂದಾಗಿದ್ದು, ತಮ್ಮ ಸಂಸ್ಥೆಗೆ ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಮಹದೇವರವರು ಅನುಮೋದನೆ ನೀಡಿರುತ್ತಾರೆಂದು ತಿಳಿಸಿರುತ್ತಾರೆ.

2010-11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011-12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (31) ರಲ್ಲಿ "ಕಾಲಭೈರವೇಶ್ವರ ಕಲಾಭವನ, ಶ್ರೀನಗರ" ರವರಿಗೆ ನಿಗಧಿ ಪಡಿಸಲಾಗಿರುವ ರೂ. 50,000/- (ರೂ. ಐವತ್ತು ಸಾವಿರಗಳು ಮಾತ್ರ) ಗಳನ್ನು "ಶ್ರೀ ಕಾಲಭೈರವ ಕಲಾನಿಕೇತನ (ರಿ)" ಹೆಸರಿಗೆ ಮಂಜೂರು ಮಾಡುವ ಸಂಬಂಧ, 2010-11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾತರುವುದರಿಂದ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ಆಯುಕ್ತರ ಟಿಪ್ಪಣಿ ದಿನಾಂಕ : 27/05/2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.50,000-00 ಅನುದಾನ ನೀಡುವುದೆಂದು ನಿರ್ಣಯಿಸಿದೆ.***

## *07]. ವಿಷಯದ ಸಂಖ್ಯೆ :-ತೆಆಸ್ಥಾಸ/457/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ/ಆ)ಪಿಎಸ್ಆರ್(4)13/11-12, ದಿನಾಂಕ : 09-02-2012 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಡಾ॥ ಅಶ್ವತ್ ನಾರಾಯಣ್ ಸಿ. ಎನ್. ಶಾಸಕರು, ಮಲ್ಲೇಶ್ವರಂ ಕ್ಷೇತ್ರ ರವರ ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ತಮ್ಮ ಪತ್ರದಲ್ಲಿ ಮಲ್ಲೇಶ್ವರಂ ಸಾಂಸ್ಕೃತಿಕ

ಸಂಘ ಮತ್ತು ಡಾ॥ ಸಿ. ಎನ್. ಅಶ್ವತ್ ನಾರಾಯಣ್ ಫೌಂಡೇಶನ್ ವತಿಯಿಂದ ತಮ್ಮ ಮತಕ್ಷೇತ್ರ ವ್ಯಾಪ್ತಿಯ ಎಲ್ಲಾ 7 ವಾರ್ಡ್‌ಗಳಲ್ಲಿ ಮಲ್ಲೇಶ್ವರಂ ಯುಗಾದಿ ವಸಂತೋತ್ಸವವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸುತ್ತಾ **ಮಲ್ಲೇಶ್ವರಂ ಸಾಂಸ್ಕೃತಿಕ ಸಂಘದ, 108, ಶ್ರೀ ಚಕ್ರ ಈಸ್ಟ್ ಪಾರ್ಕ್ ೯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003** ಹೆಸರಿನಲ್ಲಿ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 7.50 ಲಕ್ಷ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ಅನುಬಂಧ– 2 ರಲ್ಲಿ 185 ವಿವಿಧ ಸಂಘ ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಲಾಗಿರುತ್ತದೆ. ಉಳಿಕೆ ಮೊತ್ತ ರೂ. 116.50 ಲಕ್ಷಗಳು.

ಆದರೆ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯನ್ನು ತಿರಸ್ಕರಿಸುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ಆಯುಕ್ತರ ದಿನಾಂಕ : 09/02/2012ರಲ್ಲಿ ಪ್ರಸ್ತಾವನೆಯಂತೆ ಲೆಕ್ಕಶೀರ್ಷಿಕೆ 24–ಸಂಸ್ಕೃತಿ ಮತ್ತು ಕ್ರೀಡೆ P-ಕೋಡ್–2542ರಲ್ಲಿ ಮೀಸಲಿಟ್ಟಿರುವ ರೂ.15ಲಕ್ಷವನ್ನು ನೀಡುವುದೆಂದು ನಿರ್ಣಯಿಸಲಾಗಿದೆ.***

## *08]. ವಿಷಯದ ಸಂಖ್ಯೆ :–ತೆಆಸ್ಥಾಸ/458/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)179/11–12, ದಿನಾಂಕ : 20–01–2012 ರಲ್ಲಿ ವಿವರಿಸಿರುವಂತೆ, ಶ್ರೀ ರಾ.ಪ. ರವಿಶಂಕರ್, ಕಾರ್ಯದರ್ಶಿ ಹೊಂಗಿರಣ ಟ್ರಸ್ಟ್ (ರಿ) ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಆವರಣ, 8ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560 003 ರವರು ಮನವಿ ಸಲ್ಲಿಸಿ, ತಮ್ಮ ಸಂಘದ ಆಶ್ರಯದಲ್ಲಿ ಇದೇ ಬೆಂಗಳೂರು ಸಿಟಿ ಪ್ಯಾಲೆಸ್ ಗುಟ್ಟಹಳ್ಳಿ ವೃತ್ತದ ಬಳಿಯಿರುವ ಮಹಾನಗರ ಪಾಲಿಕೆಯ ಉಣ್ಣಾಮಲೈ ಹೆರಿಗೆ ಆಸ್ಪತ್ರೆ ಸೇವಾ ಕೇಂದ್ರ (ಕಿಡ್ನಿ ಡಯಾಲಿಸಿಸ್, ಡಯಾಬಿಟಿಕ್ಸ್, ಸಾಮಾನ್ಯ ರೋಗಗಳಿಗೆ ಎಕ್ಸರೇ, ಇ.ಸಿ.ಜಿ, ಕ್ಲಿನಿಕಲ್ ಲ್ಯಾಬ್) ವನ್ನು ಸ್ಥಾಪಿಸಲು ಕಾರ್ಯ ನಿರತರಾಗಿರುತ್ತಾರೆ. ಸುಮಾರು ರೂ. 250 ಲಕ್ಷಗಳ ವೆಚ್ಚದಲ್ಲಿ ಪ್ರಾರಂಭವಾಗುತ್ತಿರುವ ವಾಸವಿ ಹೆಲ್ತ್ ಕೇರ್ ಸಂಸ್ಥೆಯ ವತಿಯಿಂದ ಪ್ರತಿ ವರ್ಷವೂ ಸಾವಿರಾರು ರೋಗಿಗಳಿಗೆ ಕಡಿಮೆ ವೆಚ್ಚದಲ್ಲಿ ಉತ್ತಮ ಚಿಕಿತ್ಸೆ ನೀಡಲು ಸಹಕಾರಿಯಾಗುತ್ತದೆ. ಇಂತಹ ಮಾನವೀಯತೆ ಮೆರೆಯುವ ಕಾರ್ಯದ ಯೋಜನಾ ವರದಿಯನ್ನು ತಮ್ಮ ಪತ್ರದೊಂದಿಗೆ ಲಗತ್ತಿಸಿರುವುದಾಗಿ ತಿಳಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ತಮ್ಮ ಆರೋಗ್ಯ ಕೇಂದ್ರದ ಡಯಾಲಿಸಿಸ್ ಯಂತ್ರೋಪಕರಣಗಳಿಗಾಗಿ ರೂ. 130 ಲಕ್ಷಗಳ ಸಹಾಯ ಧನ ನೀಡಿ ಸುಸಜ್ಜಿತವಾದ ಆರೋಗ್ಯ ಕೇಂದ್ರವನ್ನು ನಡೆಸುವುದರ ಮೂಲಕ ಬೆಂಗಳೂರು ಜನತೆಯ ಆರೋಗ್ಯ ಸುಧಾರಣೆಗೆ ಸಹಕರಿಸಲು ವಿನಂತಿಸಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ.5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10

ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ಅನುಬಂಧ– 2 ರಲ್ಲಿ 185 ವಿವಿಧ ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಲಾಗಿರುತ್ತದೆ. ಉಳಿಕೆ ಮೊತ್ತ ರೂ. 116.50 ಲಕ್ಷಗಳು.

ಆದರೆ, ಪಾಲಿಕೆಯ ಸದ್ಯದ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯನ್ನು ತಿರಸ್ಕರಿಸುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮರುಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** *ದಿನಾಂಕ : 20–01–2012 ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಹೊಂಗಿರಣ ಟ್ರಸ್ಟ್ (ರಿ.) ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ : 25–01–2012ರ ಸಭೆಯಲ್ಲಿ ಸಂಘ ಸಂಸ್ಥೆಗಳಿಗೆ ಸಹಾಯಧನ/ಕೊಡುಗೆಗಳು ಲೆಕ್ಕಶೀರ್ಷಿಕೆ ಅಡಿಯಲ್ಲಿ ಅನುದಾನ ನೀಡುವ ಬದಲು ವಲಯ ಕಟ್ಟಡಗಳ–ವಾರ್ಡ್ ಸಂಖ್ಯೆ 64ರಲ್ಲಿ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿಗೆ ರೂ.35.00 (ಮುವತ್ತೈದು ಲಕ್ಷ)ಗಳನ್ನು ಫೆಬ್ರವರಿ–2012ರಲ್ಲಿ ಹಾಗೂ ರೂ.35.00 (ಮುವತ್ತೈದು ಲಕ್ಷ)ಗಳನ್ನು ಮಾರ್ಚ್–2012ರಲ್ಲಿ ಸಂಸ್ಥೆಗೆ ಒದಗಿಸುವಂತೆ ನಿರ್ಣಯ ಮಾಡಲಾಗಿದ್ದು, ಈ ನಿರ್ಣಯದಂತೆ ಕಲ್ಯಾಣ ಶಾಖೆಯಿಂದ ಅನುದಾನಕ್ಕೆ ಬಳಸಿಕೊಳ್ಳಲು ತಾಂತ್ರಿಕ ತೊಂದರೆಯಿದ್ದು, ಕಟ್ಟಡದ ಕಾಮಗಾರಿಗಳನ್ನು ಅನುದಾನಕ್ಕೆ ನೀಡಲು ಸಾಧ್ಯವಾಗುವುದಿಲ್ಲವಾದುದ್ದರಿಂದ ಕೊಡುಗೆ ಮತ್ತು ಸಹಾಯಧನದ ಲೆಕ್ಕಶೀರ್ಷಿಕೆ ಅಡಿಯಲ್ಲಿ ಈ ವೆಚ್ಚವನ್ನು ಭರಿಸುವ ಬಗ್ಗೆ ಈಗಾಗಲೇ ದಿನಾಂಕ : 17–12–2011 (ಆಯುಕ್ತರು ಸಹಿ ಮಾಡಲಾದ ದಿನಾಂಕ : 20–01–2012) ರಂದು ಮಂಡಿಸಿರುವ ಟಿಪ್ಪಣಿಯಂತೆ ಮರು ಪರಿಶೀಲನೆಗೆ ಕಡತವನ್ನು ಹಿಂದಿರುಗಿಸಲಾಗಿರುತ್ತದೆ. ಅದರಂತೆ ಸಮಿತಿಯ ದಿನಾಂಕ : 25–01–2012ರ ನಿರ್ಣಯವನ್ನು ರದ್ದು ಪಡಿಸುತ್ತಾ, ಸಂಘ ಸಂಸ್ಥೆಗಳಿಗೆ ಮೀಸಲಿರಿಸಿರುವ 2011–12ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನದ ಲೆಕ್ಕಶೀರ್ಷಿಕೆ ಅಡಿಯಲ್ಲಿ ಇರುವ ಅನುದಾನದಲ್ಲಿ ರೂ.70.00 (ಎಪ್ಪತ್ತು ಲಕ್ಷ)ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.*

## ***09]. ವಿಷಯದ ಸಂಖ್ಯೆ :–ತೆಆಸ್ಥಾಸ/459/2011–12***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಮುಲೆಅ/ಪಿಆರ್/11523/2011–12, ದಿನಾಂಕ : 09.02.2012 ರಲ್ಲಿ ವಿವರಿಸಿರುವಂತೆ, ಶಿಕ್ಷಣ ಇಲಾಖೆಯ ಖಾಯಂ ಸಿಬ್ಬಂಧಿಗಳ ಹಾಗೂ ಅಧಿಕಾರಿಗಳ ವೇತನ ಲೆಕ್ಕ ಶೀರ್ಷಿಕೆ ಪಿ0126 ಅಡಿಯಲ್ಲಿ ಹೊರಗುತ್ತಿಗೆ ಶಿಕ್ಷಕರ ಸಂಭಾವನೆಯನ್ನು ಪಾವತಿ ಮಾಡಲಾಗುತ್ತಿದ್ದು, ಸದರಿ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ತಾತ್ಕಾಲಿಕ ಹೊರಗುತ್ತಿಗೆ ಶಿಕ್ಷಕ ವೇತನ/ಸಂಭಾವನೆ ಪಾವತಿಸಲು ಸಾಕಷ್ಟು ಅನುದಾನ ಲಭ್ಯವಿರುವುದಿಲ್ಲ. ಆದ್ದರಿಂದ ಹೊರಗುತ್ತಿಗೆ ಶಿಕ್ಷಕರ/ಉಪನ್ಯಾಸಕರುಗಳಿಗೆ ವೇತನ ಪಾವತಿಸಲು ಲೆಕ್ಕಶೀರ್ಷಿಕೆ ಪಿ0959 ಅಡಿ ಉಳಿಕೆ ಆಗುವ ರೂ.90.00 ಲಕ್ಷ ಹಾಗೂ ಪಿ2257 ಅಡಿ ರೂ.150.00 ಲಕ್ಷ ಒಟ್ಟು ರೂ.240.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ0126 ಮರುಹೊಂದಾಣಿಕೆ ಮಾಡಿಕೊಳ್ಳಲು ಕರ್ನಾಟಕ ಮುನಿಸಿಪಲ್ ಕಾಯಿದೆ 1976ರ ಸೆಕ್ಷನ್ 172ರ ಪ್ರಕಾರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ. (ದಿನಾಂಕ : 09/02/2012)***

## *10]. ವಿಷಯದ ಸಂಖ್ಯೆ :–ತೆಆಸ್ಥಾಸ/460/2011–12*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 10–02–2012 ರಲ್ಲಿ ವಿವರಿಸಿರುವಂತೆ, ಬಸವನಗುಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ : 155ರಲ್ಲಿ ಬೇಸಿಗೆ ದಿನಗಳಲ್ಲಿ ನೀರಿನ ಬವಣೆ ನಿವಾರಿಸಲು ಮೂರು ಕೊಳವೆ ಬಾವಿಗಳನ್ನು ಕೊರೆದು ಕಿರು ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲು ಲೆಕ್ಕ ಶೀಷಿಕೆ ಪಿ.1802ರ ಅಡಿಯಲ್ಲಿ ನೀರು ಸರಬರಾಜು ಉದ್ದೇಶಕ್ಕಾಗಿ ಪ್ರತಿ ವಾರ್ಡ್‌ಗೆ ಮೀಸಲಿಟ್ಟಿರುವ ರೂ.25.00 ಲಕ್ಷಗಳ ಅನುದಾನದಡಿಯಲ್ಲಿ ಅಂದಾಜು ಮೊತ್ತ ರೂ.10.50 ಲಕ್ಷಗಳಿಗೆ ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ವಾರ್ಡ್ ಅನುದಾನವನ್ನು ಹೊರತು ಪಡಿಸಿ ಇತರೆ ಅನುದಾನವನ್ನು ಬಳಕೆ ಮಾಡುವ ಮುನ್ನ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ, ಅನುಮೋದನೆ ಪಡೆಯಬೇಕಾಗಿರುವುದರಿಂದ ಮೇಲ್ಕಂಡ ಅಂದಾಜು ಮೊತ್ತ ರೂ.10.50 ಲಕ್ಷಗಳಿಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ವಿಶೇಷ ಆಯುಕ್ತರ ದಿನಾಂಕ : 10/02/2012ರ ಟಿಪ್ಪಣಿ ಒಪ್ಪಿದೆ.***

## *11]. ವಿಷಯದ ಸಂಖ್ಯೆ :–ತೆಆಸ್ಥಾಸ/461/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)31/11–12, ದಿನಾಂಕ : 02–02–2012 ರಲ್ಲಿ ವಿವರಿಸಿರುವಂತೆ, ಲಯನ್ ಡಾ॥ ಬಿ.ಎಲ್.ಸಿ.ಮೂರ್ತಿ, ಮ್ಯಾನೇಜಿಂಗ್ ಟ್ರಸ್ಟೀ ಮತ್ತು ಪದ್ಮಶ್ರೀ ಅವಾರ್ಡೀ 2004, ಬಿ.ಡಬ್ಲ್ಯು ಪಶ್ಚಿಮ ಲಯನ್ಸ್ ಸೂಪರ್ ಸ್ಪೆಶಾಲಿಟಿ ಕಣ್ಣಿನ ಆಸ್ಪತ್ರೆ ರವರು ಮನವಿ ಸಲ್ಲಿಸಿ, ತಮ್ಮ ಸಂಸ್ಥೆಯ ವತಿಯಿಂದ ಇದುವರೆವಿಗೂ 1,817 ಉಚಿತ ಕಣ್ಣಿನ ಶಿಬಿರ ಮತ್ತು 1,11,842 ಉಚಿತ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆಯನ್ನು ಹಾಗೂ 1.75 ಮಿಲಿಯನ್ ಉಚಿತ ಕಣ್ಣಿನ ಸ್ಕೀನಿಂಗ್ ಮಾಡಿರುವುದಾಗಿ ತಿಳಿಸಿರುತ್ತಾರೆ. ಬೆಂಗಳೂರಿನ ಸುತ್ತ ಮುತ್ತಲಿನ ವಿವಿಧ ಹಳ್ಳಿಗಳಿಂದ ಕಣ್ಣಿನ ಪೊರೆಯಿಂದ ಬಳಲುತ್ತಿರುವ ಜನರನ್ನು ಕರೆತಂದು 3 ದಿನಗಳೊಳಗಾಗಿ ಶಸ್ತ್ರ ಚಿಕಿತ್ಸೆ ನೀಡಿರುವುದಾಗಿ ತಿಳಿಸಿರುತ್ತಾರೆ. ತಮ್ಮ ಸಂಸ್ಥೆಯು ಕಣ್ಣಿನ ಬ್ಯಾಂಕಿನಿಂದ 17807 ಕಣ್ಣುಗಳನ್ನು ಉಚಿತವಾಗಿ ದಾನಿಗಳಿಂದ ಸತ್ತನಂತರ ಪಡೆದು ಕಣ್ಣಿಲ್ಲದವರಿಗೆ ಉಚಿತವಾಗಿ ಕಾರ್ನಿಲ್ ಟ್ರಾನ್ಸ್‌ಪ್ಲಾಂಟೇಷನ್ ಮಾಡಿರುವುದಾಗಿ ತಿಳಿಸಿ, 2010–11ನೇ ಸಾಲಿಗೆ ಪಾಲಿಕೆ ವತಿಯಿಂದ ರೂ. 3.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ತಮ್ಮ ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ 2011–12 ನೇ ಸಾಲಿಗೆ ರೂ. 10.00 ಲಕ್ಷಗಳನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಗೆ 2010–11 ನೇ ಸಾಲಿನಲ್ಲಿ ರೂ. 3.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನಗಳಿರುತ್ತವೆ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ,
ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12 ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (92)** ರಲ್ಲಿ **"ಬಿ.ಡಬ್ಲ್ಯೂ.ಪಶ್ಚಿಮ ಲಯನ್ಸ್ ಸೂಪರ್ ಸ್ಪೆಶಾಲಿಟಿ ಕಣ್ಣಿನ ಆಸ್ಪತ್ರೆ"** ರವರಿಗೆ ನಿಗಧಿ ಪಡಿಸಲಾಗಿರುವ **ರೂ. 2.00 ಲಕ್ಷಗಳ** ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ : ಆಯುಕ್ತರ ದಿನಾಂಕ : 02/02/2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಲಯನ್ಸ್ ಕಣ್ಣಿನ ಆಸ್ಪತ್ರೆಗೆ ರೂ.2.00 ಲಕ್ಷ ಅನುದಾನ ನೀಡುವುದೆಂದು ನಿರ್ಣಯಿಸಲಾಗಿದೆ.***

## *12]. ವಿಷಯದ ಸಂಖ್ಯೆ :–ತೆಆಸ್ಥಾಸ/462/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)155/11–12, ದಿನಾಂಕ : 02–02–2012 ರಲ್ಲಿ ವಿವರಿಸಿರುವಂತೆ, ಶ್ರೀ ಬಿ.ಆರ್. ರಾಮಚಂದ್ರ ರಾವೆ ಕಾಳೆ, ಕಾರ್ಯದರ್ಶಿ, ಲಾಲ್ ಬಹದ್ದೂರ್ ಮೌಂಟನೀರಿಂಗ್ ಇನ್‌ಸ್ಟಿಟ್ಯೂಟ್, ಶಾಸ್ತ್ರೀಜಿ ಭವನ, ನಂ. 8, ಸುಶೀಲ ರಸ್ತೆ, ಚಿಕ್ಕಮಾವಳ್ಳಿ, ಬಸವನಗುಡಿ ಅಂಚೆ, ಬೆಂಗಳೂರು – 560 004. ರವರು ಶ್ರೀ ಮಂಜುನಾಥ ರಾಜು, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ರವರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆ ವಾರ್ಷಿಕ ಕಾರ್ಯಕ್ರಮ ಅಳವಡಿಸಿಕೊಳ್ಳಲು ಹಾಗೂ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳಿಗೆ ಮತ್ತು ಉಪಾಧ್ಯಾಯನಿಯರಿಗೆ ಕಾರ್ಯಗಾರ ನಡೆಸಲು ಹಲವಾರು ಪ್ರಕೃತಿಯ ಅಡಿಯಲ್ಲಿ ನಡೆಸುವ ಸಾಹಸ ಚಟುವಟಿಕೆಗಳಿಗೆ ತಮ್ಮ ಆರ್ಥಿಕ ಸ್ಥಾಯಿ ಸಮಿತಿಯಿಂದ ತಮಗೆ ವಾರ್ಷಿಕ ಅನುದಾನವಾಗಿ ಕೇವಲ ರೂ. 5.00 ಲಕ್ಷಗಳನ್ನು ಮಂಜೂರು ಮಾಡಿ ತಮ್ಮೆಲ್ಲ ಕಾರ್ಯಕ್ರಮಕ್ಕೆ ಸಹಾಯ ಹಸ್ತ ನೀಡಿ ಸಹಕರಿಸಬೇಕಾಗಿ ಕೋರಿರುತ್ತಾರೆ

ಸದರಿಯವರಿಗೆ **2008–09 ನೇ** ಸಾಲಿನಲ್ಲಿ **ರೂ. 25,000/– ಗಳ** ಅನುದಾನ ಬಿಡುಗಡೆ ಮಾಡಲಾಗಿರುತ್ತದೆ

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನಗಳಿರುತ್ತವೆ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (165)** ರಲ್ಲಿ **"ಲಾಲ್ ಬಹದ್ದೂರ್ ಮೌಂಟನೀರಿಂಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು"** ರವರಿಗೆ **ರೂ. 1.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ಆದರೆ, ಮಾರ್ಗಸೂಚಿಗಳನ್ವಯ ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯನ್ನು ತಿರಸ್ಕರಿಸುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

*ನಿರ್ಣಯ : ಆಯುಕ್ತರ ದಿನಾಂಕ 02/02/2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ವಿಶಯದಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.ಒಂದು ಲಕ್ಷ ನೀಡುವುದೆಂದು ತೀರ್ಮಾನಿಸಲಾಗಿದೆ.*

## *13]. ವಿಷಯದ ಸಂಖ್ಯೆ :–ತೆಆಸ್ಥಾಸ/463/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)65/11–12, ದಿನಾಂಕ : 02–02–2012 ರಲ್ಲಿ ವಿವರಿಸಿರುವಂತೆ, ಶ್ರೀ ಕೆ.ಎಸ್.ಎಲ್. ಸ್ವಾಮಿ (ರವೀ) ಕಾರ್ಯಾಧ್ಯಕ್ಷರು/ನಿರ್ದೇಶಕರು, ಸನಾತನ ಧರ್ಮವರ್ಧಿನಿ ಟ್ರಸ್ಟ್ (ರಿ), ನಂ. 175, 6ನೇ ಕ್ರಾಸ್, ಗಾಂಧಿನಗರ, ಬೆಂಗಳೂರು – 560009. ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಜುಲೈ 7 ರಿಂದ ನವೆಂಬರ್ 7 ರವರೆಗೆ ನಿಗಧಿತ 90 ದಿನ ನಡೆಯುವ ಸಾಂಸ್ಕೃತಿಕ ಸಾಮಾಜಿಕ ಹಾಗೂ ಬೌದ್ಧಿಕ ಕಾರ್ಯಾಗಾರದ ಸಮಯದಲ್ಲಿ ದೊಡ್ಡ ಸಂಸ್ಕೃತಿ ನಿರ್ಮಾಣದ ಚಟುವಟಿಕೆ ನಡೆಯಬೇಕು ಎಂಬ ಆಶಯ ತಮ್ಮದಾಗಿರುತ್ತದೆ ಎಂದು ತಿಳಿಸಿ, ಹುಟ್ಟುವಾಗ ಮುಗ್ದರಾದ ಮಕ್ಕಳು ಬೆಳೆದಾಗ ಕ್ರೂರಿಗಳು, ದುಷ್ಟರೂ ಕೊಲೆಪಾತಕಿಗಳೂ ಹಾಗೂ ದೇಶದ್ರೋಹಿಗಳು ಆಗುವುದು ಅವರ ಬೆಳವಣಿಗೆಯ ಪರಿಸರದ ಕಾರಣವಾಗಿ ಎಂದು ಹೇಳಬೇಕಾಗಿದೆ. ಈ ಕಾರಣಗಳಿಗಾಗಿ ಪರಿಹಾರವನ್ನು ನಾವು ಈ ಕಾರ್ಯಾಗಾರದ ಸಮಯದಲ್ಲಿ ಸಂಸ್ಕೃತ ಸಂಭಾಷಣಾ ಶಿಬಿರ, ಯೋಗಾಸನ, ವೇದ ವಿಜ್ಞಾನ ವಿಚಾರ ಸಂಕಿರಣ, ಸಾಂಸ್ಕೃತಿಕ ಕಾರ್ಯಕ್ರಮ, ಭಗವದ್ಗೀತೆಯ ಅಭ್ಯಾಸ, ತಜ್ಞರಿಂದ ಉಪನ್ಯಾಸಗಳನ್ನು ಹಮ್ಮಿಕೊಂಡಿದ್ದು, ಇದೇ ಸಂದರ್ಭದಲ್ಲಿ ಇಂದಿನ 21ನೆಯ ಶತಮಾನದ ಅತಿ ಪ್ರಬಲವಾದ ಮಾಧ್ಯಮವಾದ ದೃಶ್ಯಕಾವ್ಯಗಳನ್ನು ತಯಾರಿಸುವುದು ನಮ್ಮ ಪ್ರಮುಖ ಕಾರ್ಯಕ್ರಮ ಆಗಿದೆ. ಇದಕ್ಕಾಗಿ ಛಾಯಾಗ್ರಹಣ, ನಿರ್ದೇಶನ, ಸಂಕಲನ, ಪ್ರಸಾಧನ, ಸಾಹಸಚಾರಣ, ಗಾಯನ, ಬೆಳಕು ನೆರಳು ವಿನ್ಯಾಸ, ಇತ್ಯಾದಿ

ವಿಷಯಗಳ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಕೂಡ ಹಮ್ಮಿಕೊಂಡಿದ್ದೇವೆ. ಸುಮಾರು 200 ರಿಂದ 300 ಜನರು ದೇಶದ ಅನೇಕ ಭಾಗಗಳಿಂದ (ವಿದ್ಯಾರ್ಥಿ ಮತ್ತು ಅಧ್ಯಾಪಕರು) ಆಗಮಿಸಲಿದ್ದಾರೆ. ಅವರಿಗೆ ಈ ಸಂದರ್ಭದಲ್ಲಿ ಊಟ, ವಸತಿ ಸೌಲಭ್ಯ ನೀಡಲಾಗುತ್ತಿದ್ದು, 11ನೇ ಶತಮಾನದಲ್ಲಿ ವಾರಾಣಸಿ (ಕಾಶಿ) ಹೇಗಿತ್ತು? ಎಂಬ ಚಿತ್ರಣವನ್ನು ಕಟ್ಟಿಕೊಡುವ ಸಲುವಾಗಿ ಅಂತರ ರಾಷ್ಟ್ರೀಯ ಖ್ಯಾತಿ ಕಲಾ ನಿರ್ದೇಶಕ ನಿತೀಶ್ ರಾಯ್ ಅವರು ತಮ್ಮ ತಂಡದೊಡನೆ (48 ಜನಗಳು) ಬಂದು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಕೊಡಚಾದ್ರಿಯ ತಪ್ಪಲಿನ ನಿಟ್ಟೂರು ಸಮೀಪದಲ್ಲಿರುವ ನಿಸರ್ಗ ವಿಹಾರ ಧಾಮ ಎಂಬ ಕಲ್ಯಾಣಿ ಚೌಕದಲ್ಲಿ ನಿರ್ಮಾಣವಾಗುತ್ತಿದ್ದು, ತಮ್ಮ ಟ್ರಸ್ಟ್ ವತಿಯಿಂದ 11ನೇ ಶತಮಾನದ ಕೃಷ್ಣ ಯತಿಮಿಶ್ರ ಎಂಬ ನಾಟಕ ಕರ್ತೃ ರಚಿಸಿದ "ಪ್ರಬೋಧ ಚಂದ್ರೋದಯಂ" ಎಂಬ ವಿಶ್ವಕ್ಕೆ ಶಾಂತಿ ಸಂದೇಶ ನೀಡುವ ಸಂಸ್ಕೃತ ವೇದಾಂತ ನಾಟಕವನ್ನು ವಿಶ್ವದ ಮಕ್ಕಳಿಗಾಗಿ ಸಂಸ್ಕೃತದಲ್ಲಿ ದೃಶ್ಯ ಕಾವ್ಯವಾಗಿ ನಿರ್ಮಿಸಲಾಗುತ್ತದೆಂದು ತಿಳಿಸಿರುತ್ತಾರೆ.

ಈ ಸಂದರ್ಭದಲ್ಲಿ ಈ ಕಾರ್ಯಕ್ರಮ ಮಕ್ಕಳಿಗೆ ಮತ್ತು ಯುವಕರಿಗೆ ಸಮಾನಾಂತರವಾಗಿ ಪ್ರವಚನ ಹಾಗೂ ಪ್ರಯೋಗಗಳ ಮೂಲಕ ತರಬೇತಿ ನೀಡಲಾಗುತ್ತದೆ. ಇದೊಂದು ಅಪರೂಪದ ಪ್ರಥಮ ಪ್ರಯೋಗವೆಂದು ಹೇಳಬಹುದು. ತಮ್ಮ ಸಂಸ್ಥೆಯೊಡನೆ ಕಳೆದ ಒಂದು ದಶಕದಿಂದ ನಮ್ಮದೇ ಸೋದರ ಸಂಸ್ಥೆಯಾದ ಶಿವಮೊಗ್ಗದ ತರುನೋದಯ ಸಂಸ್ಕೃತ ಸೇವಾ ಸಂಸ್ಥೆ ಕಾರ್ಯಕ್ರಮವನ್ನು ಸಂಪೂರ್ಣವಾಗಿ ನಿರ್ವಹಿಸುತ್ತಿದ್ದು, ವಿಶ್ವದಲ್ಲೇ ಮೊದಲು ಎನ್ನಬಹುದಾದ ಇಂತಹ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಬಹುಮುಖ್ಯವಾಗಿ ಆರ್ಥಿಕ ನೆರವು ಬೇಕಾಗಿರುತ್ತದೆ. ಸುಮಾರು 1.25 ಕೋಟಿ ರೂಪಾಯಿ ಒಟ್ಟು ವೆಚ್ಚದ ಈ ಯೋಜನೆಗೆ ದೇಶದ ವಿವಿಧ ಭಾಗಗಳ ಮಹನೀಯರು ತಮ್ಮ ಕೈಲಾದ ಸಹಾಯ ನೀಡುತ್ತಿದ್ದಾರೆ. ನಮ್ಮ ರಾಜ್ಯದ ನೂರಾರು ಶಾಲಾ ಮಕ್ಕಳುಗಳು ಕೂಡ ಸಹಾಯ ನೀಡುತ್ತಿದ್ದಾರೆ. ಇಷ್ಟು ಜನರ ಸಹಭಾಗಿತ್ವದಲ್ಲಿ ರೂಪ ಪಡೆಯುತ್ತಿರುವ ಈ ಪ್ರಾತ್ಯಕ್ಷಿಕ, ಪ್ರಾಯೋಗಿಕ ತರಬೇತಿ ಮುಂದಿನ ಪೀಳಿಗೆಗೆ ಇಂದಿನಿಂದ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಬೌದ್ಧಿಕ ಅಸ್ಥಿಭಾರ ಹಾಕಿಕೊಡುವುದು ನಮ್ಮ ಉದ್ದೇಶ ಸತತವಾಗಿ ಹತ್ತು ವರ್ಷಗಳಿಂದ ಸಣ್ಣ ಪ್ರಮಾಣದಲ್ಲಿ ಪ್ರಾರಂಭಗೊಂಡು ಇಂದು ಬೃಹದಾಕಾರ ತಳೆದಿದೆ. ತಮ್ಮ ಸಹಕಾರ ದೊರೆತಲ್ಲಿ ಮುಂದಿನ ವರ್ಷಗಳಲ್ಲಿ ಈ ಪ್ರಯೋಗ ಪದ್ಧತಿಯನ್ನು ಇಡೀ ವಿಶ್ವವೇ ಅನುಸರಿಸುವ ನಿರೀಕ್ಷೆಯಿದೆಯೆಂದು ತಿಳಿಸುತ್ತಾ ಪಾಲಿಕೆ ವತಿಯಿಂದ ಆರ್ಥಿಕ ನೆರವನ್ನು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12 ರಂತೆ 185 ಸಂಘ ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (104) ರಲ್ಲಿ "ಸನಾತನ ಧರ್ಮವರ್ಧಿನಿ ಟ್ರಸ್ಟ್ (ರಿ)"** ರವರಿಗೆ ನಿಗಧಿ ಪಡಿಸಲಾಗಿರುವ **ರೂ. 1.00 ಲಕ್ಷಗಳ** ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ ರೂ. ಒಂದುಲಕ್ಷ ಅನುದಾನ ನೀಡುವುದೆಂದು ನಿರ್ಣಯಿಸಲಾಗಿದೆ.***

## *14]. ವಿಷಯದ ಸಂಖ್ಯೆ :–ತೆಆಸ್ಥಾಸ/464/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)47/11–12, ದಿನಾಂಕ : 02–02–2012 ರಲ್ಲಿ ವಿವರಿಸಿರುವಂತೆ, ಗೌರವ ಕಾರ್ಯದರ್ಶಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬುಲ್ ಟೆಂಪಲ್ ರಸ್ತೆ, ಎನ್. ಆರ್. ಕಾಲೋನಿ, ಬೆಂಗಳೂರು – 560 019. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ವಿಷಯದ ಸಂಖ್ಯೆ ತೆ.ಆ./256/2009–10 ದಿನಾಂಕ 10.08.2009 ರಂದು ಅನುಮೋದಿಸಿರುವಂತೆ, 2011–12 ನೇ

ವಾರ್ಷಿಕ ಅನುದಾನ ರೂ. 40,000/- (ನಲವತ್ತು ಸಾವಿರ ರೂಪಾಯಿಗಳು ಮಾತ್ರ) ಕ್ಕೆ ಬಿಲ್ ಗಳನ್ನು ತ್ರಿಪತಿಯಲ್ಲಿ ಸಲ್ಲಿಸುತ್ತಾ, ಅನುದಾನವನ್ನು ನೀಡಲು ಅಗತ್ಯವಿರುವ ಕ್ರಮಗಳನ್ನು ತ್ವರಿತಗತಿಯಲ್ಲಿ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

ಸದರಿಯವರು ಮತ್ತೊಮ್ಮೆ ಮನವಿ ಸಲ್ಲಿಸಿ, ತಮ್ಮ ಸಂಸ್ಥೆಯ ಸಾರ್ವಜನಿಕ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ರೂ. 1.00 ಕೋಟಿ ಮೂಲಧನ ಅನುದಾನ ಹಾಗೂ ಸಂಸ್ಥೆಯ ಸ್ಥಾಪಕರಾದ ಪೂಜ್ಯ ಡಿ.ವಿ. ಗುಂಡಪ್ಪನವರ 125 ನೇ ಜನ್ಮದಿನೋತ್ಸವದ ಆಚರಣೆಗಾಗಿ ರೂ. 10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಗೆ 2010-11 ನೇ ಸಾಲಿನಲ್ಲಿ ರೂ. 1.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ. ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, **ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನಗಳಿರುತ್ತವೆ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011-12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03-09-2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011-12 ರಂತೆ 185 ಸಂಘ ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (81) ರಲ್ಲಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ (ಡಿ.ವಿ. ಗುಂಡಪ್ಪನವರ 125ನೇ ಜನ್ಮ ದಿನೋತ್ಸವದ ಆಚರಣೆ ಹಾಗೂ ಸಾರ್ವಜನಿಕ ಸೇವಾ ಚಟುವಟಿಕೆಗಳಿಗೆ)** ರವರಿಗೆ ನಿಗಧಿ ಪಡಿಸಲಾಗಿರುವ **ರೂ. 50.00 ಲಕ್ಷಗಳ** ಅನುದಾನದಲ್ಲಿ ರೂ.10.00 ಲಕ್ಷ ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ಆಯುಕ್ತರ ದಿನಾಂಕ : 02/02/2012ರ ಟಿಪ್ಪಣಿಯನ್ನು ಮಾರ್ಪಡಿಸಿ ಆಯವ್ಯಯದಲ್ಲಿ ನಿಗಧಿಪಡಿಸಿರುವ ರೂ.50 ಲಕ್ಷ ನೀಡಲು ತೀರ್ಮಾನಿಸಿದೆ.***

## ***15]. ವಿಷಯದ ಸಂಖ್ಯೆ :-ತೆಆಸ್ಥಾಸ/465/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)117/11-12, ದಿನಾಂಕ : 02-02-2012 ರಲ್ಲಿ ವಿವರಿಸಿರುವಂತೆ, ಶ್ರೀಮತಿ ವಿಜಯಲಕ್ಷ್ಮೀ ವಿಜಯಕುಮಾರ್, ಕಾರ್ಯದರ್ಶಿ- ಹೆರಿಟೇಜ್ ನಂ.1, ಪುಟ್ಟಣ್ಣ ರಸ್ತೆ, ಚಿನ್ಮಯ ಅಪಾರ್ಟ್‌ಮೆಂಟ್ಸ್, ಬಸವನಗುಡಿ, ಬೆಂಗಳೂರು – 560 004. ರವರು ಮಾನ್ಯ ಆಯುಕ್ತರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಹೆರಿಟೇಜ್ ಎನ್ನುವುದು 1994 ರಲ್ಲಿ ನೊಂದಾಯಿತವಾದ ಲಾಭಕ್ಕಾಗಿ ನಡೆಸದ ಒಂದು ಎನ್.ಜಿ.ಒ ಸಂಸ್ಥೆ. ಅದು ನಮ್ಮ ಸಂಸ್ಕೃತಿ ಮತ್ತು ಪರಂಪರೆಗಳನ್ನು ಉಳಿಸಿ, ಬೆಳಸುವ ಧ್ಯೇಯವನ್ನು ಹೊಂದಿರುತ್ತದೆ. ನಮ್ಮ ಸಂಸ್ಕೃತಿ, ಪರಂಪರೆ, ಮೌಲ್ಯಗಳಲ್ಲಿ ಜನಸಾಮಾನ್ಯರು ಇಟ್ಟಿರುವ ಭರವಸೆ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಪ್ರತೀ ವರ್ಷದಂತೆ ಈ ಬಾರಿಯೂ ಬೆಂಗಳೂರಿನಲ್ಲಿನ 15 ದೇವಸ್ಥಾನಗಳಲ್ಲಿ ಗುಡಿಯ ಸಂಭ್ರಮ (ಬೆಂಗಳೂರು ದೇವಸ್ಥಾನಗಳ ಹಬ್ಬ) ವನ್ನು ನಡೆಸಲು ಉದ್ದೇಶಿಸಲಾಗಿದ್ದು, ಈ ಹಬ್ಬವನ್ನು ಬೆಂಗಳೂರು ನಗರದ ಪ್ರಾಚೀನಾ ದೇವಸ್ಥಾನ ಆಡಳಿತ ಸಹಭಾಗಿತ್ವದಲ್ಲಿ ನಡೆಸಲಾಗುವುದು. ಈ ವಾರ್ಷಿಕ-ಹಬ್ಬವು ಬೆಂಗಳೂರಿನ ಸಂಸ್ಕೃತಿ, ಇತಿಹಾಸ, ವೈಭವವನ್ನು ಬಿಂಬಿಸಲಿದ್ದು, ನಗರದ ಸಾರ್ವಜನಿಕರನ್ನು ಸಾಂಸ್ಕೃತಿಕವಾಗಿ ಒಟ್ಟು ಗೂಡಿಸಲಿದ್ದು, ಬೆಂಗಳೂರು ಪ್ರವಾಸಿಗರಿಗೆ ನಮ್ಮ ಸಂಸ್ಕೃತಿ ಹಾಗೂ ಐತಿಹಾಸಿಕ ದೇವಾಲಯಗಳನ್ನು ಪರಿಚಯಿಸಲು ಇದೊಂದು ಸುವರ್ಣ ಅವಕಾಶ ಎಂದು ತಿಳಿಸಿ, ಹಬ್ಬದ ದಿನಗಳಲ್ಲಿ ಶಾಸ್ತ್ರೀಯ ಸಂಗೀತ, ನೃತ್ಯ ಕಲೆ, ನಾಟಕಗಳ ಕಾರ್ಯಕ್ರಮವನ್ನು ಏರ್ಪಡಿಸಲಿದ್ದೇವೆಂದು ಇದಕ್ಕಾಗಿ ಅಂತರ್ ರಾಷ್ಟ್ರೀಯ, ರಾಷ್ಟ್ರೀಯ ಮತ್ತು ಸ್ಥಳೀಯ ಕಲಾವಿದರು ಇದರಲ್ಲಿ ಭಾಗವಹಿಸಲಿದ್ದಾರೆ. ಇದು ನಮ್ಮ ಬೆಂಗಳೂರು ಹಾಗೂ ರಾಜ್ಯಕ್ಕೆ ಹೆಮ್ಮೆಯ ಪ್ರತೀಕವಾಗಲಿದೆ ಎಂದು ತಿಳಿಸಿ, ಕಳೆದ ಬಾರಿ ಬಿ.ಬಿ.ಎಂ.ಪಿ ವತಿಯಿಂದ ರೂ. 15.00 ಲಕ್ಷಗಳನ್ನು ಸಹಾಯ ಧನವಾಗಿ ಪಡೆಯಲಾಗಿದ್ದು, ಈ ಬೆಂಬಲದಿಂದ ಕಾರ್ಯಕ್ರಮಗಳಿಗೆ ತುಂಬಾ ಅನುಕೂಲವಾಗಿರುವುದಾಗಿ ತಿಳಿಸಿ, ಈ ಬಾರಿಯ ವಾರ್ಷಿಕ ಹಬ್ಬಕ್ಕೆ ಹೆಚ್ಚಿನ ಧನ ಸಹಾಯ ಮತ್ತು ಬೆಂಬಲ ನೀಡಬೇಕೆಂದು ಕೋರಿರುತ್ತಾರೆ.

2010-11 ನೇ ಸಾಲಿನಲ್ಲಿ ಸದರಿಯವರಿಗೆ ರೂ. 15.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ.

ಮುಂದುವರೆದಂತೆ, 2010–11 ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ **24. ಸಂಸ್ಕೃತಿ ಮತ್ತು ಕ್ರೀಡೆ** ಲೆಕ್ಕ ಶೀರ್ಷಿಕೆಯಡಿಯಲ್ಲಿ **"ಕಡಲೆಕಾಯಿ ಪರಿಷೆ ಮತ್ತು ಗುಡಿ ಹಬ್ಬ ಹಾಗೂ ಇನ್ನಿತರೆ ಸಾಂಸ್ಕೃತಿಕ ಕಾರ್ಯಕ್ರಮ" (P2213)** ಗಳಿಗೆ ರೂ. 30.00 ಲಕ್ಷಗಳ ಅನುದಾನವನ್ನು ಮೀಸಲಿರಿಸಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಈ ಸಂಸ್ಥೆಗೆ ರೂ.2.00 ಲಕ್ಷ ಬಿಡುಗಡೆ ಮಾಡಬಹುದು

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ಆಯುಕ್ತರ ದಿನಾಂಕ : 02/02/2012ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.10.00 (ಹತ್ತು ಲಕ್ಷ) ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *16]. ವಿಷಯದ ಸಂಖ್ಯೆ :–ತೆಆಸ್ಥಾಸ/466/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)129/11–12, ದಿನಾಂಕ : 02–02–2012 ರಲ್ಲಿ ವಿವರಿಸಿರುವಂತೆ, ಡಾ॥ ಭಾರತಿ ವಿಷ್ಣುವರ್ಧನ, ವಿಭಾ ಚಾರಿಟಬಲ್ ಟ್ರಸ್ಟ್, ವಾಲ್ಮೀಕ, ನಂ. 1203, 26ನೇ 'ಎ' ಮುಖ್ಯರಸ್ತೆ, 35ನೇ ಅಡ್ಡರಸ್ತೆ, 4ನೇ 'ಟಿ' ಬ್ಲಾಕ್, ಬೆಂಗಳೂರು – 560 0041. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಕಳೆದ ವರ್ಷ ಡಾ॥ ವಿಷ್ಣುವರ್ಧನ ರವರ 60ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ತಮ್ಮ ವಿಭಾ ಚಾರಿಟೆಬಲ್ ಟ್ರಸ್ಟ್ ಹಮ್ಮಿಕೊಂಡಿದ್ದ ಹಲವಾರು ಕಾರ್ಯಕ್ರಮಗಳಿಗೆ ಪಾಲಿಕೆ ನೀಡಿದ ಸಹಕಾರಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ಈ ವರ್ಷವೂ ಸೆಪ್ಟೆಂಬರ್ 17 ಮತ್ತು 18 ರಂದು ಡಾ॥ ವಿಷ್ಣುವರ್ಧನರವರ 61 ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ತಮ್ಮ ವಿಭಾ ಚಾರಿಟೆಬಲ್ ಟ್ರಸ್ಟ್ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದ ವಿವರಗಳನ್ನು ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇವೆಂದು, ಕಳೆದ ವರ್ಷದಂತೆ ಈ ವರ್ಷವೂ ಡಿಸೆಂಬರ್ 30 ರಂದು ಡಾ॥ ವಿಷ್ಣುವರ್ಧನರವರ ಪುಣ್ಯ ಸ್ಮರಣೆಯ ಸಂದರ್ಭದಲ್ಲಿ ತಮ್ಮ ವಿಭಾ ಚಾರಿಟೆಬಲ್ ಟ್ರಸ್ಟ್ ಸಂಸ್ಥೆಯು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸಮಯದ ಅಭಾವ ಇರುವುದರಿಂದ, ತಮ್ಮ ಈ ಎಲ್ಲ ಕಾರ್ಯಕ್ರಮಗಳು ಸುಸೂತ್ರವಾಗಿ ನೆರವೇರಲು ದಯಮಾಡಿ ಈಗಾಗಲೇ ಮಂಜೂರಾಗಿರುವ ಅನುದಾನದ ಹಣವನ್ನು, ಕೂಡಲೇ ಬಿಡುಗಡೆ ಮಾಡಬೇಕಾಗಿ ಕೋರಿರುತ್ತಾರೆ. ಸದರಿ ಸಂಸ್ಥೆಗೆ 2010–11 ನೇ ಸಾಲಿನಲ್ಲಿ ರೂ. 3.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನಗಳಿರುತ್ತವೆ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12 ರಂತೆ 185 ಸಂಘ / ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ

ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (74) ರಲ್ಲಿ **"ವಿಭಾ ಚಾರಿಟಬಲ್ ಟ್ರಸ್ಟ್"**, ರವರಿಗೆ **ರೂ. 2.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಿರುವುದು ಸರಿಯಷ್ಟೆ. ಆದರೆ ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಗೆ ಅನುದಾನ ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ಮಾನ್ಯ ಆಯುಕ್ತರ ದಿನಾಂಕ : 02/02/2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.2.00 ಲಕ್ಷ ಅನುದಾನವನ್ನು (ರೂ.2,00,000–00) ಮಂಜೂರು ಮಾಡಲು ತೀರ್ಮಾನಿಸಿದೆ.***

## *17]. ವಿಷಯದ ಸಂಖ್ಯೆ :–ತೆಆಸ್ಥಾಸ/467/2011–12*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 16–02–2012 ರಲ್ಲಿ ವಿವರಿಸಿರುವಂತೆ, ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗ ವ್ಯಾಪ್ತಿಯಲ್ಲಿ ಬರುವ ವಾರ್ಡ್ ಸಂಖ್ಯೆ : 131 (ನಾಯಂಡಹಳ್ಳಿ)ರ ಈ ಕೆಳಕಂಡ ಒಟ್ಟು 18 ಕಾಮಗಾರಿಗಳು ತುರ್ತಾಗಿದ್ದು, ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ಹಾನಿಯಾಗಿ ಅತಂತ್ರ ಸ್ಥಿತಿಯಲ್ಲಿರುವುದಾಗಿ ಶ್ರೀಮತಿ.ಹೆಚ್.ಎಸ್.ರಾಜೇಶ್ವರಿ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ : 131 ರವರು ಪತ್ರದ ಮುಖಾಂತರ ಕೋರಿದ್ದು, ಜಾಬ್ ನಂಬರ್ ಹಾಗೂ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿದ್ದು, ಒಟ್ಟು ಮೊತ್ತ ರೂ.324.22 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಯಾವ ಲೆಕ್ಕಶೀರ್ಷಿಕೆಯಡಿಯಲ್ಲಿ ಜಾಬ್ ನಂಬರ್ ನೀಡಬಹುದೆಂದು ತಮ್ಮ ನಿರ್ದೇಶನ ಕೋರಲಾಗಿದೆ ಹಾಗೂ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

| ಕ್ರ.ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Construction of CC Drain, Road & Covering slab to Nayandahalli village in ward No-131. | 19.99 |
| 2 | Providing chain link fencing to Hindu Burrial Ground (Flood Damaged Portion) in ward No-131 | 6.00 |
| 3 | Construction of CC Road, Drain & Covering slab to Nayandahalli Janatha colony Narrow roads in ward No-131. | 19.80 |
| 4 | Providing Concreting to rain damage roads to Nayandahalli in ward No-131. | 19.75 |
| 5 | Providing Water Supply line to Nayandahalli in ward No-131 | 19.10 |
| 6 | Removal of Silt & Debries in drains at Nayandahalli Railway Station Drain in Nayandahalli in ward No-131 | 5.00 |
| 7 | Providing Asphalting to road & Drain & covering slab near rubber Factory road in Nayandahalli in ward No-131 | 19.99 |
| 8 | Concreting to narrow roads tometro Layout in Nayandahalli in ward No-131 | 18.65 |
| 9 | Providing sewage line diversion to SWD at Gangondanahalli & Metro Layout in ward No-131 | 19.70 |
| 10 | Providing Asphalting to 1st 'C' & 2nd Cross & CC Drain to Gangondanahalli upto SWD in Ward No-131 | 19.99 |
| 11 | Providing Asphalting to 1st 'A' & B Cross & CC Drain to Gangondanahalli upto SWD in Ward No-131 | 19.99 |
| 12 | Providing concreting to narrow roads & CC Drains to Gangondanahalli upto SWD in Ward No-131 | 19.65 |
| 13 | Providing Asphalting to roads & CC Drain to Gangondanahalli 3rd cross SWD in Ward No-131 | 19.99 |
| 14 | Providing Asphalting to roads & CC Drain to Gangondanahalli 4th cross SWD in Ward No-131 | 19.99 |
| 15 | Providing Asphalting to 5th main road & CC Drains to Gangondanahalli in Ward No-131 | 19.99 |

| | | |
|---|---|---|
| 16 | Providing Asphalting to roads Near P.M.Provision Stores/Bakery in metro Layout in Ward No-131 | 17.00 |
| 17 | Concreting to narrow roads Adhacent to SWD roads (Opp to Slum Board Houses) at Gangondanahalli in Ward No-131 | 19.65 |
| 18 | Providing Asphalting to 4th main road, SSM Drain & Covering slab at Gangondanahalli in Ward No-131 | 19.99 |
| | ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ) | **324.22** |

***ನಿರ್ಣಯ :*** ***2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 01–ಕೌನ್ಸಿಲ್, ಸಾಮಾನ್ಯ ವ್ಯಚ್ಚಗಳು ಮೀಸಲು ನಿಧಿ-P-2415 T&F ಸಮಿತಿಗೆ ಮೀಸಲಿಟ್ಟ ನಿದಿಯಲ್ಲಿ ಬರಿಸುವಂತೆ, ವಿಶೇಷ ಆಯುಕ್ತರು ಯೋಜನೆ ರವರ ದಿನಾಂಕ 16/02/2012ರ ಟಿಪ್ಪಣಿಯಂತೆ ತೀರ್ಮಾನಿಸಿದೆ.***

## ***18]. ವಿಷಯದ ಸಂಖ್ಯೆ :–ತೆಆಸ್ಥಾಸ/468/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ದಿನಾಂಕ : 17–02–2012 ರಲ್ಲಿ ವಿವರಿಸಿರುವಂತೆ, ಯಶವಂತಪುರ ಹೋಬಳಿ ಹೇರೋಹಳ್ಳಿ ಗ್ರಾಮದ ಸರ್ವೆ ನಂ.63 ರಲ್ಲಿ 30 ಎಕರೆ ವಿಸ್ತೀರ್ಣದ ನಿವೇಶನವನ್ನು 30 ವರ್ಷದ ಅವಧಿಗಾಗಿ ಗುತ್ತಿಗೆ ಆಧಾರದ ಮೇಲೆ ದಿನಾಂಕ: 13.4.1992 ರಂದು ಸರ್ಕಾರದ ಪರವಾಗಿ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ರವರು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಟ್ರಸ್ಟ್ ಪರವಾಗಿ ನೋಂದಾಯಿಸಿರುತ್ತಾರೆ.

ದಿನಾಂಕ: 23–10–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಟ್ರಸ್ಟ್ ಪರವಾಗಿ ಖಾತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ಲೀಸ್ ಡೀಡ್‌ನಲ್ಲಿನ Objectives ಆಧಾರದ ಮೇಲೆ ತಳ+ನೆಲ ಮಹಡಿಯ ಸಮುದಾಯ ಭವನವನ್ನು ನಿರ್ಮಿಸಲು ಟ್ರಸ್ಟ್ ಪರವಾಗಿ ನಕ್ಷೆ ಪ್ರಸ್ತಾವನೆಗಳನ್ನು ಅಪರ ಆಯುಕ್ತರು, ರಾಜರಾಜೇಶ್ವರಿ ನಗರ ವಲಯದ ಕಛೇರಿಗೆ ಸಲ್ಲಿಸಿ ಅನುಮೋದನೆ ಕೋರಿರುತ್ತಾರೆ.

ವಲಯದ ವತಿಯಿಂದ ನಕ್ಷೆ ಪ್ರಸ್ತಾವನೆಗಳನ್ನು ಪರಿಶೀಲಿಸಿ ನಕ್ಷೆ ಮಂಜೂರಾತಿ ಶುಲ್ಕಗಳನ್ನು ಒಟ್ಟಾರೆಯಾಗಿ ರೂ. 96,15,179 ಗಳಿಗೆ ಲೆಕ್ಕಾಚಾರ ಮಾಡಿ ಕಡತ ಸಲ್ಲಿಸಿರುತ್ತಾರೆ.

| | | | | |
|---|---|---|---|---|
| 1 | ಪರವಾನಗಿ ಶುಲ್ಕ | = 1,453X60 | =Rs. | 87,180.00 |
| 2 | ನೆಲಬಾಡಿಗೆ ಶುಲ್ಕ | = 1,453X100 | =Rs. | 1,45,300.00 |
| 3 | ಉತ್ತಮತೆ ಶುಲ್ಕ (ನಿವೇಶನಕ್ಕೆ) | = 1,21,450X75 | =Rs. | 91,08,750.00 |
| 4 | ಉತ್ತಮತೆ ಶುಲ್ಕ (ಕಟ್ಟಡಕ್ಕೆ) | = 1,453X10 | =Rs. | 14,530.00 |
| 5 | ಭದ್ರತಾ ಠೇವಣಿ | = 1,453X100 | =Rs. | 1,45,300.00 |
| 6 | ನಕ್ಷೆ ಪ್ರತಿಗಳು | | =Rs. | 3,400.00 |
| 7 | ಪರಿಶೀಲನಾ ಶುಲ್ಕ | | =Rs. | 4,359.00 |
| 8 | ಸೆಸ್ 1% | | =Rs. | 1,064.00 |
| 9 | ಕಾರ್ಮಿಕ ಕಲ್ಯಾಣ ನಿಧಿ | =1,453X73.20 | =Rs. | 1,05,296.00 |
| | | **ಒಟ್ಟಾರೆ** | **=Rs.** | **96,15,179.00** |

ನಕ್ಷೆ ಶುಲ್ಕಗಳಲ್ಲಿ ವಿನಾಯಿತಿ ನೀಡಲು ಟ್ರಸ್ಟ್ ವತಿಯಿಂದ ಮನವಿ ಸಲ್ಲಿಸಿದ್ದು, ಅಪರ ಆಯುಕ್ತರು, ರಾಜರಾಜೇಶ್ವರಿನಗರ ವಲಯದಿಂದ ಪರಿಶೀಲಿಸಿ ಕ್ರಮ ಸಂಖ್ಯೆ (2)ರಲ್ಲಿನ ನೆಲ ಬಾಡಿಗೆ ಶುಲ್ಕಗಳನ್ನು ಕಟ್ಟಡ ಉಪವಿಧಿಗಳು–2003 ರ ಸೆಕ್ಷನ್ 3.13 (3) ಅನ್ವಯ ಕಟ್ಟಡ ಸಾಮಗ್ರಿಗಳನ್ನು ತಮ್ಮದೆ ಆದ ಸ್ಥಳದಲ್ಲಿ ಶೇಖರಿಸುವುದರಿಂದ ಅದರ ಮೊತ್ತವಾದ ರೂ. 1,45,300/– ಗಳಿಗೆ ವಿನಾಯಿತಿ ನೀಡಬಹುದಾಗಿ ತಿಳಿಸಿ, ಸದರಿ ಟ್ರಸ್ಟ್ ವತಿಯಿಂದ ಗ್ರಾಮಂತರ ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಕೋಮುಗಳಿಗೆ ಸೌಲಭ್ಯ ನೀಡುತ್ತಿದ್ದು, ಧಾರ್ಮಿಕ ಚಟುವಟಿಕೆಗಳನ್ನು ಪ್ರಚುರ ಪಡಿಸುತ್ತಿದ್ದು, ಅಲ್ಲಿನ ಸುತ್ತ ಮುತ್ತಲಿನ ಜನರು ಉಪಯೋಗವನ್ನು ಪಡೆದು ಕೊಳ್ಳುತ್ತಿರುವ ಕಾರಣ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಕ್ರಮ ಸಂಖ್ಯೆ (3)ರಲ್ಲಿನ ಉತ್ತಮತೆ ಶುಲ್ಕ (ನಿವೇಶನ) ಕ್ಕಾಗಿ ವಿಧಿಸಿರುವ ರೂ. 91,08,750/– ಗಳ ವಿನಾಯಿತಿ ನೀಡಬಹುದೆಂದು ವರದಿ ನೀಡಿರುತ್ತಾರೆ.

ಆದರೆ ಕಟ್ಟಡದ ಉತ್ತಮಮತೆ ಶುಲ್ಕಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಸೆಕ್ಷನ್ 18.18ಎ.37ಎ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಪತ್ರದ ಸಂಖ್ಯೆ: HUD/90/TTP/91 ದಿನಾಂಕ: 1.7.1991 ರಲ್ಲಿ ತಿಳಿಸಿರುವಂತೆ ವಿಧಿಸಲಾಗಿರುತ್ತದೆ. ನಿವೇಶನಕ್ಕೆ ಪಾಲಿಕೆ ವತಿಯಿಂದ ಕಂದಾಯ ಪಾವತಿಗಾಗಿ ಶೇ.100 ಪೂರ್ಣ ರಿಯಾಯಿತಿ ನೀಡಿದ್ದು, ಸಹಾಯಕ ಕಂದಾಯ ಅಧಿಕಾರಿ ಹೇರೋಹಳ್ಳಿ ಉಪವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಪತ್ರದ ಸಂಖ್ಯೆ: ಸ.ಕಂ.ಅ (ಹೇ)/ಕೆ.ಟಿ.ಆರ್/58/2010–11/ಎಂ.ಟಿ.ಆರ್/9/2010–11 ದಿನಾಂಕ: 30.11.2010 ಉತ್ತಮಮತೆ ಶುಲ್ಕವನ್ನು ಕರ್ನಾಟಕನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ವಯ ವಿಧಿಸಲಾಗಿದ್ದು, ನಕ್ಷೆ ಮಂಜೂರಾತಿಗಾಗಿ ವಿಧಿಸುವ ಶುಲ್ಕಗಳಾಗಿದ್ದು, ಉತ್ತಮಮತೆ ಶುಲ್ಕವಾದ (ನಿವೇಶನಕ್ಕೆ ಮತ್ತು ಕಟ್ಟಡಕ್ಕೆ) ರೂ. 91,23,280.00 ಗಳ ವಿನಾಯಿತಿ ಪರಿಗಣಿಸುವ ಬಗ್ಗೆ ಮಂಡಿಸಿರುವ ಆಯುಕ್ತರ ದಿನಾಂಕ: 5–3–2011 ರ ಟಿಪ್ಪಣಿಯು ಪ್ರಸ್ತಾಪಿತ ವಿಷಯವು ಶುಲ್ಕ ವಿನಾಯಿತಿಗೆ ಸಂಬಂಧಿಸಿರುವುದರಿಂದ ಪ್ರಕರಣವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕೆ ಸಲ್ಲಿಸಬಹುದಾಗಿರುತ್ತದೆಂದು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ: 5–4–2011 ರಂದು ನಿರ್ಣಯಿಸಿತ್ತು. (ವಿಷಯದ ಸಂಖ್ಯೆ: ನಯೋ ಆ.ಸ್ಥಾ.ಸ/95/2010–11) ದಿನಾಂಕ: 23–5–2011 ರಲ್ಲಿ ಪ್ರಸ್ತಾಪಿತ ವಿಷಯ ಕುರಿತಂತೆ ತೆರಿಗೆ ಆರ್ಥಿಕ ಸ್ಥಾಯಿ ಸಮಿತಿಯು ಕಾನೂನು ಅಭಿಪ್ರಾಯ ಪಡೆದು ಮರು ಮಂಡಿಸಲು ನಿರ್ಣಯ ಕೈಗೊಂಡಿರುತ್ತದೆ.(ವಿಷಯದ ಸಂಖ್ಯೆ: ತೆಆಸ್ಥಾಸ/49/2011–12) ಅದರಂತೆ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲಾಗಿದ್ದು, ತನ್ನ ಅಭಿಪ್ರಾಯದಲ್ಲಿ ನಕ್ಷೆ ಮಂಜೂರಾತಿ ಶುಲ್ಕಗಳಲ್ಲಿನ ಉತ್ತಮಮತೆ ಶುಲ್ಕ ಪಾವತಿರುವಂತೆ ಕಾಯ್ದೆ ಅನ್ವಯ ವಿಧಿಸಲಾಗಿದ್ದು, ಪ್ರಸ್ತಾಪಿತ ಶುಲ್ಕಗಳನ್ನು ಮನ್ನಾ ಮಾಡುವ/ವಿನಾಯಿತಿ ನೀಡುವ ಅಧಿಕಾರ/ಪ್ರಾಧಿಕಾರ ಸರಕಾರದ ವ್ಯಾಪ್ತಿಯಲ್ಲಿರುವುದರಿಂದ ಪಾಲಿಕೆ ವತಿಯಿಂದ ತೀರ್ಮಾನ ತೆಗೆದುಕೊಂಡು ನಿರ್ಣಯಗಳನ್ನು ಕೆ.ಎಂ.ಸಿ.ಕಾಯ್ದೆ 1976 ರ ಕಲಂ 98 ರ ಅಡಿಯಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರಕ್ಕೆ ಸಲ್ಲಿಸುವುದು ಸೂಕ್ತ ಹಾಗೂ ಸಮಂಜಸವೆಂದು ಅಭಿಪ್ರಾಯ ಪಟ್ಟಿದೆ. (ಕಡತದಲ್ಲಿರಿಸಿದೆ) ಮುಂದಿನ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮರುಮಂಡಿಸಲಾದ ಟಿಪ್ಪಣಿ.

***ನಿರ್ಣಯ : ಆಯುಕ್ತರ ಟಿಪ್ಪಣಿ ದಿನಾಂಕ : 17–02–2012 ರಲ್ಲಿನ ಪ್ರಸ್ತಾವನೆಯನ್ನು ಒಪ್ಪಿದೆ.***

## ***19]. ವಿಷಯದ ಸಂಖ್ಯೆ :–ತೆಆಸ್ಥಾಸ/469/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : CAO/AO(P)/HUDCO LOAN/PR32/11-12, ದಿನಾಂಕ : 15–02–2012 ರಲ್ಲಿ ವಿವರಿಸಿರುವಂತೆ, 2011–12ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ರೂ.500.0 ಕೋಟಿ ಸಾಲಪಡೆಯಲು ಅವಕಾಶ ಕಲ್ಪಿಸಿಕೊಂಡಿದ್ದು ಇದರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ : 23(199)2011–12 ದಿನಾಂಕ : 29–11–2011 ರಲ್ಲಿ ಅನುಮೋದನೆಯಾಗಿರುತ್ತದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಮತ್ತು ಅಪರ ಮುಖ್ಯ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆಗಳಿಗೆ ದಿನಾಂಕ : 29–12–2011 ರಂದು ಹುಡ್ಕೋ ಸಂಸ್ಥೆಯಿಂದ ರೂ.500.00 ಕೋಟಿಗಳ ದೀರ್ಘಾವಧಿ ಸಾಲವನ್ನು ಪಡೆಯಲು ಅನುಮತಿ ಕೋರಿ ಪತ್ರ ಬರೆಯಲಾಗಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ ನಇ/771/ಎಂ.ಎನ್.ವೈ/2011 ಬೆಂಗಳೂರು ದಿನಾಂಕ : 03–01–2012 ರಂತೆ ಷರತ್ತುಗಳೊಂದಿಗೆ ಸಾಲ ಪಡೆಯಲು ಅನುಮತಿ ನೀಡಲಾಗಿರುತ್ತದೆ.

ಹುಡ್ಕೋ ಸಂಸ್ಥೆಯವರು ಮೇಲ್ಕಂಡ ದೀಘಾವಧಿ ಸಾಲ ನೀಡಲು ಪಾಲಿಕೆಯಿಂದ ಹೆಚ್ಚುವರಿ ಭದ್ರತೆಗಾಗಿ ಸಾಲದ ಮೊತ್ತದ ಶೇ.125% ರಷ್ಟು ಮೌಲ್ಯವುಳ್ಳ ಸ್ಥಿರಾಸ್ಥಿಯ ಪತ್ರಗಳನ್ನು ಪದ್ದತಿಯಲ್ಲಿ ಹೆಚ್ಚುವರಿ ಭದ್ರತೆಯಾಗಿ ಒದಗಿಸಬೇಕೆಂದು ದಿನಾಂಕ 23–11–2011ರ ಪತ್ರದಲ್ಲಿ ಕೋರಿರುವ ಮೇರೆಗೆ ಶ್ರೀ.ಕೃಷ್ಣರಾಜೇಂದ್ರ ಮಾರುಕಟ್ಟೆ ಕಟ್ಟಡದ ಪತ್ರಗಳನ್ನು ಭದ್ರತೆಗೆ ಒದಗಿಸಲಾಗಿದೆ.

ಆದುದರಿಂದ ಹುಡ್ಕೋ ಸಂಸ್ಥೆಯಿಂದ ರೂ.500.00 ಕೋಟಿಗಳ ದೀರ್ಘಾವಧಿ ಸಾಲ ಪಡೆದಿರುವ ಬಗ್ಗೆ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಒಪ್ಪಿಗೆ ಪಡೆಯಲು ಘಟನೋತ್ತರ ಮಂಜೂರಾತಿ ಕೋರಿ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ಆಯುಕ್ತರ ದಿನಾಂಕ : 15/02/2012ರ ಟಿಪ್ಪಣಿಯನ್ನು ಒಪ್ಪಿದೆ.***

## ***20]. ವಿಷಯದ ಸಂಖ್ಯೆ :–ತೆಆಸ್ಥಾಸ/470/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/154/11–12, ದಿನಾಂಕ : 08–12–2011 ರಲ್ಲಿ ವಿವರಿಸಿರುವಂತೆ, ಅರ್ಜಿದಾರರಾದ ಮುನಿಯಮ್ಮ ಎಂಬುವವರ ಮಾವನವರಾದ ಶ್ರೀ.ಲಕ್ಷ್ಮಣ್ ಎಂಬುವವರು 1960ರ ಹಿಂದೆ ಪಾಲಿಕೆಯಲ್ಲಿ ಗ್ಯಾಂಗ್‌ಮೆನ್ ಆಗಿ

ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಬಿನ್ನಿಮಿಲ್‌ನ ಹತ್ತಿರ ದೊಡ್ಡ ಚರಂಡಿಯ ಪಾಯ ತೆಗೆಯುತ್ತಿರುವ ಸಂದರ್ಭದಲ್ಲಿ ಮಣ್ಣು ಕುಸಿದು ಮರಣ ಹೊಂದಿದ್ದ ಪ್ರಯುಕ್ತ ಪರಿಹಾರವಾಗಿ ಆತನ ಹೆಂಡತಿಯಾದ ಶ್ರೀಮತಿ.ಚೆನ್ನಮ್ಮ ರವರ ಹೆಸರಿಗೆ 20*30=600 ಚದರ ಅಡಿಗಳ ಖಾಲಿ ನಿವೇಶನವನ್ನು ಹಂಚಿಕೆ ಮಾಡಿ ನಿವೇಶನದ ಬೆಲೆ ರೂ.480/- ಗಳನ್ನು ಪಾವತಿ ಮಾಡುವಂತೆ ಪಾಲಿಕೆ ವತಿಯಿಂದ 1967 ರಲ್ಲೇ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ. ಆ ಸಂದರ್ಭದಲ್ಲಿ ನಿವೇಶನದ ಮೊತ್ತವನ್ನು ಪಾವತಿ ಮಾಡಲು ಸಾಧ್ಯವಾಗದ ಕಾರಣ ಸದರಿ ನಿವೇಶನವನ್ನು ವಾರ್ಷಿಕ ನೆಲಬಾಡಿಗೆ ವರ್ಷಕ್ಕೆ ರೂ.5/-ಗಳ ಆಧಾರದ ಮೇಲೆ 1967 ರಿಂದ 1997ರ ವರೆಗೆ 30 ವರ್ಷಗಳಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ಸದರಿ ನಿವೇಶನದಲ್ಲಿ ಹಂಚಿಕೆದಾರರು ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದು, ದಿ:25-05-1988 ರಂದು ನಿವೇಶನದ ಮೊತ್ತವನ್ನು ಪಾವತಿಮಾಡಿರುತ್ತಾರೆ.

ಅರ್ಜಿದಾರರ ಅತ್ತೆಯವರಾದ ಚೆನ್ನಮ್ಮ ರವರು ಮರಣ ಹೊಂದಿದ್ದು, ಆಕೆಯ ಮಗನಾದ ಶ್ರೀ.ಎಲ್.ಸುಬ್ರಮಣಿ ರವರು ಪಾಲಿಕೆಯಲ್ಲಿ ಪೌರ ಕಾರ್ಮಿಕನಾಗಿ ಕೆಲಸ ನಿರ್ವಹಿಸುತ್ತಿದ್ದು, ಸದರಿ ಆ ಮನೆಯಲ್ಲಿ ವಾಸ ಮಾಡುತ್ತಾ ಬಂದಿದ್ದು, ಆತನು ಸಹ ದಿ:01-10-1988 ರಂದು ನಿಧನ ಹೊಂದಿರುತ್ತಾರೆ. ಹಾಲಿ ಸುಬ್ರಮಣಿ ಇವರ ಪತ್ನಿಯಾದ ಮುನಿಯಮ್ಮ (ಅರ್ಜಿದಾರರು) ಅರ್ಜಿಯನ್ನು ಸಲ್ಲಿಸಿ ಸದರಿ ನಿವೇಶನದ ಗುತ್ತಿಗೆಯನ್ನು ವರ್ಗಾಯಿಸಲು ಅಥವಾ ನವೀಕರಿಸುವ ಬಗ್ಗೆ ಕೋರಿದ್ದರ ಮೇರೆಗೆ ದಿನಾಂಕ: 31-12-2001 ರಂದು ವಲಯ ಉಪ ಆಯುಕ್ತರವರ ಕಛೇರಿಯಿಂದ ಸ್ಥಾಯಿ ಸಮಿತಿಗಳು ಹಾಗೂ ನಗರ ಪಾಲಿಕೆಯ ನಿರ್ಣಯದಲ್ಲಿ ಮುನಿಯಮ್ಮನ ಹೆಸರಿಗೆ ವರ್ಗಾಯಿಸಿ ನವೀಕರಿಸಲು ತೀರ್ಮಾನಿಸಲಾಗಿರುತ್ತದೆ. ಗುತ್ತಿಗೆ ಅವಧಿಯನ್ನು ಎಷ್ಟು ಅವಧಿಗೆ ನವೀಕರಿಸಬೇಕು ಮತ್ತು ಗುತ್ತಿಗೆಯ ಹಣವನ್ನು ಎಷ್ಟು ನಿಗದಿಪಡಿಸಬೇಕೆಂಬುದರ ಬಗ್ಗೆ ಪ್ರಸ್ತಾಪ ಇರುವುದಿಲ್ಲ.

ದಿನಾಂಕ:24-10-2011ರಂದು ಪ್ರಸ್ತುತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಯಿತು. ಇದು ಹೆಂಚಿನ ಮನೆ ಆಗಿರುತ್ತದೆ. 1961 ರಿಂದ ಗುತ್ತಿಗೆ ಆಧಾರದ ಮೇಲೆ ನೀಡಿದ್ದು, ಮೊದಲಿಗೆ ಈ ಸ್ವತ್ತನ್ನು ಶ್ರೀ. ಸುಬ್ರಮಣಿಯವರಿಗೆ ನೀಡಿದ್ದು, ಇವರು ಮರಣ ಹೊಂದಿದ ನಂತರ ಇವರ ಪತ್ನಿಯಾದ ಶ್ರೀಮುನಿಯಮ್ಮ ರವರು ಹಾಲಿ ವಾಸವಾಗಿದ್ದು, ಅವರ ಹೆಸರಿಗೆ ಗುತ್ತಿಗೆ ನವೀಕರಿಸುವಂತೆ ಕೋರಿರುತ್ತಾರೆ. ಈ ಮನೆಯ ಭಂಗಿ ಕಾಲೋನಿಯಲ್ಲಿ ಇದ್ದು, ಸಾರ್ವಜನಿಕರು ಉಪಯೋಗಿಸಲು ಯೋಗ್ಯವಾಗಿರುವುದಿಲ್ಲ. ಗುತ್ತಿಗೆ ಮುಂದುವರಿಸಿದ್ದಲ್ಲಿ, ಗುತ್ತಿಗೆ ಮೊತ್ತ ಪಾವತಿ ಮಾಡಲು ಅರ್ಜಿದಾರರು ಒಪ್ಪಿರುತ್ತಾರೆ. ಹಿಂದಿನ ಆಡಳಿತಗಾರರು ಕೈಗೊಂಡ ತೀರ್ಮಾನದಂತೆ the lease being heritable but not transferable ಎಂಬುದಾಗಿರುತ್ತದೆ.

ಪ್ರಸ್ತುತ ಜಾಗದ ವಿಸ್ತೀರ್ಣವು 20*30=600 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21-09-2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.1800/- ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 1800X600=10,80,000/-ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ:10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.1,80,00/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.9000/- ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಶ್ರೀಮತಿ.ಮುನಿಯಮ್ಮ, ಇವರ ಹೆಸರಿಗೆ ಗುತ್ತಿಗೆ ಕರಾರು ನೊಂದಾಯಿಸುವ ದಿನಾಂಕದಿಂದ 5 ವರ್ಷದ ಅವಧಿಗೆ ಗುತ್ತಿಗೆ ನವೀಕರಿಸುವ ಮುಂದಿನ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮೇರೆಗೆ ಮಾನ್ಯ ಆಯುಕ್ತರ ದಿನಾಂಕ: 08-12-2011ರ ಟಿಪ್ಪಣಿಯನ್ನು ಮಾರ್ಪಡಿಸಿ, ಸದರಿರವರಿಗೆ 19767ರಲ್ಲಿ ಈ ನಿವೇಶನವನ್ನು ಹಂಚಿಕೆ ಮಾಡಿ ರೂ.480/- ಗಳನ್ನು ಪಾವತಿಸಲು ನೋಟಿಸ್‌ನ್ನು ಜಾರಿ ಮಾಡಲಾಗಿತ್ತು. ಆದರೆ ಸದರಿರವರು ಈ ಮೊತ್ತವನ್ನು ಪಾವತಿ ಮಾಡಲು ಸಾಧ್ಯವಾಗದ ಕಾರಣ ಇಲ್ಲಿಯವರೆಗೆ ಗುತ್ತಿಗೆ ಆಧಾರದ ಮೇಲೆ ನಿವೇಶನವನ್ನು ಪಡೆದು ವಾಸವಿರುತ್ತಾರೆ. ಮಾನವೀಯತೆಯ ದೃಷ್ಟಿಯಿಂದ ಶ್ರೀಮತಿ ಮುನಿಯಮ್ಮರವರ ಹೆಸರಿಗೆ ಸದರಿ 20X30=600 ಚದರ ಅಡಿಗಳ ಸ್ವತ್ತನ್ನು ಕ್ರಯಕ್ಕೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24-01-2012ರ ನಿರ್ಣಯ.

***<u>-ಮುಂದೂಡಿದೆ-</u>***

## ***<u>21]. ವಿಷಯದ ಸಂಖ್ಯೆ :-ತೆಆಸ್ಥಾಸ/471/2011-12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/277/10-11, ದಿನಾಂಕ : 10-01-2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್-161, ಹೊರ ವರ್ತುಲ ರಸ್ತೆ, ಆಂಜನೇಯನಗರ, ವಾರ್ಡು ಕಛೇರಿ ಬಳಿ ಇರುವ ಹಾಪ್‌ಕಾಮ್ಸ್ ಹತ್ತಿರದಲ್ಲಿ ನಂದಿನಿ ಹಾಲು ಉತ್ಪನ್ನಗಳ ಮಾರಾಟ ಮಳಿಗೆ ಸ್ಥಾಪಿಸಲು ಅನುಮತಿ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟ ರವರು ಕೋರಿರುತ್ತಾರೆ.

ಸ್ಥಳೀಯ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಕೋರಿರುವ ಸ್ಥಳವು ಬಿ.ಡಿ.ಎ. ಸಿ.ಎ. ನಿವೇಶನವಾಗಿದ್ದು, ಈ ಜಾಗದಲ್ಲಿ ಬಿ.ಬಿ.ಎಂ.ಪಿ. ಕಾಮಗಾರಿ ಇಲಾಖೆ, ವಾರ್ಡು ಕಛೇರಿ, ಕಂದಾಯ ಇಲಾಖೆಯ ಸಾರ್ವಜನಿಕ ಸೇವಾ ಕೇಂದ್ರ ಮತ್ತು ಹಾಪ್‌ಕಾಮ್ಸ್ ಮಳಿಗೆ

ಇದ್ದು, ಈ ಪ್ರದೇಶದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ ಮಳಿಗೆ ಮಂಜೂರು ಮಾಡಲು ನಿಯಮಾನುಸಾರ ಮುಂದಿನ ಕ್ರಮಕ್ಕಾಗಿ ಕಡತ ಪ್ರಸ್ತಾಪಿಸಿರುತ್ತಾರೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01-02, ದಿನಾಂಕ:01-03-2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು. ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 21-09-2011ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ರೂ.3,500/-ಗಳಿದ್ದು, ಅರ್ಜಿದಾರರುಗಳು ಕೋರಿರುವ 10X10 ಅಡಿಗಳ ಜಾಗವು 100 ಚ.ಅಡಿಗಳಾಗುತ್ತದೆ. ಇದರಂತೆ 3500X100 = 3,50,000/- ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 35,000/- ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 2,920/- ರೂ.ಗಳಾಗುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ-176ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ.ಎಂ.ಡಿ./2002, ದಿನಾಂಕ:02-06-2003ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ನಗರಯೋಜನೆ ಅಭಿವೃದ್ಧಿ ಸ್ಥಾಯಿಸಮಿತಿಯು ದಿ:18-05-2011ರ ಸಭೆ ನಡವಳಿಯಲ್ಲಿ ಸದರಿ ಸ್ವತ್ತು ಪಾಲಿಕೆಯದೋ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದೋ ಎಂಬುದನ್ನು ಪರಿಶೀಲಿಸಿ, ವರದಿಯೊಂದಿಗೆ ಮರು ಮಂಡಿಸಲು ಸೂಚಿಸಿರುವ ಬಗ್ಗೆ ವಲಯಾಧಿಕಾರಿಗಳು ಈ ಸ್ವತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಾಲಿಕೆಗೆ ಹಸ್ತಾಂತರಗೊಂಡಿರುವ ಸಿ.ಎ.ನಿವೇಶನವಾಗಿದ್ದು, ಇದು ಪಾಲಿಕೆ ಆಸ್ತಿಯಾಗಿರುವುದಾಗಿ ತಿಳಿಸಿರುತ್ತಾರೆ.

ಈ ಮೇಲಿನ ಹಿನ್ನೆಲೆಯಲ್ಲಿ ಸದರಿ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟ ರವರಿಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮೇರೆಗೆ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟ ರವರಿಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಮಾನ್ಯ ಆಯುಕ್ತರ ದಿನಾಂಕ: 10-01-2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 24-01-2012ರ ನಿರ್ಣಯ.

***ನಿರ್ಣಯ : ದಿನಾಂಕ : 24/01/2012 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.***

## 22]. ವಿಷಯದ ಸಂಖ್ಯೆ :-ತೆಆಸ್ಥಾಸ/472/2011-12

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 21-02-2012 ರಲ್ಲಿ ವಿವರಿಸಿರುವಂತೆ, ವಾರ್ಡ್ ನಂ129 ವ್ಯಾಪ್ತಿಯಲ್ಲಿ 8 ಕೊಳವೆ ಬಾವಿಗಳನ್ನು ಕೊರೆಯಲು ರೂ.36.00ಲಕ್ಷಗಳು ಅನುದಾನ ಅವಶ್ಯವಿದ್ದು, ಲೆಕ್ಕಶೀರ್ಷಿಕೆ 1802 ಅಡಿ ವಾರ್ಡಿಗೆ ಮೀಸಲಿಟ್ಟ ರೂ.25.00 ಲಕ್ಷಗಳು ಈಗಾಗಲೇ ಉಪಯೋಗಿಸಲಾಗಿರುತ್ತದೆ. ಆದ್ದರಿಂದ ಸದರಿ ಲೆಕ್ಕಶೀರ್ಷಿಕೆಯಡಿ ಅನುದಾನ ಲಭ್ಯವಿಲ್ಲದ ಕಾರಣ ಲೆಕ್ಕಶೀರ್ಷಿಕೆ ಪಿ2588ಗೆ ನಿಗಧಿಯಾಗಿರುವ ರೂ.200.00 ಲಕ್ಷಗಳಲ್ಲಿ ರೂ.36.00 ಲಕ್ಷಗಳನ್ನು ಪಿ1802 ಲೆಕ್ಕಶೀರ್ಷಿಕೆಗೆ ಕರ್ನಾಟಕ ಮುನಿಸಿಪಲ್ ಕಾಯಿದೆ ಸೆಕ್ಷನ್ 172ರ ರೀತ್ಯ ಮರುಹೊಂದಾಣಿಕೆ ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ವಿಶೇಷ ಆಯುಕ್ತರು ಯೋಜನೆ ರವರ ದಿನಾಂಕ 21/02/2012 ರ ಟಿಪ್ಪಣಿಯನ್ನು ಒಪ್ಪಿದೆ.***

## 23]. ವಿಷಯದ ಸಂಖ್ಯೆ :-ತೆಆಸ್ಥಾಸ/473/2011-12

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(1)ಪಿಆರ್ /251/95-96, ದಿನಾಂಕ : 18-02-2012 ರಲ್ಲಿ ವಿವರಿಸಿರುವಂತೆ, ಸರ್ಕಾರದ 08-09,

ಆದೇಶದ ಸಂಖ್ಯೆ: ಯುಡಿಡಿ 247 ಎಂಎನ್‌ಯು 95, ದಿನಾಂಕ: 19-03-1996ರ ಆದೇಶದಂತೆ ಸ್ಥಳೀಯ ಸಂಸ್ಥೆಗಳಾದ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಹಾಗೂ ಕಂದಾಯ ಇಲಾಖೆಯ ಮುಜರಾಯಿ ಇಲಾಖೆಯ ಹಾಗೂ ಕರ್ನಾಟಕ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ (ಕೆಲವು ಭೂ ವರ್ಗಾವಣೆ ನಿಷೇಧ) ಕಾಯ್ದೆ 1978ರ ಅನ್ವಯ

ಆಸ್ತಿಗಳ ಸಂರಕ್ಷಣೆಗೆ ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆಯನ್ನು ದಿನಾಂಕ: 19–03–1996 ರಿಂದ ಸೃಜಿಸಲಾಗಿದೆ. ಸದರಿ ಕಾರ್ಯಾಚರಣೆ ಪಡೆಯ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸಂಸ್ಥೆಗಳಾದ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಮತ್ತು ಸರ್ಕಾರ ಸಾಮೂಹಿಕವಾಗಿ ಈ ಪಡೆಯ ಸಿಬ್ಬಂದಿ ಮತ್ತು ಇತರೆ ಆಡಳಿತಾತ್ಮಕ ಖರ್ಚಿನ ಸಂಬಂಧದ ವೆಚ್ಚವನ್ನು ತಮ್ಮ ತಮ್ಮ ಪಾಲನ್ನು ನಿರ್ಧರಿಸಿ, ಆ ರೀತಿ ನಿರ್ಧರಿಸಿದ ವೆಚ್ಚವನ್ನು ಆಯಾ ಸಂಸ್ಥೆಗಳು ಭರಿಸಬೇಕೆಂದು ಸದರಿ ಆದೇಶದಲ್ಲಿ ತಿಳಿಸಲಾಗಿತ್ತು. ನಂತರ ಸರ್ಕಾರವು ಆದೇಶದ ಸಂಖ್ಯೆ: ನಅಇ 133 ಎಂಎನ್‌ಯು 1996, ದಿನಾಂಕ: 17–12–1997ರಲ್ಲಿ ವರ್ಷಕ್ಕೆ ಸದರಿ ಸಂಸ್ಥೆಗಳ ಪಾಲನ್ನು ನಿರ್ಧರಿಸಿ ಈ ಕೆಳಕಂಡಂತೆಗೊತ್ತುಪಡಿಸಿರುತ್ತದೆ.

| | |
|---|---|
| ಸರ್ಕಾರದ ಪಾಲು | – ಶೇ.40ರಷ್ಟು |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | – ಶೇ.20ರಷ್ಟು |
| ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಿ | – ಶೇ.20ರಷ್ಟು |
| ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | – ಶೇ.20ರಷ್ಟು |

ಸರ್ಕಾರವು ಮೇಲ್ಕಂಡಂತೆ ಪಾಲಿಕೆಗೆ ಗೊತ್ತುಪಡಿಸಿರುವ ಶೇ. 20ರಷ್ಟು ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆ 0217–60–800–003 (other items)ಗೆ ಜಮಾ ಮಾಡಲಾಗುತ್ತಿದೆ.

ಪೊಲೀಸ್ ಮಹಾನಿರೀಕ್ಷಕರು, ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ (ಬಿ.ಎಂ.ಟಿ.ಎಫ್)ರವರು ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011, ದಿನಾಂಕ: 13/10/2011ರ ಪತ್ರದಲ್ಲಿ ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಹೆಡ್ ಕಾನ್ಸ್‌ಟೇಬಲ್, ಕಾನ್ಸ್‌ಟೇಬಲ್ ಹಾಗೂ ಚಾಲಕರುಗಳಿಗೆ ತಲಾ ಒಂದು ಜೊತೆ ಸಮವಸ್ತ್ರವನ್ನು ಪ್ರತಿ ವರ್ಷ ನೀಡಲು ಉಪ ಆಯುಕ್ತರು (ಆಡಳಿತ) ರವರ ಕಛೇರಿ ಆದೇಶ ಸಂಖ್ಯೆ: ಬಿ12(1)ಪಿಆರ್/251/95–96/08–09, ದಿನಾಂಕ: 05/03/2009ರಂತೆ ಆದೇಶವಾಗಿರುತ್ತದೆ. ಆದರಂತೆ, 2011ನೇ ಸಮವಸ್ತ್ರವನ್ನು ವಿತರಿಸಲು ನ್ಯೂ ಮಾರ್ಡನ್ ಟೈಲರಿಂಗ್ ಹಾಲ್‌ನ ಮಾಲಿಕರಾದ ಶ್ರೀ ಡಿ.ರಾಜು ರವರಿಂದ ಪಡೆದಿರುವ ಒಟ್ಟು ರೂ.1,58,820.00 (ಒಂದು ಲಕ್ಷದ ಐವತ್ತೆಂಟು ಸಾವಿರದ ಎಂಟುನೂರ ಇಪ್ಪತ್ತು ರೂಗಳು ಮಾತ್ರ) ಮೌಲ್ಯ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿ, ಬೆಂಗಳೂರು ಮಹಾನಗರ ಕಾರ್ಯಚರಣೆ ಪಡೆಯ ಅಧಿಕಾರಿ, ಸಿಬ್ಬಂದಿ ಹಾಗೂ ಚಾಲಕರುಗಳಿಗೆ ಸಮವಸ್ತ್ರವನ್ನು ವಿತರಿಸಲು ಮೌಲ್ಯ ಪಟ್ಟಿಯಲ್ಲಿನ ಒಟ್ಟು ಹಣ ರೂ.1,58,800.00 ರೂಗಳನ್ನು ಬಿಡುಗಡೆ ಮಾಡಲು ಆದೇಶವನ್ನು ನೀಡಬೇಕಾಗಿ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಬೆಂಗಳೂರು ಕಾರ್ಯಾಚರಣೆ ಪಡೆಯ (ಬಿ.ಎಂ.ಟಿ.ಎಫ್) ಪೊಲೀಸ್ ಠಾಣೆಯ ಪಿ.ಎಸ್.ಐ. ಗಳು, ಮುಖ್ಯ ಪೇದೆಗಳು, ಪೇದೆಗಳು ಮತ್ತು ಚಾಲಕರುಗಳು ಸೇರಿ ಒಟ್ಟು 36 ಮಂದಿ ಸಿಬ್ಬಂದಿಗಳಿಗೆ ತಲಾ ಒಂದು ಜೊತೆ ಸಮವಸ್ತ್ರವನ್ನು ನ್ಯೂ ಮಾರ್ಡನ್ ಟೈಲರಿಂಗ್ ಹಾಲ್, ಶ್ರೀರಾಮಪುರ, ಬೆಂಗಳೂರು–21ರವರು ನೀಡಿದ್ದ ಮೌಲ್ಯ ಪಟ್ಟಿಯಂತೆ ವೆಚ್ಚವಾಗಲಿರುವ ಒಟ್ಟು ಮೊತ್ತ ರೂ.1,38,480/–ಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ: ತೆಆಸ್ಥಾಸ/283/10–11, ದಿನಾಂಕ: 14/03/2011ರ ನಡವಳಿಯಂತೆ, ಈ ಕಛೇರಿ ಸಮಸಂಖ್ಯೆಯ ದಿನಾಂಕ: 30/03/2011ರ ಕಛೇರಿ ಆದೇಶದಂತೆ ಪಾಲಿಕೆಯ ವತಿಯಿಂದ ಬಡುಗಡೆ ಮಾಡಲು ಅನುಮತಿ ನೀಡಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ವಿಶೇಷ ಕಾರ್ಯಾಚರಣೆ ಪಡೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳಿಗೆ ಸಮವಸ್ತ್ರ ಖರೀದಿಸಲು ತಗಲುವ ವೆಚ್ಚವನ್ನು ಪ್ರಾಧಿಕಾರದ ಆರ್ಥಿಕ ಸದಸ್ಯರ ಶಿಫಾರಸ್ಸಿನಂತೆ ಕಛೇರಿ ಜ್ಞಾಪನಾ ಪತ್ರ ಸಂಖ್ಯೆ: ಬೆಂ.ಅ.ಪ್ರಾ/ಆಯುಕ್ತರು/ಸಿವಿ/1872/03–04, ದಿನಾಂಕ: 01/12/2003ರಂತೆ ಮಂಜೂರಾತಿ ನೀಡಿರುವ ರೀತಿಯಲ್ಲಿಯೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ತಿಗಳನ್ನು ಸಂರಕ್ಷಿಸುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ (ಬಿ.ಎಂ.ಟಿ.ಎಫ್) ಪೊಲೀಸ್ ಠಾಣೆಯ ಪಿ.ಎಸ್.ಐಗಳು, ಮುಖ್ಯ ಪೇದೆಗಳು, ಪೇದೆಗಳು ಮತ್ತು ಚಾಲಕರುಗಳು ಸೇರಿ ಒಟ್ಟು 36 ಮಂದಿಗಳಿಗೆ ತಲಾ ಒಂದು ಜೊತೆ ಸಮವಸ್ತ್ರವನ್ನು 2011ನೇ ಸಾಲಿಗೆ ಒದಗಿಸಲು ನ್ಯೂ ಮಾಡ್ರನ್ ಟೈಲರಿಂಗ್ ಹಾಲ್ ಶ್ರೀರಾಮಪುರ, ಬೆಂಗಳೂರು–21 ರವರು ನೀಡಿರುವ ಮೌಲ್ಯ ಪಟ್ಟಿಯಂತೆ ವೆಚ್ಚವಾಗಲಿರುವ ಒಟ್ಟು ಮೊತ್ತ ರೂ. 1,58,820.00 (ಒಂದು ಲಕ್ಷದ ಐವತ್ತೆಂಟು ಸಾವಿರದ ಎಂಟುನೂರ ಇಪ್ಪತ್ತು ರೂಗಳು ಮಾತ್ರ)ಗಳನ್ನು ಪಾಲಿಕೆ ವತಿಯಿಂದ ಬಿಡುಗಡೆ ಮಾಡಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :  ಆಯುಕ್ತರ ದಿನಾಂಕ : 18/02/2012 ರ ಟಿಪ್ಪಣಿಯನ್ನು ಒಪ್ಪಿದೆ.***

## *24]. ವಿಷಯದ ಸಂಖ್ಯೆ :–ತೆಆಸ್ಥಾಸ/474/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಸಂಖ್ಯೆ:ಎ3(2)/ಪಿಆರ್/51/11–12, ದಿನಾಂಕ : 17–02–2012 ರಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆ ಕೋಡಿಹಳ್ಳಿ ಪ್ರದೇಶ ನಗರ ಪಾಲಿಕೆ ಪೌರ ಕಾರ್ಮಿಕರ ಪ್ರದೇಶದ ವಸತಿ ಸಂಕೀರ್ಣವನ್ನು ಹೊಡೆದು ಹಾಕಲಾಗಿದ್ದು ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಕೋರಮಂಗಲ EWS ವಸತಿ ಸಂಕೀರ್ಣದಲ್ಲಿನ ಖಾಲಿ ನಿವೇಶನ ನೀಡಿಲು ನಗರ ಪಾಲಿಕೆ ನಿರ್ಣಯ ಪುನರ್ ಪರಿಶೀಲಿಸಿ ಬೋರ್‌ಬ್ಯಾಂಕ್ ರಸ್ತೆ, ಹೆರಿಗೆ ಆಸ್ಪತ್ರೆ ಆವರಣ ಮತ್ತು ಬೈಯಪ್ಪನಹಳ್ಳಿ ರಸ್ತೆಯಲ್ಲಿನ ನಗರ ಪಾಲಿಕೆಯ ಜಾಗದಲ್ಲಿ ನಿವೇಶನ ರಚಿಸಿ ಹಂಚಿಕೆ ಮಾಡುವ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ದಿನಾಂಕ:11–01–2005 ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗೆ ಮಂಡಿಸಿರುವ ಆಯುಕ್ತರ ಟಿಪ್ಪಣಿಯಲ್ಲಿ ಆಡಳಿತಾತ್ಮಕ ಕಾರಣಗಳಿಂದ ನಿವೇಶನಗಳನ್ನು ನೀಡುವ ಆಶ್ವಾಸನೆ ಜಾರಿಗೊಳಿಸಲು ಆಗದ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿ ಅನ್ವಯ ಸೂಕ್ತ ನಿರ್ಣಯ ಕೈಗೊಳ್ಳಲು ಮಂಡಿಸಿದ ಟಿಪ್ಪಣಿಯನ್ನು ಒಪ್ಪಲಾಗಿರುತ್ತದೆ. ದಿನಾಂಕ:18–04–2005 ರಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಗಿರುತ್ತದೆ. ದಿನಾಂಕ:27–06–2005 ರಲ್ಲಿ ವಿಷಯ ಸಂಖ್ಯೆ(27) ರಲ್ಲಿ ಪಾಲಿಕೆಯಲ್ಲಿ ಈ ಸಂಬಂಧ ನಿರ್ಣಯವಾಗಿದ್ದು, ನಿರ್ಣಯದ ಸಂಪೂರ್ಣ ಪ್ರತಿ ಕಡತದಲ್ಲಿ ಲಭ್ಯವಿರುವುದಿಲ್ಲ.

ಈ ಹಿಂದೆ ದಿನಾಂಕ:26–10–2004 ರಲ್ಲಿ ಮಹಾನಗರ ಪಾಲಿಕೆಯ ಸಭೆಯ ವಿಷಯ ಸಂಖ್ಯೆ (08) ರಲ್ಲಿ ಈ 149 ಫಲಾನುಭವಿಗಳಿಗೆ ಬಹುಮಹಡಿ ಕಟ್ಟಡ ಕಟ್ಟಿ ಇತರರಿಗೆ ಹಂಚಿಕೆ ಮಾಡುವ ರೀತಿಯಲ್ಲಿ ಇವರಿಗೂ ಹಂಚಿಕೆ ಮಾಡಬಹುದಾಗಿರುತ್ತದೆ ಎಂದು ಮಂಡಿಸಿರುವ ಆಯುಕ್ತರ 29–09–2004ರ ಪೂರಕವಾದ ಟಿಪ್ಪಣಿ ಒಪ್ಪಲು ತೀರ್ಮಾನಿಸಲಾಗಿರುತ್ತದೆ.

ತದನಂತರ ಪತ್ರ ಸಂಖ್ಯೆ:ಎ3(2)ಪಿಆರ್/27/03–04, ದಿನಾಂಕ:24–11–2004 ರಲ್ಲಿ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರಿಗೆ ದಿನಾಂಕ:26–10–2004ರ ನಿರ್ಣಯಕ್ಕೆ ಸರ್ಕಾರದ ಅನುಮೋದನೆಯನ್ನು ಪಡೆಯಲು ಕಳುಹಿಸಲಾಗಿರುತ್ತದೆ. ತದನಂತರ ಸರ್ಕಾರದಿಂದ ಅನುಮೋದನೆಯಾಗಿರುವ ಬಗ್ಗೆ ಯಾವುದೇ ದಾಖಲಾತಿಗಳು ಕಡತದಲ್ಲಿ ಲಭ್ಯವಿರುವುದಿಲ್ಲ.

ಬೆಂಗಳೂರು ನಗರ ಕಾರ್ಪೊರೇಷನ್ ಪೌರ ಕಾರ್ಮಿಕರು ಮತ್ತು ಗ್ಯಾಂಗ್‌ಮೆನ್‌ಗಳ ಸಂಘ ಅನೇಕ ವರ್ಷಗಳಿಂದ ಈ ಸಮಸ್ಯೆ ಹಾಗೆಯೇ ಉಳಿದಿದ್ದು, ನೊಂದ ಪೌರ ಕಾರ್ಮಿಕರಿಗೆ ವಾರ್ಡ್ ನಂ.113 ರಲ್ಲಿ ಕೋನೇನ ಅಗ್ರಹಾರದಲ್ಲಿ ಸರ್ವೆ ನಂ–152, 153 ಮತ್ತು 154 ರಲ್ಲಿ ( ಪುಟ ಸಂಖ್ಯೆ–52 ರಲ್ಲಿರುವ ನಕಾಶೆಯಂತೆ ) ಲಭ್ಯವಿರುವ ಜಾಗದಲ್ಲಿ ಮನೆಗಳ

ಬದಲಾಗಿ ನಿವೇಶನಗಳನ್ನು ಹಂಚಿಕೆ ಮಾಡಲು ಕೋರಿರುತ್ತಾರೆ. ಈ ಕೋರಿಕೆಯನ್ನು ಪರಿಗಣಿಸಲು ಕೆಎಂಸಿ ಕಾಯ್ದೆಯ ಕಲಂ 176 ರಂತೆ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ 129 ಟಿಎಂಡಿ 202, ದಿನಾಂಕ:02–06–2003 ರಲ್ಲಿ ಇರುವ ರಿಯಾಯಿತಿಗಳನ್ನು ನೀಡಿ ಸರ್ಕಾರದ ಮಂಜೂರಾತಿಯನ್ನು ಪಡೆಯಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸೂಕ್ತ ತೀರ್ಮಾನಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ : ಆಯುಕ್ತರ ದಿನಾಂಕ : 17/02/2012 ರ ಟಿಪ್ಪಣಿಯನ್ನು ಒಪ್ಪಿದೆ.*

## *25]. ವಿಷಯದ ಸಂಖ್ಯೆ :–ತೆಆಸ್ಥಾಸ/475/2011–12*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 17–02–2012 ರಲ್ಲಿ ವಿವರಿಸಿರುವಂತೆ, ಮುಖ್ಯ ಅಭಿಯಂತರರು (ರಸ್ತೆಗಳು) Widening & Improvements to Banaswadi Road from Ch:4.00km to 5.00km ಕಾಮಗಾರಿ ಲೆಕ್ಕಶೀರ್ಷಿಕೆ ಪಿ1946 ಅಡಿ ಲಭ್ಯವಿರುವ ಮುಂದುವರೆದ ಕಾಮಗಾರಿಗಳ ಅನುದಾನದಲ್ಲಿ ಮರುಹೊಂದಾಣಿಕೆಗೆ ಅಭಿಪ್ರಾಯ ನೀಡಿರುತ್ತಾರೆ. ಅದರಂತೆ ಲೆಕ್ಕಶಿರ್ಷಿಕೆ ಪಿ1946 ಅಡಿ ಮುಂದುವರೆದ ಕಾಮಗಾರಿಗಳಡಿ ಉಳಿಕೆಯಾಗುವ ರೂ.3606.25 ಲಕ್ಷಗಳಲ್ಲಿ ಸದರಿ ಕಾಮಗಾರಿಗೆ ರೂ.543.46 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ1733ಗೆ ಮರುಹೊಂದಾಣಿಕೆ ಮಾಡಿಕೊಳ್ಳಲು, ಕರ್ನಾಟಕ ಮುನಿಷಿಪಲ್ ಕಾಯಿದೆ 1976 ಸೆಕ್ಷನ್ 172 ರಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ : ವಿಶೇಷ ಆಯುಕ್ತರ ದಿನಾಂಕ : 17/02/2012ರ ಟಿಪ್ಪಣಿ ಒಪ್ಪಿದೆ.*

## *26]. ವಿಷಯದ ಸಂಖ್ಯೆ :–ತೆಆಸ್ಥಾಸ/476/2011–12*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 17–02–2012 ರಲ್ಲಿ ವಿವರಿಸಿರುವಂತೆ, ಮುಖ್ಯ ಅಭಿಯಂತರರು (ರಸ್ತೆಗಳು) Widening & Improvements to Banaswadi Road from Ch:0.00km to 1.00km ಕಾಮಗಾರಿ ಲೆಕ್ಕಶೀರ್ಷಿಕೆ ಪಿ1946 ಅಡಿ ಲಭ್ಯವಿರುವ ಮುಂದುವರೆದ ಕಾಮಗಾರಿಗಳ ಅನುದಾನದಲ್ಲಿ ಮರುಹೊಂದಾಣಿಕೆಗೆ ಅಭಿಪ್ರಾಯ ನೀಡಿರುತ್ತಾರೆ. ಅದರಂತೆ ಲೆಕ್ಕಶಿರ್ಷಿಕೆ ಪಿ1946 ಅಡಿ ಮುಂದುವರೆದ ಕಾಮಗಾರಿಗಳಡಿ ಉಳಿಕೆಯಾಗುವ ರೂ.2899.61 ಲಕ್ಷಗಳಲ್ಲಿ ಸದರಿ ಕಾಮಗಾರಿಗೆ ರೂ.502.08 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ1733ಗೆ ಮರುಹೊಂದಾಣಿಕೆ ಮಾಡಿಕೊಳ್ಳಲು, ಕರ್ನಾಟಕ ಮುನಿಷಿಪಲ್ ಕಾಯಿದೆ 1976 ಸೆಕ್ಷನ್ 172 ರಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ : ವಿಶೇಷ ಆಯುಕ್ತರ ದಿನಾಂಕ : 17/02/2012ರ ಟಿಪ್ಪಣಿಯನ್ನು ಒಪ್ಪಿದೆ.*

## *27]. ವಿಷಯದ ಸಂಖ್ಯೆ :–ತೆಆಸ್ಥಾಸ/477/2011–12*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 17–02–2012 ರಲ್ಲಿ ವಿವರಿಸಿರುವಂತೆ, ಮುಖ್ಯ ಅಭಿಯಂತರರು (ರಸ್ತೆಗಳು) Widening & Improvements to Banaswadi Road from Ch:5.00km to 6.00km ಕಾಮಗಾರಿ ಲೆಕ್ಕಶೀರ್ಷಿಕೆ ಪಿ1946 ಅಡಿ ಲಭ್ಯವಿರುವ ಮುಂದುವರೆದ ಕಾಮಗಾರಿಗಳ ಅನುದಾನದಲ್ಲಿ ಮರುಹೊಂದಾಣಿಕೆಗೆ ಅಭಿಪ್ರಾಯ ನೀಡಿರುತ್ತಾರೆ. ಅದರಂತೆ ಲೆಕ್ಕಶಿರ್ಷಿಕೆ ಪಿ1946 ಅಡಿ ಮುಂದುವರೆದ ಕಾಮಗಾರಿಗಳಡಿ ಉಳಿಕೆಯಾಗುವ ರೂ.4571.71 ಲಕ್ಷಗಳಲ್ಲಿ ಸದರಿ ಕಾಮಗಾರಿಗೆ ರೂ.521.48 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ1733ಗೆ ಮರುಹೊಂದಾಣಿಕೆ ಮಾಡಿಕೊಳ್ಳಲು, ಕರ್ನಾಟಕ ಮುನಿಷಿಪಲ್ ಕಾಯಿದೆ 1976 ಸೆಕ್ಷನ್ 172 ರಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ : ವಿಶೇಷ ಆಯುಕ್ತರ ದಿನಾಂಕ : 17/02/2012ರ ಟಿಪ್ಪಣಿ ಒಪ್ಪಿದೆ.*

## *28]. ವಿಷಯದ ಸಂಖ್ಯೆ :–ತೆಆಸ್ಥಾಸ/478/2011–12*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 17–02–2012 ರಲ್ಲಿ ವಿವರಿಸಿರುವಂತೆ, ಮುಖ್ಯ ಅಭಿಯಂತರರು (ರಸ್ತೆಗಳು) Widening & Improvements to Banaswadi Road from Ch:1.00km to 2.00km ಕಾಮಗಾರಿ ಲೆಕ್ಕಶೀರ್ಷಿಕೆ ಪಿ1946 ಅಡಿ ಲಭ್ಯವಿರುವ ಮುಂದುವರೆದ ಕಾಮಗಾರಿಗಳ ಅನುದಾನದಲ್ಲಿ ಮರುಹೊಂದಾಣಿಕೆಗೆ ಅಭಿಪ್ರಾಯ ನೀಡಿರುತ್ತಾರೆ. ಅದರಂತೆ ಲೆಕ್ಕಶಿರ್ಷಿಕೆ ಪಿ1946 ಅಡಿ ಮುಂದುವರೆದ ಕಾಮಗಾರಿಗಳಡಿ ಉಳಿಕೆಯಾಗುವ ರೂ.4050.23 ಲಕ್ಷಗಳಲ್ಲಿ ಸದರಿ ಕಾಮಗಾರಿಗೆ ರೂ.446.98 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ1733ಗೆ ಮರುಹೊಂದಾಣಿಕೆ ಮಾಡಿಕೊಳ್ಳಲು, ಕರ್ನಾಟಕ ಮುನಿಷಿಪಲ್ ಕಾಯಿದೆ 1976 ಸೆಕ್ಷನ್ 172 ರಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ : ವಿಶೇಷ ಆಯುಕ್ತರ ದಿನಾಂಕ : 17/02/2012ರ ಟಿಪ್ಪಣಿಯನ್ನು ಒಪ್ಪಿದೆ.*

## *29]. ವಿಷಯದ ಸಂಖ್ಯೆ :–ತೆಆಸ್ಥಾಸ/479/2011–12*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ: 17–02–2012 ರಲ್ಲಿ ವಿವರಿಸಿರುವಂತೆ, ಮುಖ್ಯ ಅಭಿಯಂತರರು (ರಸ್ತೆಗಳು) Widening & Improvements to Banaswadi Road from Ch:6.00km to 7.00km ಕಾಮಗಾರಿ ಲೆಕ್ಕಶೀರ್ಷಿಕೆ ಪಿ1946 ಅಡಿ ಲಭ್ಯವಿರುವ ಮುಂದುವರೆದ ಕಾಮಗಾರಿಗಳ ಅನುದಾನದಲ್ಲಿ ಮರುಹೊಂದಾಣಿಕೆಗೆ ಅಭಿಪ್ರಾಯ ನೀಡಿರುತ್ತಾರೆ. ಅದರಂತೆ ಲೆಕ್ಕಶಿರ್ಷಿಕೆ ಪಿ1946 ಅಡಿ ಮುಂದುವರೆದ ಕಾಮಗಾರಿಗಳಡಿ ಉಳಿಕೆಯಾಗುವ ರೂ.3059.79 ಲಕ್ಷಗಳಲ್ಲಿ ಸದರಿ ಕಾಮಗಾರಿಗೆ ರೂ.160.18 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ1733ಗೆ ಮರುಹೊಂದಾಣಿಕೆ ಮಾಡಿಕೊಳ್ಳಲು, ಕರ್ನಾಟಕ ಮುನಿಷಿಪಲ್ ಕಾಯಿದೆ 1976 ಸೆಕ್ಷನ್ 172 ರಪ್ರಕಾರ ಮರುಹೊಂದಾಣಿಕೆ (Re-appropriation) ಪ್ರಸ್ಥಾವನೆಯನ್ನು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ : ವಿಶೇಷ ಆಯುಕ್ತರ ದಿನಾಂಕ : 17/02/2012 ನ್ನು ಒಪ್ಪಿದೆ.*

## 30]. ವಿಷಯದ ಸಂಖ್ಯೆ :–ತೆಆಸ್ಥಾಸ/480/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ : ಸಂ:ಜಆ(ಜಾ)ಪಿಆರ್/482/11–12, ದಿನಾಂಕ: 21–02–2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳವರ ಅಧ್ಯಕ್ಷತೆಯಲ್ಲಿ ದಿನಾಂಕ:25.08.2008ರಂದು ನಡೆದ ಸಭೆಯ ನಡವಳಿಯ ರೀತ್ಯಾ, ಒಂದು ಸಮಗ್ರ ಜಾಹೀರಾತು ನೀತಿಯನ್ನು ತಯಾರಿಸಲು ಸೂಚಿಸಿದ್ದು, ಅದರಂತೆ ದಿನಾಂಕ:23.12.2010ರಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಹಾಲಿ ಜಾರಿಯಲ್ಲಿರುವ ಜಾಹೀರಾತು ಬೈಲಾ–2006ಕ್ಕೆ ಕೆಲವು ತಿದ್ದುಪಡಿಗಳ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು.

ಮುಂದುವರೆದಂತೆ, ಜಾಹೀರಾತು ಬೈಲಾ–2006ಕ್ಕೆ ಕೆಲವು ತಿದ್ದುಪಡಿಗಳನ್ನು ತರುವ ಸಂಬಂಧ ದಿನಾಂಕ : 29.12.2010ರಂದು ಪಾಲಿಕೆ ಸಭೆಯಲ್ಲಿ ವಿಷಯ ಸಂಖ್ಯೆ:12(145)/2010–11ರಲ್ಲಿ ವಿವರಿಸಿರುವಂತೆ 2010–11ನೇ ಸಾಲಿಗೆ ಹಾಲಿ ಜಾರಿಯಲ್ಲಿರುವ ಖಾಸಗಿ ಸ್ವತ್ತುಗಳ ಮೇಲಿರುವ ಜಾಹೀರಾತು ಫಲಕಗಳನ್ನು ನವೀಕರಿಸುವ ಸಂಬಂಧ ಸಂಬಂಧಪಟ್ಟ ಏಜೆನ್ಸಿದಾರರಿಂದ, ಮುಚ್ಚಳಿಕೆ ಪತ್ರ ಪಡೆದು, ಘನ ಉಚ್ಛ ನ್ಯಾಯಾಲಯದ ಡಬ್ಲ್ಯೂ.ಪಿ.34737–34747/2010 ದಿನಾಂಕ:15.10.2010ರ ಆದೇಶದಂತೆ ನವೀಕರಿಸಲು ತೀರ್ಮಾನಿಸಿರುತ್ತದೆ. ತದ ನಂತರ ದಿನಾಂಕ:01.02.2011ರಂದು ನಡೆದ ಪಾಲಿಕೆ ಸಭೆಯಲ್ಲಿ ವಿಷಯ ಸಂಖ್ಯೆ:15(210)10–11ರಲ್ಲಿ ವಿವರಿಸಿರುವಂತೆ ಜಾಹೀರಾತು ಬೈಲಾ–2006ಕ್ಕೆ ಕೆಲವು ತಿದ್ದುಪಡಿ ಮಾಡುವ ಸಂಬಂಧ ವಿಷಯ ಮಂಡಿಸಿದ್ದು, ಈ ವಿಷಯವನ್ನು ಮುಂದೂಡಲಾಗಿದ್ದು, ಪುನಃ ದಿನಾಂಕ:24.02.2011ರಂದು ಪಾಲಿಕೆ ಸಭೆಯಲ್ಲಿ ವಿಷಯ ಸಂಖ್ಯೆ:3(210)10–11ರಲ್ಲಿ ವಿವರಿಸಿರುವಂತೆ ವಿಷಯವನ್ನು ಮಂಡಿಸಿದ್ದು, ನಿರ್ಣಯವನ್ನು ಮುಂದೂಡಲಾಗಿದ್ದು ಪುನಃ ದಿನಾಂಕ:18.03.2011ರಂದು ಪಾಲಿಕೆ ಸಭೆಯಲ್ಲಿ ವಿಷಯ ಸಂಖ್ಯೆ:3(210)10–11 ದಿನಾಂಕ:10.11.2010ರಂತೆ ವಿಷಯವನ್ನು ಮಂಡಿಸಿದ್ದು ನಿರ್ಣಯದಲ್ಲಿ ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಜಾಹೀರಾತು ಬೈಲಾ–2006ಕ್ಕೆ ತಿದ್ದುಪಡಿ ಮಾಡಲು ಸಮಿತಿಯನ್ನು ರಚಿಸಿರುವುದರಿಂದ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸದರಿ ವಿಷಯವನ್ನು ಕೈ ಬಿಡುವಂತೆ ಪಾಲಿಕೆಯ ಸಭೆಯು ತೀರ್ಮಾನಿಸಿರುತ್ತದೆ.

ಹಾಲಿ ಜಾಹೀರಾತು ಬೈಲಾ–2006ರಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಪಾಲಿಕೆಯ ಆದಾಯದ ದೃಷ್ಟಿಯಿಂದ ಎಲ್ಲಾ ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತುಗಳನ್ನು ದಿನಾಂಕ:01.07.2011ರಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಜಾಹೀರಾತು ಹಕ್ಕುಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಲು ನಿಶ್ಚಯಿಸಿದ್ದು, ಅದಕ್ಕೆ ಅನುಗುಣವಾಗಿ ಜಾಹೀರಾತು ಬೈಲಾ–2006ಕ್ಕೆ ತಿದ್ದುಪಡಿ ಮಾಡಿ ಹೊಸ ಜಾಹೀರಾತು ನೀತಿಯನ್ನು ಜಾರಿಗೆ ತರಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಮುಂದೆ ನಿರ್ಣಯಕ್ಕಾಗಿ ಟಿಪ್ಪಣಿ ಮಂಡಿಸಿದೆ.

ದಿನಾಂಕ:27.06.2011ರಂದು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ನಿರ್ಣಯವನ್ನು ಒಪ್ಪಿದ್ದು, ಸದರಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಬಂದಿದ್ದು, ದಿನಾಂಕ:27.06.2011ರಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಸದರಿ ಪ್ರಸ್ತಾವನೆಯನ್ನು ಒಪ್ಪಿ ನಿರ್ಣಯಿಸಿದ್ದು, ನಂತರ ಈ ಪ್ರಸ್ತಾವನೆಯನ್ನು ದಿನಾಂಕ:28.06.2011ರಂದು ನಡೆದ ಪಾಲಿಕೆ ಸಭೆಯಲ್ಲಿ ವಿಷಯ ಸಂಖ್ಯೆ:06(73)2011–12ರಲ್ಲಿ ವಿವರಿಸಿರುವಂತೆ ನಿರ್ಣಯಕ್ಕಾಗಿ ಮಂಡಿಸಿದ್ದು, ಈ ಎರಡು ಸ್ಥಾಯಿ ಸಮಿತಿಗಳ ನಿರ್ಣಯಗಳನ್ನು ಒಪ್ಪಿರುತ್ತದೆ.

ಸದರಿ ನಿರ್ಣಯಗಳಂತೆ ಬೈಲಾ –2006ರ ತಿದ್ದುಪಡಿ ಪ್ರಸ್ತಾವನೆಯನ್ನು ತಯಾರಿಸಿ ಸರ್ಕಾರದ ಅನುಮೋದನೆಗೆ ದಿನಾಂಕ:16.08.2011ರಂದು ಸಲ್ಲಿಸಿದ್ದು, ಸರ್ಕಾರದ ಪತ್ರ ಸಂಖ್ಯೆ:ನ.ಅ.ಇ/362/ಎಂಎನ್‌ಯು 2011 ದಿನಾಂಕ:04.01.2012ರ ಪತ್ರದಲ್ಲಿ 9 ಆಕ್ಷೇಪಣೆಗಳನ್ನು ಮಾಡಿರುವ ಮೇರೆಗೆ ಪಾಲಿಕೆಯಿಂದ ಸದರಿ ಆಕ್ಷೇಪಣೆಗಳಿಗೆ ದಿನಾಂಕ:13.01.2012ರಂದು ಉತ್ತರವನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಈ ಬಗ್ಗೆ ದಿನಾಂಕ:27.01.2012ರಂದು ಸರ್ಕಾರದ ಹಂತದಲ್ಲಿ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಆಯುಕ್ತರೊಂದಿಗೆ ಸಭೆಯನ್ನು ನಡೆಸಲಾಗಿದ್ದು, ಸದರಿ ಸಭೆಯಲ್ಲಿ ಖಾಸಗಿ ಸ್ವತ್ತುಗಳ ಮೇಲಿನ ಜಾಹೀರಾತು ಫಲಕಗಳ ಅಳವಡಿಕೆಗೆ ಹರಾಜು ಮಾಡುವುದನ್ನು ಆಕ್ಷೇಪ ವ್ಯಕ್ತಪಡಿಸಿದ್ದು, ಖಾಸಗಿಯವರ ಸ್ವತ್ತುಗಳ ಮೇಲಿನ ಹಕ್ಕುಗಳನ್ನು ಸರ್ಕಾರವು ಹರಾಜು ಮೂಲಕ ವಿಲೇ ಮಾಡುವುದು, ಹರಾಜು ಮಾಡುವುದು ಸಂವಿಧಾನ ಬಾಹಿರವೆಂದು, ಯಾವುದೇ ನ್ಯಾಯಾಲಯವು ಸಹ ಈ ಪ್ರಸ್ತಾವನೆಯನ್ನು ಪುರಸ್ಕರಿಸುವುದಿಲ್ಲವೆಂದು, ಆದಾಗ್ಯೂ ಈ ಬಗ್ಗೆ ಕಾನೂನು ಇಲಾಖೆಯ ಹಾಗೂ ಮುಖ್ಯಮಂತ್ರಿಗಳ ಆದೇಶ ಪಡೆದು ಸರ್ಕಾರದ ತೀರ್ಮಾನವನ್ನು ತಿಳಿಸುವುದಾಗಿ, ಮುಖ್ಯವಾಗಿ ಪಾಲಿಕೆಯ ಉದ್ದೇಶವು ಅನಧಿಕೃತ ಜಾಹೀರಾತುಗಳನ್ನು ನಿರ್ಬಂಧಿಸಿ ನಿಯಂತ್ರಿಸುವುದರ ಜೊತೆಗೆ ಆದಾಯವನ್ನು ಹೆಚ್ಚಿಸುವ ಉದ್ದೇಶವಿದ್ದಲ್ಲಿ ಹಾಲಿ ಜಾಹೀರಾತು ಬೈಲಾ–2006ಕ್ಕೆ ಜಾಹೀರಾತು ಶುಲ್ಕವನ್ನು ಹೆಚ್ಚಿಸುವ ಪ್ರಸ್ತಾವನೆಯೊಂದಿಗೆ ತಿದ್ದುಪಡಿಗಳನ್ನು ಹೊಸದಾಗಿ ಸರ್ಕಾರಕ್ಕೆ ಸಲ್ಲಿಸಲು ಪಾಲಿಕೆಗೆ ಮೌಖಿಕವಾಗಿ ಸೂಚಿಸಿದೆ.

ಈ ಹಿನ್ನೆಲೆಯಲ್ಲಿ ಜಾಹೀರಾತು ವಿಭಾಗದಿಂದ ಹೆಚ್ಚುವರಿ ಆದಾಯವನ್ನು ಕ್ರೋಢೀಕರಿಸಿಕೊಳ್ಳಲು ಹಾಗೂ ಅನಧಿಕೃತ ಜಾಹೀರಾತು ಫಲಕಗಳನ್ನು ಸಮಗ್ರವಾಗಿ ನಿರ್ಬಂಧಿಸಲು ಮತ್ತು ಹೊಸ ಜಾಹೀರಾತುಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಪ್ರಸ್ತಾವನೆಯ ಬಗ್ಗೆ ನಿರ್ಣಯಕ್ಕಾಗಿ ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿದೆ.

**ಹಾಲಿ ಇರುವ ಜಾಹೀರಾತು ಬೈಲಾ–2006ಕ್ಕೆ ಪ್ರಸ್ತಾಪಿಸಿರುವ ತಿದ್ದುಪಡಿಗಳು**
**(ಈ ತಿದ್ದುಪಡಿಗಳನ್ನು ತಿದ್ದುಪಡಿ 2012 ಎಂದು ಹೆಸರಿಸುವುದು)**

1. ಹಾಲಿ ಜಾಹೀರಾತು ಬೈಲಾ–2006ರಂತೆ ಇದ್ದಂತಹ ಜಾಹೀರಾತು ತೆರಿಗೆ ದರಗಳನ್ನು ದಿನಾಂಕ:30.09.2009ರ ಆಡಳಿತಗಾರರ ನಡವಳಿಯಂತೆ ಶೇಕಡಾ 50% ರಷ್ಟು ಹೆಚ್ಚಿಸಿದ್ದು, ಸರ್ಕಾರವು ಈ ಬಗ್ಗೆ ದಿನಾಂಕ:13.7.2011 ರಂತೆ ಅನುಮೋದನೆ ನೀಡಿದೆ. ಸದರಿ ತೆರಿಗೆ ದರ ಈ ಕೆಳಕಂಡಂತಿವೆ.

| ಜಾಹೀರಾತು ಬೈಲಾ–2006ರ ಜಾಹೀರಾತಿನ ಮಾದರಿ | | ಹಾಲಿ ಇರುವ ದರಗಳು (ಮಾಸಿಕ ಒಂದು ಚ.ಮೀ.ಗೆ) | |
|---|---|---|---|
| ಪ್ರಕಾಶವಿರುವ | ರೂ.86.25 (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ಪ್ರಕಾಶವಿರುವ | ರೂ.129 |
| ಪ್ರಕಾಶವಿಲ್ಲದಿರುವ | ರೂ.57.70 (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ಪ್ರಕಾಶವಿಲ್ಲದಿರುವ | ರೂ.86.25 |
| ನಿಯಾನ್ | ರೂ.115 (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ನಿಯಾನ್ | ರೂ.172.50 |
| ಟ್ರೈವಿಜನ್ | ರೂ.172.50 (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ಟ್ರೈವಿಜನ್ | ರೂ.258.75 |
| ಎಲೆಕ್ಟ್ರಾನಿಕ್ಸ್ | ರೂ.172.50 (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ಎಲೆಕ್ಟ್ರಾನಿಕ್ಸ್ | ರೂ.258.75 |
| ಜೂಜು(ರೇಸ್) ಕುದುರೆ | ರೂ.100 (ಪ್ರತಿ ಕುದುರೆ ಮತ್ತು ಪ್ರತಿ ಆಟಕ್ಕೆ) | ಜೂಜು (ರೇಸ್) ಕುದುರೆ | ರೂ.150 |
| ಬ್ಯಾನರ್‌ಗಳು | ರೂ.20 (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ಬ್ಯಾನರ್‌ಗಳು | ರೂ.30 |
| ಬಂಟಿಂಗ್ಸ್ | ರೂ.10 (ಪ್ರತಿ ಕಿಲೋಗ್ರಾಂಗೆ) | ಬಂಟಿಂಗ್ಸ್ | ರೂ.15 |

2. ಪಾಲಿಕೆಯ ಆದಾಯದ ದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ, ಪಶ್ಚಿಮ, ದಕ್ಷಿಣ ವಲಯಗಳಲ್ಲಿ ಮತ್ತು ಯಲಹಂಕ ವಲಯದ ಹೆಬ್ಬಾಳದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಯಲಹಂಕ ಮತ್ತು ವೆಂಕಟಾಲ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿವರೆವಿಗೂ ಜಾಹೀರಾತು ತೆರಿಗೆಯನ್ನು ಹಾಲಿ ಇರುವ ದರಗಳಿಗಿಂತ ಸುಮಾರು ಎರಡು ಪಟ್ಟು (1+2) ತೆರಿಗೆಯನ್ನು ಹೆಚ್ಚು ವಿಧಿಸುವುದು.

**ಹೆಚ್ಚುವರಿ ದರಗಳು ಈ ಕೆಳಕಂಡಂತೆ ಇರುತ್ತದೆ**

| ಜಾಹೀರಾತಿನ ಮಾದರಿ | | ಹಾಲಿ ದರಗಳು | ಜಾಹೀರಾತಿನ ಮಾದರಿ | ಪ್ರಸ್ತಾಪಿಸಿರುವ ಹೆಚ್ಚುವರಿ ದರಗಳು (ಮಾಸಿಕ ಒಂದು ಚ.ಮೀ.ಗೆ) |
|---|---|---|---|---|
| ಪ್ರಕಾಶವಿರುವ | ಪ್ರಕಾಶವಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.129 | ಪ್ರಕಾಶವಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.390 |
| ಪ್ರಕಾಶವಿಲ್ಲದಿರುವ | ಪ್ರಕಾಶವಿಲ್ಲದಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.86.25 | ಪ್ರಕಾಶವಿಲ್ಲದಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.260 |
| ನಿಯಾನ್ | ನಿಯಾನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.172.50 | ನಿಯಾನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.520 |
| ಟ್ರೈವಿಜನ್ | ಟ್ರೈವಿಜನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.258.75 | ಟ್ರೈವಿಜನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.800 |
| ಎಲೆಕ್ಟ್ರಾನಿಕ್ಸ್ | ಎಲೆಕ್ಟ್ರಾನಿಕ್ಸ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.258.75 | ಎಲೆಕ್ಟ್ರಾನಿಕ್ಸ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.800 |
| ಜೂಜು (ರೇಸ್) ಕುದುರೆ | ಜೂಜು (ರೇಸ್) ಕುದುರೆ (ಪ್ರತಿ ಕುದುರೆ ಮತ್ತು ಪ್ರತಿ ಆಟಕ್ಕೆ) | ರೂ.150 | ಜೂಜು (ರೇಸ್) ಕುದುರೆ (ಪ್ರತಿ ಕುದುರೆ ಮತ್ತು ಪ್ರತಿ ಆಟಕ್ಕೆ) | ರೂ.500 |

| | | | | |
|---|---|---|---|---|
| ಬಟ್ಟೆ ಬ್ಯಾನರ್ | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.30 | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.90 |
| ಫ್ಲೆಕ್ಸ್ ಬ್ಯಾನರ್ | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.86.25 | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.150 |
| ಬಂಟಿಂಗ್ಸ್ | ಬಂಟಿಂಗ್ಸ್ (ಪ್ರತಿ ಕಿಲೋಗ್ರಾಂಗೆ) | ರೂ.15 | ಬಂಟಿಂಗ್ಸ್ (ಪ್ರತಿ ಕಿಲೋಗ್ರಾಂಗೆ) | ರೂ.100 |

3. ಮುಂದುವರೆದಂತೆ ಉಳಿಕೆ ಐದು ವಲಯ ಎಂದರೆ ಅ) ಬೊಮ್ಮನಹಳ್ಳಿ ವಲಯ ಆ) ರಾಜರಾಜೇಶ್ವರಿನಗರ ವಲಯ ಇ) ದಾಸರಹಳ್ಳಿ ವಲಯ ಈ) ಯಲಹಂಕ ವಲಯ (ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ ಹೊರತುಪಡಿಸಿ) ಉ) ಮಹದೇವಪುರ ವಲಯಗಳಲ್ಲಿ ಹಾಲಿ ಇರುವ ದರಗಳಿಗಿಂತ ಅಂದರೆ ಸುಮಾರು ಒಂದು ಪಟ್ಟು ಹೆಚ್ಚುವರಿ (1+1) ಜಾಹೀರಾತು ತೆರಿಗೆಯನ್ನು ಹೆಚ್ಚಿಸುವುದು.

<u>ಹೆಚ್ಚುವರಿ ದರಗಳು ಈ ಕೆಳಕಂಡಂತೆ ಇರುತ್ತದೆ</u>

| **ಜಾಹೀರಾತಿನ ಮಾದರಿ** | | **ಹಾಲಿ ದರಗಳು (ಮಾಸಿಕ ಒಂದು ಚ.ಮೀ.ಗೆ)** | **ಜಾಹೀರಾತಿನ ಮಾದರಿ** | **ಪ್ರಸ್ತಾಪಿಸಿರುವ ಹೆಚ್ಚುವರಿ ದರಗಳು (ಮಾಸಿಕ ಒಂದು ಚ.ಮೀ.ಗೆ)** |
|---|---|---|---|---|
| ಪ್ರಕಾಶವಿರುವ | ಪ್ರಕಾಶವಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.129 | ಪ್ರಕಾಶವಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.260 |
| ಪ್ರಕಾಶವಿಲ್ಲದಿರುವ | ಪ್ರಕಾಶವಿಲ್ಲದಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.86.25 | ಪ್ರಕಾಶವಿಲ್ಲದಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.180 |
| ನಿಯಾನ್ | ನಿಯಾನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.172.50 | ನಿಯಾನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.350 |
| ಟ್ರೈವಿಜನ್ | ಟ್ರೈವಿಜನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.258.75 | ಟ್ರೈವಿಜನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.520 |
| ಎಲೆಕ್ಟ್ರಾನಿಕ್ಸ್ | ಎಲೆಕ್ಟ್ರಾನಿಕ್ಸ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.258.75 | ಎಲೆಕ್ಟ್ರಾನಿಕ್ಸ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.520 |
| ಜೂಜು (ರೇಸ್) ಕುದುರೆ | ಜೂಜು (ರೇಸ್) ಕುದುರೆ (ಪ್ರತಿ ಕುದುರೆ ಮತ್ತು ಪ್ರತಿ ಆಟಕ್ಕೆ) | ರೂ.150 | ಜೂಜು (ರೇಸ್) ಕುದುರೆ (ಪ್ರತಿ ಕುದುರೆ ಮತ್ತು ಪ್ರತಿ ಆಟಕ್ಕೆ) | ರೂ.500 |
| ಬಟ್ಟೆ ಬ್ಯಾನರ್‌ಗಳು | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.30 | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.90 |
| ಫ್ಲೆಕ್ಸ್ ಬ್ಯಾನರ್ | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.86.25 | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.150 |
| ಬಂಟಿಂಗ್ಸ್ | ಬಂಟಿಂಗ್ಸ್ (ಪ್ರತಿ ಕಿಲೋಗ್ರಾಂಗೆ) | ರೂ.15 | ಬಂಟಿಂಗ್ಸ್ (ಪ್ರತಿ ಕಿಲೋಗ್ರಾಂಗೆ) | ರೂ.100 |

## ಭಾಗ VI

**ಸೇರ್ಪಡೆ:–**

**8.ಇತರೆ ಕ್ರಮ ವಿಧಾನಗಳು:**

(1) ದಾಸರಹಳ್ಳಿ ವಲಯದಲ್ಲಿ ಇಲ್ಲಿಯವರೆವಿಗೂ ಯಾವುದೇ ರೀತಿಯ ಜಾಹೀರಾತು ಫಲಕಗಳಿಗೆ ಅನುಮತಿ ನೀಡದೇ ಇರುವುದರಿಂದ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಮತ್ತು ಅನಧಿಕೃತ ಜಾಹೀರಾತು ಫಲಕಗಳನ್ನು ತಡೆಗಟ್ಟುವ ದೃಷ್ಟಿಯಿಂದ ಹೊಸದಾಗಿ ಖಾಸಗಿ ಸ್ವತ್ತುಗಳಲ್ಲಿ ಸ್ವ–ಜಾಹೀರಾತು/ವಾಣಿಜ್ಯ ಜಾಹೀರಾತು ಮತ್ತು ಇತರೆ ಸರ್ಕಾರಿ ಇಲಾಖೆಗಳ ಮೇಲೆ ಜಾಹೀರಾತು ಫಲಕಗಳನ್ನು ಅಳವಡಿಸಲು ಅನುಮತಿ ನೀಡಲು ಕ್ರಮ ವಹಿಸುವುದು.

(2) ಭೂ ಸ್ವಾಧೀನ, ಮೆಟ್ರೊ ಕಾಮಗಾರಿ, ರಸ್ತೆ ಅಗಲೀಕರಣ, ಕಟ್ಟಡದ ಮಾಲೀಕರಿಂದ ಆಕ್ಷೇಪಣೆ, ಮುಂತಾದ ಅನಿವಾರ್ಯ ಕಾರಣಗಳಿಂದ ಅಳವಡಿಸಲಾಗಿರುವ ಫಲಕಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಹಿಸಿಕೊಳ್ಳಲು ಅಂದರೆ ಅದೇ ವಲಯಗಳಲ್ಲಿ ಮಾತ್ರ ವರ್ಗಾಹಿಸಿಕೊಳ್ಳಬಹುದಾಗಿದ್ದು, ವರ್ಗಾಹಿಸುವ ಪ್ರತಿ ಫಲಕಕ್ಕೆ ವರ್ಗಾವಣೆ ಶುಲ್ಕ ರೂ.1,00,000/–(ರೂ. ಒಂದು ಲಕ್ಷ ಮಾತ್ರ) ವಿಧಿಸಿ ಅನುಮತಿ ನೀಡತಕ್ಕದ್ದು.

(3) ಪಾಲಿಕೆಯಲ್ಲಿ ನೊಂದಾಯಿಸಿರುವ ಜಾಹೀರಾತು ಫಲಕ ಒಂದು ಜಾಹೀರಾತು ಸಂಸ್ಥೆಯಿಂದ ಮತ್ತೊಂದು ಜಾಹೀರಾತು ಸಂಸ್ಥೆಗೆ ವರ್ಗಾವಣೆ ಹೊಂದಲು ಆಸಕ್ತಿ ವ್ಯಕ್ತಪಡಿಸಿದಲ್ಲಿ ಅಂತಹ ಪ್ರತಿ ಪ್ರಕರಣದಲ್ಲಿ ವರ್ಗಾವಣೆ ಹೊಂದುವ ಪ್ರತಿ ಫಲಕಕ್ಕೆ ವರ್ಗಾವಣೆ ಶುಲ್ಕವೆಂದು ರೂ.1,00,000/–(ಒಂದು ಲಕ್ಷ ರೂಗಳು ಮಾತ್ರ) ವಿಧಿಸಿ ಅನುಮತಿ ನೀಡುವುದು.

(4) ಖಾಸಗಿ ಜಾಹೀರಾತು ಏಜೆನ್ಸಿದಾರರು ಈಗಾಗಲೇ ಸಿಟಿ ಸಿವಿಲ್ ಹಾಗೂ ಘನ ಉಚ್ಛ ನ್ಯಾಯಾಲಯಗಳಲ್ಲಿ ಕೆ.ಎಂ.ಸಿ. ಕಾಯ್ದೆ ಕಲಂ 443 (10) ರ ಅನ್ವಯ (Deemed permission) ಪಡೆಯಲು ದಾವೆ ಹೂಡಿರುವ ಪ್ರಕರಣಗಳಲ್ಲಿ ಪ್ರತಿ ಫಲಕಕ್ಕೆ ದಂಡ ರೂಪವಾಗಿ ರೂ.1,00,000/–(ಒಂದು ಲಕ್ಷ ರೂ ಮಾತ್ರ) ವಿಧಿಸಿ ಹಾಗೂ ಯಾವ ದಿನಾಂಕದಿಂದ ನ್ಯಾಯಾಲಯಗಳಲ್ಲಿ ದಾವೆ ಅಥವಾ ರಿಟ್ ಅರ್ಜಿ ಸಲ್ಲಿಸಿರುತ್ತಾರೆಯೋ ಆ ದಿನಾಂಕದಿಂದ ಆಯಾ ಕಾಲಕ್ಕೆ ಜಾರಿಯಲ್ಲಿರುವ ಜಾಹೀರಾತು ತೆರಿಗೆ ವಿಧಿಸಿ ನಿಯಾಮಾನುಸಾರ ದಾಖಲೆಗಳನ್ನು ಪಡೆದು ಸಕ್ರಮಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು. (ಈ ಸಕ್ರಮ ಒಂದು ಬಾರಿಗೆ ಮಾತ್ರ ಅನುಮತಿ ನೀಡುವುದು)

***<u>ಸೇರ್ಪಡೆ:–</u>***

**ವಲಯಗಳ ಪಟ್ಟಿ**

**ವಲಯ:ಎ**

**ಜಾಹೀರಾತು ನಿಷಿದ್ದ ಪ್ರದೇಶ:(ಸರ್ಕಾರದ ಕಾರ್ಯಕ್ರಮಗಳ ಜಾಹೀರಾತು ಹೊರತುಪಡಿಸಿ)**

11. ಚಾಲುಕ್ಯ ವೃತ್ತದಿಂದ ಬಸವೇಶ್ವರ ವೃತ್ತ, ಹಳೇ ಹೈಗ್ರೌಂಡ್ಸ್ ಪೋಲಿಸ್ ವೃತ್ತ ಬಾಲಬ್ರೂಹಿ ಅಥಿತಿ ಗೃಹ ಮತ್ತು ಗಾಲ್ಫ್ ಕ್ಲಬ್ ಮೂಲಕ ಸಂಚರಿಸುವ ರಸ್ತೆ ವಿಂಡ್ಸರ್ ಮ್ಯಾನರ್ ಜಂಕ್ಷನ್‌ವರೆಗೆ

## ಭಾಗ I

**ಸಾಮಾನ್ಯ**

1) **<u>2.ಎ(21) ಕೈ ಬಿಡತಕ್ಕದ್ದು:</u>**

**ಗ್ಯಾಂಟ್ರಿ ಜಾಹೀರಾತು:** ಅಂದರೆ ಲೋಹದಿಂದ ತಯಾರಿಸಿದ ಮತ್ತು ಮೇಲ್ಭಾಗವನ್ನು ತೊಲೆಯಿಂದ ಜೋಡಿಸಲ್ಪಟ್ಟ ರಸ್ತೆಯ ಎರಡೂ ಬದಿಗಳಲ್ಲಿರುವ ಕಂಬಗಳ ಮೇಲೆ ಅಳವಡಿಸಿರುವ ಗ್ಯಾಂಟ್ರಿಗಳ ಮೇಲೆ ಸಂಚಾರ ವಿರುದ್ಧ ದಿಕ್ಕಿನಲ್ಲಿರುವ ರಸ್ತೆಯ ಮೇಲೆ ಪ್ರದರ್ಶಿಸುವ ಜಾಹೀರಾತುಗಳು.

**(ವಾಹನ ಚಾಲಕರನ್ನು ದಿಕ್ಕುತಪ್ಪಿಸುವ ಹಾಗೂ ಅಪಘಾತಗಳು ಸಂಭವಿಸುವ ಕಾರಣ)**

2) **<u>3ಎ(7) ತಿದ್ದುಪಡಿ:</u>**

ಯಾವುದೇ ಅನಧಿಕೃತ ಜಾಹೀರಾತಿಗೆ ನಿರ್ದಿಷ್ಟ ಪಡಿಸಿದ ಪ್ರಮಾಣದಲ್ಲಿ ದಂಡ ವಿಧಿಸಲು ಕಾರಣವಾಗುತ್ತದೆ. ಎಲ್ಲಾ ವಿಧದ ಜಾಹೀರಾತುಗಳಿಗೆ ಸಂಬಂಧಪಟ್ಟಂತೆ, ಯಾವುದೇ ರೀತಿಯ ಉಲ್ಲಂಘನೆ ಕಂಡು ಬಂದಲ್ಲಿ ಆಯುಕ್ತರು ಅನ್ವಯವಾಗುವ ವಾರ್ಷಿಕ ಜಾಹೀರಾತು ಶುಲ್ಕಕ್ಕೆ ಮೀರದಂತೆ ಗರಿಷ್ಟ ದಂಡವನ್ನು ವಿಧಿಸಬಹುದು, ಹಾಗೂ

ಯಾವುದೇ ನೋಟೀಸ್ ನೀಡದೆ ಜಾಹೀರಾತು ಫಲಕವನ್ನು ತೆರವುಗೊಳಿಸತಕ್ಕದ್ದು ಹಾಗೂ ಸಂಸ್ಥೆಯ ನೊಂದಾವಣೆಯನ್ನು ರದ್ದುಗೊಳಿಸಲು ಕ್ರಮವಹಿಸುವುದು.

3) **ಭಾಗ–II ಸೇರ್ಪಡೆ: 3ಎ(30):**

V) ನೆಲದ ಮೇಲೆ ಅಥವಾ ಕಟ್ಟಡಗಳ ಮೇಲೆ "ಎರಡು ಫಲಕಗಳ ನಡುವಿನ ಅಂತರ ಕನಿಷ್ಟ 10 ಮೀಟರ್ ಅಂತರವಿರತಕ್ಕದ್ದು." ಎಂದು ಸೇರಿಸತಕ್ಕದ್ದು.

4) **3ಎ(22) ತಿದ್ದುಪಡಿ:**
ಏಜೆನ್ಸಿಗಳು ಎಲ್ಲಾ ಜಾಹೀರಾತುಗಳ ವಾರ್ಷಿಕ ತೆರಿಗೆಯನ್ನು ಒಂದೇ ಕಂತಿನಲ್ಲಿ ಪ್ರತಿ ವರ್ಷ ಜುಲೈ 30ನೇ ದಿನಾಂಕದೊಳಗಾಗಿ ಪಾವತಿಸತಕ್ಕದ್ದು.

5) **ಭಾಗ III 4 ಎ (II) ರಲ್ಲಿ**
ಏಜೆನ್ಸಿಯ ನೊಂದಾವಣಿಗೆ ನಿಗದಿಪಡಿಸಿರುವ ರೂ.5,000/–ಗಳನ್ನು ರೂ.1,00,000/–ಗಳಿಗೆ ಹೆಚ್ಚಿಸುವುದು.

6) **ಭಾಗ– III 4 ಎ (II) (ಅ) ರಲ್ಲಿ**
ಏಜೆನ್ಸಿಯ ನವೀಕರಣಕ್ಕಾಗಿ ಪ್ರತಿ ಮೂರು ವರ್ಷಗಳಿಗೊಮ್ಮೆ ರೂ.2,000/–ಗಳಿಂದ ರೂ.25,000/–ಗಳಿಗೆ ಹೆಚ್ಚಿಸುವುದು.

ಜಾಹೀರಾತು ಬೈಲಾ–2006ಕ್ಕೆ ಸೂಕ್ತವಾಗಿ ಮೇಲ್ಕಂಡಂತೆ ಬೈಲಾದಲ್ಲಿ ಕೆಲವು ಉಪವಿಧಿಗಳ ಸೇರ್ಪಡೆ, ಕೆಲವು ಉಪವಿಧಿಗಳ ತಿದ್ದುಪಡಿ, ಕೆಲವು ಉಪವಿಧಿಗಳನ್ನು ಕೈಬಿಡಲಾಗಿದ್ದು, ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ಈ ಕೆಳಕಂಡ ಮಾರ್ಪಾಡುಗಳೊಂದಿಗೆ ದಿನಾಂಕ : 21–02–2012ರ ಆಯುಕ್ತರ ಟಿಪ್ಪಣಿಯಲ್ಲಿನ ಪ್ರಸ್ತಾವನೆಯನ್ನು ಒಪ್ಪಿದೆ.***

***ಹಾಲಿ ಇರುವ ಜಾಹೀರಾತು ಬೈಲಾ–2006ಕ್ಕೆ ಪ್ರಸ್ತಾಪಿಸಿರುವ ತಿದ್ದುಪಡಿಗಳು (ಈ ತಿದ್ದುಪಡಿಗಳನ್ನು ತಿದ್ದುಪಡಿ 2012 ಎಂದು ಹೆಸರಿಸುವುದು) :***

*ಪ್ರಸ್ತಾವನೆಯ ಕ್ರಮಸಂಖ್ಯೆ 2 ರಲ್ಲಿರುವ ಜಾಹೀರಾತು ತೆರಿಗೆ ದರಗಳನ್ನು, ಅಂದರೆ ಹಾಲಿ ಇರುವ ದರಗಳಿಗಿಂತ ಸುಮಾರು ಒಂದುಪಟ್ಟು (1+1) ಜಾಹೀರಾತು ತೆರಿಗೆಯನ್ನು, ಈ ಕೆಳಕಂಡ ರಸ್ತೆಗಳಿಗೆ ಮಾತ್ರ ಅನ್ವಯಿಸುವಂತೆ ಹಾಗೂ ಈ ಕೆಳಕಂಡ ಪಟ್ಟಿಯಲ್ಲಿರುವಂತೆ ಜಾಹೀರಾತು ತೆರಿಗೆಯನ್ನು ಹೆಚ್ಚಿಸುವುದು.* ***(ದರಗಳನ್ನು ಹೆಚ್ಚಿಸುವ ಸಂದರ್ಭದಲ್ಲಿ ಗುಣಾಂಕಗಳನ್ನು ದಶಾಂಕಕ್ಕೆ ROUND OFF ಮಾಡುವುದು)***

**ಪೂರ್ವವಲಯಕ್ಕೆ ಸಂಬಂಧಪಟ್ಟಂತೆ,**

01. **ಎಂ.ಜಿ.ರಸ್ತೆ :–** ಟ್ರಿನಿಟಿ ವೃತ್ತದಿಂದ ಕುಂಬ್ಳೆ ವೃತ್ತದ ವರೆವಿಗೆ,
02. **ರೆಸಿಡೆನ್ಸಿರಸ್ತೆ :–** ರಿಚ್‌ಮಂಡ್ ವೃತ್ತದಿಂದ ಮೇಯೋಹಾಲ್ ವರೆವಿಗೆ,
03. **ಬ್ರಿಗೇಡ್‌ರಸ್ತೆ :–** ಎಂ.ಜಿ.ರಸ್ತೆಯಿಂದ ವೆಲ್ಲಾರ ಜಂಕ್ಷನ್ ವರೆವಿಗೆ,
04. **ಕಮರ್ಷಿಯಲ್ ಸ್ಟ್ರೀಟ್ :–** ಕಾಮರಾಜರಸ್ತೆಯಿಂದ ಓ.ಪಿ.ಎಚ್.ರಸ್ತೆಯವರೆವಿಗೆ,
05. **ಕಾಮರಾಜರಸ್ತೆ :–**ಕಾಮರಾಜ ಜಂಕ್ಷನ್‌ನಿಂದ ಸೆಂಟ್ ಜಾನ್ ಚರ್ಚ್ ಜಂಕ್ಷನ್ ವರೆವಿಗೆ,
06. **ರಿಚ್‌ಮಂಡ್‌ರಸ್ತೆ :–** ಡಿಸೋಜ ಸರ್ಕಲ್‌ನಿಂದ ರಿಚ್‌ಮಂಡ್ ಸರ್ಕಲ್‌ವರೆವಿಗೆ,
07. **ಇನ್‌ಫೆಂಟ್ರಿ ರಸ್ತೆ :–** ವಿಶ್ವೇಶ್ವರಯ್ಯ ಕಟ್ಟಡದಿಂದ ಸಫೀನಾಪ್ಲಾಜದವರೆವಿಗೆ,
08. **ಕನ್ನಿಂಗ್‌ಹ್ಯಾಮ್ ರಸ್ತೆ ;–**ಕ್ವೀನ್ಸ್ ವೃತ್ತದಿಂದ ಚಂದ್ರಿಕಾ ಹೋಟೆಲ್‌ವರೆವಿಗೆ,
09. **ನ್ಯೂ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ರಸ್ತೆ ;–** ವಿಂಡ್ಸರ್ ಮ್ಯಾನರ್ ಜಂಕ್ಷನ್‌ನಿಂದ ಹೆಬ್ಬಾಳ ಫ್ಲೈಓವರ್ ವರವಿಗೆ,

10. **ವಿಠಲ್‌ಮಲ್ಯ ರಸ್ತೆ** :- ಸೆಂಟ್ ಮಾರ್ಕ್ ರಸ್ತೆಯಿಂದ ರಾಜರಾಂ ಮೋಹನ್‌ರಾಯ್‌ರಸ್ತೆ ವರವಿಗೆ,
11. **ಕ್ವೀನ್ಸ್ ರಸ್ತೆ** :- ಪಶುವೈದ್ಯ ಆಸ್ಪತ್ರೆಯಿಂದ ಇಂಡಿಯನ್ ಎಕ್ಸ್‌ಪ್ರೆಸ್ ರಸ್ತೆಯವರೆವಿಗೆ,
12. **ಜಯಮಹಲ್‌ಮುಖ್ಯರಸ್ತೆ** :- *ಮೇಕ್ರಿ ಸರ್ಕಲ್ ನಿಂದ ಕ್ವೀನ್ಸ್ ರಸ್ತೆವರೆವಿಗೆ,*
13. **ಕಸ್ತೂರಬಾರಸ್ತೆ** :- *ಗಾಂಧಿ ಪ್ರತಿಮೆಯಿಂದ ಯು.ಬಿ.ಸಿಟಿ ಜಂಕ್ಷನ್‌ವರೆವಿಗೆ,*
14. **ಕಮರ್ಷಿಯೇಟ್ ರಸ್ತೆ** :- ಮೆಯೋಹಾಲ್‌ನಿಂದ ಡಿಸೋಜ ಸರ್ಕಲ್‌ವರೆವಿಗೆ,
15. **ಪ್ಯಾಲೇಸ್ ರಸ್ತೆ** :- ಸಿಂಧೂ ಹೋಟೆಲ್ ನಿಂದ ಮೌಂಟ್ ಕಾರ್ಮಲ್ ರೈಲ್ವೆ ಬ್ರಿಡ್ಜ್‌ವರೆವಿಗೆ,
16. **ವಿಕ್ಟೋರಿಯಾ ರಸ್ತೆ** :- ಇಂಡಿಯಾ ಗ್ಯಾರೇಜ್ ನಿಂದ ಡಿಸೋಜ ಸರ್ಕಲ್‌ವರವಿಗೆ,
17. **ಹಳೇ ವಿಮಾನ ನಿಲ್ದಾಣ ರಸ್ತೆ** : ದೊಮ್ಮಲೂರು ಫ್ಲೈಓವರ್‌ನಿಂದ ಹಳೇ ವಿಮಾನ ನಿಲ್ದಾಣ ಗೇಟ್ ವರೆವಿಗೆ'
18. **ಸೆಂಟ್‌ಮಾರ್ಕ್ಸ್ ರಸ್ತೆ** :- ಎಂ.ಜಿ.ರಸ್ತೆ, ಕುಂಬ್ಲೆ ವೃತ್ತದಿಂದ ರೆಸಿಡೆನ್ಸಿರಸ್ತೆವರೆವಿಗೆ,
19. **ಹೊಸೂರು ರಸ್ತೆ** : ವೆಲ್ಲಾರ ಜಂಕ್ಷನ್‌ನಿಂದ ಕ್ರೈಸ್ತ ಸಮುದಾಯದ ಸ್ಮಶಾನದ ಪಕ್ಕದ ಬೃಹತ್ ಕಾಲುವೆವರೆವಿಗೆ

**ಪಶ್ಚಿಮ ವಲಯಕ್ಕೆ ಸಂಬಂಧಪಟ್ಟಂತೆ,**

01. **ಸಂಪಿಗೆ ರಸ್ತೆ** :- ಮಂತ್ರಿಮಾಲ್ ನಿಂದ ಮಲ್ಲೇಶ್ವರಂ ಸರ್ಕಲ್ ವರೆವಿಗೆ,
02. **ಕುಮಾರ ಕೃಪರಸ್ತೆ** :- ಶಿವಾನಂದ ಸರ್ಕಲ್‌ನಿಂದ ರಾಜೀವ್‌ಗಾಂಧಿ ಪ್ರತಿಮೆವರೆವಿಗೆ,
03. **ಟಿ.ಚೌಡಯ್ಯರಸ್ತೆ** :- ಕಾವೇರಿ ಜಂಕ್ಷನ್‌ನಿಂದ ಮಲ್ಲೇಶ್ವರಂ 18ನೇ ಮುಖ್ಯರಸ್ತೆವರೆವಿಗೆ,

**ದಕ್ಷಿಣ ವಲಯಕ್ಕೆ ಸಂಬಂಧಪಟ್ಟಂತೆ,**

01. **ಹೊಸೂರುರಸ್ತೆ** :- ಕ್ರೈಸ್ತ ಸಮುದಾಯದ ಸ್ಮಶಾನದ ಪಕ್ಕದ ಬೃಹತ್ ಕಾಲುವೆಯಿಂದ ಸೆಂಟ್ರಲ್ ಸಿಲ್ಕ್‌ಬೋರ್ಡ್ ಜಂಕ್ಷನ್‌ವರೆವಿಗೆ,
02. **ಬಿ.ಟಿ.ಎಂ. ಮುಖ್ಯರಸ್ತೆ** :- ರಾಘವೇಂದ್ರ ಮಠದಿಂದ ಸೆಂಟ್ರಲ್ ಸಿಲ್ಕ್‌ಬೋರ್ಡ್ ಜಂಕ್ಷನ್‌ವರೆವಿಗೆ,
03. **ಕೋರಮಂಗಲ ರಿಂಗ್ ರಸ್ತೆ** :- ದೊಮ್ಮಲೂರು ಫ್ಲೈಓವರ್‌ನಿಂದ ಕೊರಮಂಗಲ ಬಿ.ಡಿ.ಎ. ಕಾಂಪ್ಲೆಕ್ಸ್ ವರೆವಿಗೆ,
04. **ಜಯನಗರ** :- ಜಯನಗರ ವಾಣೀಜ್ಯ ಸಂಕೀರ್ಣದ ಸುತ್ತಲ ರಸ್ತೆ, (ಎಡ ಮತ್ತು ಬಲ)
05. **ಆರ್.ವಿ.ರಸ್ತೆ** :- ಲಾಲ್‌ಭಾಗ್‌ವೆಸ್ಟ್ ಗೇಟ್‌ನಿಂದ ಬಿ.ಟಿ.ಎಂ.ರಸ್ತೆಗೆ ಸೇರುವ ರಸ್ತೆವರೆವಿಗೆ,

**ಯಲಹಂಕ ವಲಯಕ್ಕೆ ಸಂಬಂಧಪಟ್ಟಂತೆ,**

01. **ನ್ಯೂ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ರಸ್ತೆ** :- ಹೆಬ್ಬಾಳ ಫ್ಲೈಓವರ್ ನಿಂದ ಪಾಲಿಕೆ ವ್ಯಾಪ್ತಿಯವರೆವಿಗೆ,

**ಮಹದೇವಪುರ ವಲಯಕ್ಕೆ ಸಂಬಂಧಪಟ್ಟಂತೆ,**

01. **ಮಾರತ್‌ಹಳ್ಳಿ ಮುಖ್ಯರಸ್ತೆ** :- ಹಳೇ ವಿಮಾನ ನಿಲ್ದಾಣ ಗೇಟ್‌ನಿಂದ ಮಾರತ್‌ಹಳ್ಳಿ ರಿಂಗ್ ರಸ್ತೆವರೆವಿಗೆ,

**ಇವುಗಳ ಜೊತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವಂತಹ ಬಿ.ಎಂ.ಟಿ.ಸಿ ಬಸ್ ನಿಲ್ದಾಣ, ಮೇಟ್ರೊ ನಿಲ್ದಾಣ, ರೈಲ್ವೇ ನಿಲ್ದಾಣ ಹಾಗೂ ವಿಮಾನ ನಿಲ್ದಾಣಗಳು.**

ತೀರ್ಮಾನಿಸಿರುವ ದರಗಳು ಈ ಕೆಳಕಂಡಂತೆ ಇರುತ್ತದೆ

| ಜಾಹೀರಾತಿನ ಮಾದರಿ | | ಹಾಲಿ ದರಗಳು (ಮಾಸಿಕ ಒಂದು ಚ.ಮೀ.ಗೆ) | ಜಾಹೀರಾತಿನ ಮಾದರಿ | ಪ್ರಸ್ತಾಪಿಸಿರುವ ಹೆಚ್ಚುವರಿ ದರಗಳು (ಮಾಸಿಕ ಒಂದು ಚ.ಮೀ.ಗೆ) |
|---|---|---|---|---|
| ಪ್ರಕಾಶವಿರುವ | ಪ್ರಕಾಶವಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.129 | ಪ್ರಕಾಶವಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.260 |
| ಪ್ರಕಾಶವಿಲ್ಲದಿರುವ | ಪ್ರಕಾಶವಿಲ್ಲದಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.86.25 | ಪ್ರಕಾಶವಿಲ್ಲದಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.180 |
| ನಿಯಾನ್ | ನಿಯಾನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.172.50 | ನಿಯಾನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.350 |
| ಟ್ರೈವಿಜನ್ | ಟ್ರೈವಿಜನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.258.75 | ಟ್ರೈವಿಜನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.520 |
| ಎಲೆಕ್ಟ್ರಾನಿಕ್ಸ್ | ಎಲೆಕ್ಟ್ರಾನಿಕ್ಸ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.258.75 | ಎಲೆಕ್ಟ್ರಾನಿಕ್ಸ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.520 |
| ಜೂಜು (ರೇಸ್) ಕುದುರೆ | ಜೂಜು (ರೇಸ್) ಕುದುರೆ (ಪ್ರತಿ ಕುದುರೆ ಮತ್ತು ಪ್ರತಿ ಆಟಕ್ಕೆ) | ರೂ.150 | ಜೂಜು (ರೇಸ್) ಕುದುರೆ (ಪ್ರತಿ ಕುದುರೆ ಮತ್ತು ಪ್ರತಿ ಆಟಕ್ಕೆ) | ರೂ.500 |
| ಬಟ್ಟೆ ಬ್ಯಾನರ್‌ಗಳು | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.30 | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.90 |
| ಫ್ಲೆಕ್ಸ್ ಬ್ಯಾನರ್ | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.86.25 | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.150 |
| ಬಂಟಿಂಗ್ಸ್ | ಬಂಟಿಂಗ್ಸ್ (ಪ್ರತಿ ಕಿಲೋಗ್ರಾಂಗೆ) | ರೂ.15 | ಬಂಟಿಂಗ್ಸ್ (ಪ್ರತಿ ಕಿಲೋಗ್ರಾಂಗೆ) | ರೂ.100 |

*ಕ್ರಮ ಸಂಖ್ಯೆ : 2 ರಲ್ಲಿ ನಮೂಧಿಸಿರುವ ರಸ್ತೆಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲಾ ಎಂಟು ವಲಯಗಳ ವ್ಯಾಪ್ತಿಯಲ್ಲಿ ಬರುವ ಜಾಹೀರಾತುಗಳಿಗೆ ಕ್ರಮಸಂಖ್ಯೆ 3 ರಲ್ಲಿ ಹಾಲಿ ಇರುವ ದರಗಳಿಗಿಂತ ಅಂದರೆ ಸುಮಾರು ಅರ್ಧಪಟ್ಟು ಹೆಚ್ಚುವರಿ (1+0.5) ಜಾಹೀರಾತು ತೆರಿಗೆ ಅನ್ವಯಿಸುವಂತೆ, ಈ ಕೆಳಕಂಡ ಪಟ್ಟಿಯಲ್ಲಿರುವಂತೆ ಜಾಹೀರಾತು ತೆರಿಗೆಯನ್ನು ಹೆಚ್ಚಿಸಲು ತೀರ್ಮಾನಿಸಿದೆ.* ***(ದರಗಳನ್ನು ಹೆಚ್ಚಿಸುವ ಸಂದರ್ಭದಲ್ಲಿ ಗುಣಾಂಕಗಳನ್ನು ದಶಾಂಕಕ್ಕೆ ROUND OFF ಮಾಡುವುದು)***

ತೀರ್ಮಾನಿಸಿರುವ ದರಗಳು ಈ ಕೆಳಕಂಡಂತೆ ಇರುತ್ತದೆ

| ಜಾಹೀರಾತಿನ ಮಾದರಿ | | ಹಾಲಿ ದರಗಳು (ಮಾಸಿಕ ಒಂದು ಚ.ಮೀ.ಗೆ) | ಜಾಹೀರಾತಿನ ಮಾದರಿ | ಪ್ರಸ್ತಾಪಿಸಿರುವ ಹೆಚ್ಚುವರಿ ದರಗಳು (ಮಾಸಿಕ ಒಂದು ಚ.ಮೀ.ಗೆ) |
|---|---|---|---|---|
| ಪ್ರಕಾಶವಿರುವ | ಪ್ರಕಾಶವಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.129 | ಪ್ರಕಾಶವಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.200 |
| ಪ್ರಕಾಶವಿಲ್ಲದಿರುವ | ಪ್ರಕಾಶವಿಲ್ಲದಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.86.25 | ಪ್ರಕಾಶವಿಲ್ಲದಿರುವ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.130 |
| ನಿಯಾನ್ | ನಿಯಾನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.172.50 | ನಿಯಾನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.260 |
| ಟ್ರೈವಿಜನ್ | ಟ್ರೈವಿಜನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.258.75 | ಟ್ರೈವಿಜನ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.390 |
| ಎಲೆಕ್ಟ್ರಾನಿಕ್ಸ್ | ಎಲೆಕ್ಟ್ರಾನಿಕ್ಸ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.258.75 | ಎಲೆಕ್ಟ್ರಾನಿಕ್ಸ್ (ಶೇಕಡ 15% ರಷ್ಟು ಆರೋಗ್ಯಕರ ಸೇರಿ) | ರೂ.390 |
| ಜೂಜು (ರೇಸ್) ಕುದುರೆ | ಜೂಜು (ರೇಸ್) ಕುದುರೆ (ಪ್ರತಿ ಕುದುರೆ ಮತ್ತು ಪ್ರತಿ ಆಟಕ್ಕೆ) | ರೂ.150 | ಜೂಜು (ರೇಸ್) ಕುದುರೆ (ಪ್ರತಿ ಕುದುರೆ ಮತ್ತು ಪ್ರತಿ ಆಟಕ್ಕೆ) | ರೂ.500 |
| ಬಟ್ಟೆ ಬ್ಯಾನರ್‌ಗಳು | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.30 | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.90 |
| ಫ್ಲೆಕ್ಸ್ ಬ್ಯಾನರ್ | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.86.25 | ಬ್ಯಾನರ್‌ಗಳು (ಪ್ರತಿ ವಾರಕ್ಕೆ ಮತ್ತು ಪ್ರತಿ ಮೀಟರ್‌ಗೆ) | ರೂ.150 |
| ಬಂಟಿಂಗ್ಸ್ | ಬಂಟಿಂಗ್ಸ್ (ಪ್ರತಿ ಕಿಲೋಗ್ರಾಂಗೆ) | ರೂ.15 | ಬಂಟಿಂಗ್ಸ್ (ಪ್ರತಿ ಕಿಲೋಗ್ರಾಂಗೆ) | ರೂ.100 |

**ಸೇರ್ಪಡೆ:–**

**8.ಇತರೆ ಕ್ರಮ ವಿಧಾನಗಳು:**

(2) ಭೂ ಸ್ವಾಧೀನ, ಮೆಟ್ರೊ ಕಾಮಗಾರಿ, ರಸ್ತೆ ಅಗಲೀಕರಣ, ಕಟ್ಟಡದ ಮಾಲೀಕರಿಂದ ಆಕ್ಷೇಪಣೆ, ಮುಂತಾದ ಅನಿವಾರ್ಯ ಕಾರಣಗಳಿಂದ ಅಳವಡಿಸಲಾಗಿರುವ ಫಲಕಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಹಿಸಿಕೊಳ್ಳಲು ಅಂದರೆ ಅದೇ ವಲಯಗಳಲ್ಲಿ ಮಾತ್ರ ವರ್ಗಾಹಿಸಿಕೊಳ್ಳಬಹುದಾಗಿದ್ದು, ವರ್ಗಾಹಿಸುವ ಪ್ರತಿ ಫಲಕಕ್ಕೆ ವರ್ಗಾವಣೆ ಶುಲ್ಕ ರೂ.50,000/–(ರೂ. ಐವತ್ತು ಸಾವಿರ ಮಾತ್ರ) ವಿಧಿಸಿ ಅನುಮತಿ ನೀಡತಕ್ಕದ್ದು.

(3) ಪಾಲಿಕೆಯಲ್ಲಿ ನೊಂದಾಯಿಸಿರುವ ಜಾಹೀರಾತು ಫಲಕ ಒಂದು ಜಾಹೀರಾತು ಸಂಸ್ಥೆಯಿಂದ ಮತ್ತೊಂದು ಜಾಹೀರಾತು ಸಂಸ್ಥೆಗೆ ವರ್ಗಾವಣೆ ಹೊಂದಲು ಆಸಕ್ತಿ ವ್ಯಕ್ತಪಡಿಸಿದಲ್ಲಿ ಅಂತಹ ಪ್ರತಿ ಪ್ರಕರಣದಲ್ಲಿ ವರ್ಗಾವಣೆ ಹೊಂದುವ ಪ್ರತಿ

ಫಲಕಕ್ಕೆ ವರ್ಗಾವಣೆ ಶುಲ್ಕವೆಂದು ರೂ.50,000/-( ಐವತ್ತು ಸಾವಿರ ರೂಗಳು ಮಾತ್ರ) ವಿಧಿಸಿ ಅನುಮತಿ ನೀಡುವುದು.

(4) ಖಾಸಗಿ ಜಾಹೀರಾತು ಏಜೆನ್ಸಿದಾರರು ಈಗಾಗಲೇ ಸಿಟಿ ಸಿವಿಲ್ ಹಾಗೂ ಘನ ಉಚ್ಚ ನ್ಯಾಯಾಲಯಗಳಲ್ಲಿ ಕೆ.ಎಂ.ಸಿ. ಕಾಯ್ದೆ ಕಲಂ 443 (10) ರ ಅನ್ವಯ (Deemed permission) ಪಡೆಯಲು ದಾವೆ ಹೂಡಿರುವ ಪ್ರಕರಣಗಳಲ್ಲಿ ಪ್ರತಿ ಫಲಕಕ್ಕೆ ದಂಡ ರೂಪವಾಗಿ ರೂ.50,000/-( ಐವತ್ತು ಸಾವಿರ ರೂ ಮಾತ್ರ) ವಿಧಿಸಿ ಹಾಗೂ ಯಾವ ದಿನಾಂಕದಿಂದ ನ್ಯಾಯಾಲಯಗಳಲ್ಲಿ ದಾವೆ ಅಥವಾ ರಿಟ್ ಅರ್ಜಿ ಸಲ್ಲಿಸಿರುತ್ತಾರೆಯೋ ಆ ದಿನಾಂಕದಿಂದ ಆಯಾ ಕಾಲಕ್ಕೆ ಜಾರಿಯಲ್ಲಿರುವ ಜಾಹೀರಾತು ತೆರಿಗೆ ವಿಧಿಸಿ ನಿಯಾಮಾನುಸಾರ ದಾಖಲೆಗಳನ್ನು ಪಡೆದು ಸಕ್ರಮಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು. (ಈ ಸಕ್ರಮ ಒಂದು ಬಾರಿಗೆ ಮಾತ್ರ ಅನುಮತಿ ನೀಡುವುದು)

**ಭಾಗ I**

**ಸಾಮಾನ್ಯ**

**5) ಭಾಗ III 4 ಎ (II) ರಲ್ಲಿ**

ಏಜೆನ್ಸಿಯ ನೊಂದಾವಣಿಗೆ ನಿಗದಿಪಡಿಸಿರುವ ರೂ.5,000/-ಗಳನ್ನು ರೂ.50,000/-ಗಳಿಗೆ ಹೆಚ್ಚಿಸುವುದು.

**6) ಭಾಗ- III 4 ಎ (II) (ಅ) ರಲ್ಲಿ**

ಏಜೆನ್ಸಿಯ ನವೀಕರಣಕ್ಕಾಗಿ ಪ್ರತಿ ಮೂರು ವರ್ಷಗಳಿಗೊಮ್ಮೆ ರೂ.2,000/-ಗಳಿಂದ ರೂ.15,000/-ಗಳಿಗೆ ಹೆಚ್ಚಿಸುವುದು.

**ಉಳಿದಂತೆ ಆಯುಕ್ತರ ಟಿಪ್ಪಣಿಯಲ್ಲಿರುವ ಪ್ರಸ್ತಾವನೆಯನ್ನು ಒಪ್ಪಿದೆ.**

## *31]. ವಿಷಯದ ಸಂಖ್ಯೆ :-ತೆಆಸ್ಥಾಸ/481/2011-12*

**ಪ್ರಸ್ತಾವನೆ:-** ಶ್ರೀ. ಮಂಜುನಾಥ್, ಸದಸ್ಯರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಸಲ್ಲಿಸಿ, ಪ್ರತಿಷ್ಠಿತ ಬೆಂಗಳೂರು ನಗರದ ನಿರ್ಮಾತೃ ಶ್ರೀಯುತ ಕೆಂಪೇಗೌಡರು ನಿರ್ಮಿಸಿರುವ ಗೋಪುರದ ಚಿಹ್ನೆಯ ಜೊತೆಗೆ ಕೆಂಪೇಗೌಡರ ಭಾವಚಿತ್ರವಿರುವ ಗೋಪುರದ ಲಾಂಚನವನ್ನು ಬೆಂಗಳೂರು ಮಹಾ ನಗರದ ಲಾಂಚನವನ್ನಾಗಿ ಅಧಿಕೃತವಾಗಿ ಘೋಷಿಸಲು ಹಾಗೂ ದೇಶ/ವಿದೇಶದಿಂದ ಬೆಂಗಳೂರು ನಗರಕ್ಕೆ ಭೇಟಿ ನೀಡುವ ಗಣ್ಯರಿಗೆ ಕೆಂಪೇಗೌಡರ ಭಾವಚಿತ್ರವಿರುವ ಗೋಪುರದ ಲಾಂಚನವನ್ನು ನೆನಪಿನ ಕಾಣಿಕೆಯನ್ನಾಗಿ ನೀಡುವ ಬಗ್ಗೆ ಸಮಿತಿಯಲ್ಲಿ ನಿರ್ಣಯ ಕೈಗೊಳ್ಳುವಂತೆ ಕೋರಿರುತ್ತಾರೆ.

*ನಿರ್ಣಯ :-* ***ಶ್ರೀ ಮಂಜುನಾಥ, ಸದಸ್ಯರು ನೀಡಿರುವ ಪ್ರಸ್ತಾವನೆ ಬಗ್ಗೆ ಸುದೀರ್ಘವಾಗಿ ಸಭೆಯಲ್ಲಿ ಚರ್ಚಿಸಿದ ನಂತರ ಪ್ರತಿಷ್ಠಿತ ಬೆಂಗಳೂರು ನಗರದ ನಿರ್ಮಾತೃ ಶ್ರೀಯುತ ಕೆಂಪೇಗೌಡರು ನಿರ್ಮಿಸಿರುವ ಗೋಪುರದ ಚಿಹ್ನೆಯ ಜೊತೆಗೆ ಕೆಂಪೇಗೌಡರ ಭಾವಚಿತ್ರವಿರುವ ಗೋಪುರದ ಲಾಂಚನವನ್ನು ಬೆಂಗಳೂರು ಮಹಾ ನಗರದ ಲಾಂಚನವನ್ನಾಗಿ ಅಧಿಕೃತವಾಗಿ ಘೋಷಿಸಲು ಹಾಗೂ ದೇಶ/ವಿದೇಶದಿಂದ ಬೆಂಗಳೂರು ನಗರಕ್ಕೆ ಭೇಟಿ ನೀಡುವ ಗಣ್ಯರಿಗೆ ಕೆಂಪೇಗೌಡರ ಭಾವಚಿತ್ರವಿರುವ ಗೋಪುರದ ಲಾಂಚನವನ್ನು ನೆನಪಿನ ಕಾಣಿಕೆಯನ್ನಾಗಿ ನೀಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.***

## *32]. ವಿಷಯದ ಸಂಖ್ಯೆ :-ತೆಆಸ್ಥಾಸ/482/2011-12*

**ಪ್ರಸ್ತಾವನೆ:-** ಶ್ರೀಮತಿ. ಆಶಾಸುರೇಶ್, ಸದಸ್ಯರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಸಲ್ಲಿಸಿ, ಪ್ರತಿಷ್ಠಿತ ಬೆಂಗಳೂರು ನಗರದ ನಿರ್ಮಾತೃ ಶ್ರೀಯುತ ಕೆಂಪೇಗೌಡರು ಬೆಂಗಳೂರು ನಗರದಲ್ಲಿ ನಿರ್ಮಿಸಿದ ಕೋಟೆಯ ಬಾಗಿಲು ಪದೇ ಪದೇ ಬೀಳುತ್ತಿದ್ದು, ಇದರ ಉಳಿವಿಗಾಗಿ, ಗರ್ಭಿಣಿ ಹೆಣ್ಣಿನ ಬಲಿಯನ್ನು ನೀಡಬೇಕೆಂದು ಜ್ಯೋತಿಷಿಗಳ ನುಡಿಯನ್ನು ಜನರು ಮಾತನಾಡಿಕೊಳ್ಳುತ್ತಿದ್ದು, ಇದನ್ನು ಸ್ವತಃ ಕೆಂಪೇಗೌಡರು ಒಪ್ಪದೇ ಇದ್ದ ಕಾರಣ ಶ್ರೀಯುತ ಕೆಂಪೇಗೌಡರ ಸೊಸೆಯಾದ ಶ್ರೀಮತಿ ಲಕ್ಷ್ಮಿದೇವಿಯವರು ಸ್ವಪ್ರೇರಣೆಯಿಂದ ಮಾವನವರ ಹಾಗೂ ಜನರ ಶ್ರಮವು ವ್ಯರ್ಥವಾಗಕೂಡದೆಂದು ತನ್ನ ಪ್ರಾಣವನ್ನೇ ಕೋಟೆಯ ಬಾಗಿಲಿಗೆ

ಅರ್ಪಿಸಿದ್ದು, ಇವರ ಈ ತ್ಯಾಗ, ಬಲಿದಾನದ ಸಂಕೇತವಾಗಿ ಇವರ ಪುತ್ಥಳಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆವರಣದಲ್ಲಿ ಸ್ಥಾಪಿಸುವ ಬಗ್ಗೆ ಸಮಿತಿಯಲ್ಲಿ ನಿರ್ಣಯ ಕೈಗೊಳ್ಳುವಂತೆ ಕೋರಿರುತ್ತಾರೆ.

***ನಿರ್ಣಯ :-*** ***ಶ್ರೀಮತಿ. ಆಶಾಸುರೇಶ್, ಸದಸ್ಯರು ನೀಡಿರುವ ಪ್ರಸ್ತಾವನೆ ಬಗ್ಗೆ ಸುದೀರ್ಘವಾಗಿ ಸಭೆಯಲ್ಲಿ ಚರ್ಚಿಸಿದ ನಂತರ ಪ್ರತಿಷ್ಠಿತ ಬೆಂಗಳೂರು ನಗರದ ನಿರ್ಮಾತೃ ಶ್ರೀಯುತ ಕೆಂಪೇಗೌಡರ ಸೊಸೆ ಶ್ರೀಮತಿ ಲಕ್ಷ್ಮಿದೇವಿಯವರ ಬಲಿದಾನದ ಸ್ಮರಣೆಗಾಗಿ ಇವರ ಪುತ್ಥಳಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆವರಣದ ಮುಖ್ಯ ಕಛೇರಿಯ ಎದುರಿನಲ್ಲಿರುವ ಖಾಲಿ ಸ್ಥಳದಲ್ಲಿ ಸ್ಥಾಪಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.***

## *33]. ವಿಷಯದ ಸಂಖ್ಯೆ :–ತೆಆಸ್ಥಾಸ/483/2011–12*

***ಪ್ರಸ್ತಾವನೆ :-*** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಅಧೀಕ್ಷಕರು (ಪೂರ್ವ) ರವರ ಶಿಫಾರಸ್ಸಿನ ಮೆರೆಗೆ ಪೂರ್ವ ವಲಯದ ವ್ಯಾಪ್ತಿಯಲ್ಲಿ ಬರುವ ವೃತ್ತಗಳು, ರಸ್ತೆ ವಿಭಜಕಗಳು, ಮೇಲು ಸೇತುವೆಯ ಕೆಳಭಾಗ, ರಸ್ತೆ ಪಕ್ಕದ ಉದ್ಯಾನವನ ಮತ್ತು ಐಲ್ಯಾಂಡ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ದತ್ತಿನ ಆಧಾರದ ಮೆಲೆ (ಜಾಹೀರಾತು ಪ್ರದರ್ಶನಕ್ಕೆ) ಈ ಕೆಳಕಂಡ ಸಂಸ್ಥೆಗಳಿಗೆ ನೀಡಿರುವುದು ತಿಳಿದು ಬಂದ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಕಡತಗಳನ್ನು ಸಮಿತಿಯು ತರಿಸಿಕೊಂಡು ಪರಿಶೀಲಿಸಿದ್ದು, ಪಾರದರ್ಶಕ ಕಾಯ್ದೆ ಉಲ್ಲಂಘಿಸಿ ಪಾಲಿಕೆಗೆ ನಷ್ಠ ಉಂಟಾಗಿರುವುದು ಕಂಡುಬಂದಿರುತ್ತದೆ.

***I M/S Puravankara, Project Ltd, 130/1, Ulsoor Road, Bengaluru.***

1. *Indian Express Circle to vidhana Soudha Median.*
2. *Cubbon road Minsk Square to Manipal Center median.*
3. *Kamaraj Road From M.G,Road to Cubbon Road Median.*
4. *Anil Kumble circle to cubbon Road Median.*
5. *Traffic Island on Trinity Circle.*

***II M/S The Green City Marketing, #.50, 7th cross, Pillanna Garden, St.Thomas Town Post, Bengaluru.***

1. *bulevard on M.G.Road attached to the Police Wireless Station Compound from M.G.Park to Anil Kumble Circle.*
2. *K.R.Circle Trafffic Island and the Surrounding strip Garden above the Under Pass to Nruptunga Road.*
3. *Traffic Island at the junction of brigade road and Residency Road.*
4. *Road Median from domlur up to HAL Airport on the old Airport Road.*
5. *Strip Garden adjoining the Kamadhenu Hotel Compound on Swami Vivekananda Road.*
6. *Traffic Island on Race Course Road junction.*

***III M/S Hosmat Hopital #.45 Magrath Road, off. Richmond Road, Bengaluru.***

1. *Next to Raj Bhavan both the sides till Chalukya Hotel.*
2. *Trinity Circle.*
3. *M.G.Road-Small Circle opp; Vijaya Bank.*
4. *Lower Agaram road Circle.*
5. *Lalbagh Circle.*
6. *Dicksen Road Stretch.*
7. *Cubbon Road.*

***IV M/S EMBASSY Group Embassy Point, #.150, Infantry Road, Bengaluru.***

1. *Beautifiction the areas below the Airport road flyover, Dommlur,ward No.112.*

***V M/S Rewdale Precision Tools Pvt. Ltd.#.36, Sampangi Tank road, Bengaluru.***

1. *Maintenance of Park by the side of Rajaram Mohan Roy Road, Sampangiramnagar Park*

***VI M/S Malabar Jewels &Gems (p)Ltd. #. 13, Dickenson road, Bengaluru.***

1. *Maintenance of Traffic Island on Dickenson road.*

***VII M/S Nitesh Estates Ltd. #.8, M.G.Road, 7th Floor Nitest Timesquare,Bengaluru.***

1. *All road medians in front of Chaulkaya Hotel including one in front of temple.*
2. *All road median of High Ground Police station.*
3. *Two road medina of Windsor Manor Junction.*
4. *Queen''s Road Median i.e. Chinnaswamy Stadium including two inlands in front of DGIT*
5. *Road median from Windsor Manor circle upto Cauvery Junction.*
6. *Road Median from Mekhri Circle upto Hebbal Flyover.*
7. *Road Median from Command Hospital upto Domlur flyover.*
8. *Four Median on the Mekhri Circle on top of the bridge.*
9. *Two small islands on the main road in front of ASC Centre. ('T' Junction)*

***VIII M/S ACC Limited, Sales Unit Office, "The Estate" #.003A Ground Floor, 121 Dickenson Road Bengaluru.***

1. *Beautifiction and maintenance of Vivekananda Park, Ulsour.*

***IX M/S Featherlite, #16/A KKMP Building, Miller Road, Vasanth Nagar Bengaluru.***

1. *Development and maintenance at Traffic Island on Miller Road, Vasanth Nagar.*

***X M/S Puravankara, Project Ltd, 130/1, Ulsoor Road, Bengaluru.***

1. *Development work and maintenance at Rest House Park.*

*(ಮೇಲ್ಕಂಡ ಸಂಸ್ಥೆಗಳಿಗೆ ದತ್ತಿನ ಆಧಾರದ ಮೇಲೆ ನೀಡಿರುವ ಆದೇಶದ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿದೆ.)*

*ನಿರ್ಣಯ :–* ***ಮೇಲ್ಕಂಡ ವಿಷಯದ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಲಾಯಿತು. ಪಾಲಿಕೆಯಿಂದ ನಿರ್ಮಿಸಿರುವ ವೃತ್ತ, ರಸ್ತೆ ವಿಭಜಕ, ಉದ್ಯಾನವನ ಮತ್ತು ಟ್ರಾಫಿಕ್ ಐಲ್ಯಾಂಡ್‌ಗಳನ್ನು ಪಾಲಿಕೆಯಿಂದಲೇ ನಿರ್ವಹಣೆ ಮಾಡಲಾಗುತ್ತಿದ್ದು, ಮೇಲ್ಕಂಡ ಖಾಸಗಿ ಸಂಸ್ಥೆಗಳು ನಿರ್ವಹಣೆ ನೆಪದಲ್ಲಿ ಪಾಲಿಕೆಗೆ ಯಾವುದೇ ಆದಾಯವಿಲ್ಲದೆ ಜಾಹೀರಾತು ಪ್ರದರ್ಶನಕ್ಕೆ ಅನುಮತಿ ನೀಡಿರುವುದು ವ್ಯವಸ್ಥಿತವಾದ ಸಂಚಾಗಿದ್ದು, ಖಾಸಗಿಯವರಿಗೆ ಆದಾಯ ಮಾಡಿಕೊಡುವ ಹುನ್ನಾರವಾಗಿರುತ್ತದೆ. ಅಲ್ಲದೇ ಪಾರದರ್ಶಕ ಕಾಯ್ದೆ ಉಲ್ಲಂಘಿಸಿ ಒಂದು ಸಂಸ್ಥೆಗೆ ಜಾಹೀರಾತಿಗೆ ಅನುಮತಿ ನೀಡಿರುವುದು. ಹಾಗೂ ಪಾಲಿಕೆಗೆ ನೆಲಬಾಡಿಗೆ, ಜಾಹೀರಾತು ಶುಲ್ಕ ನಷ್ಟ ಮಾಡಿ ಅನುಮತಿ ನೀಡಿರುವುದು ಕಂಡುಬಂದಿರುತ್ತದೆ. ಆದುದರಿಂದ ಪೂರ್ವ ವಲಯದಲ್ಲಿ ವೃತ್ತ, ರಸ್ತೆವಿಭಜಕ, ಉದ್ಯಾನವನ ಮತ್ತು ಟ್ರಾಫಿಕ್ ಐಲ್ಯಾಂಡ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ದತ್ತಿನ ಆಧಾರದ ಮೇಲೆ ಖಾಸಗಿ ಸಂಸ್ಥೆಗಳಿಗೆ ನಿರ್ವಹಣೆ ಆಧಾರದ ಮೇಲೆ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡಿರುವ ಆದೇಶವನ್ನು ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಕೂಡಲೇ ರದ್ದುಪಡಿಸುವುದು. ಹಾಗೂ ಈ ಮೇಲ್ಕಂಡ ಪಟ್ಟಿಯಲ್ಲಿರುವ ಸ್ಥಳಗಳು ಮಾತ್ರ ತರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಗಮನಕ್ಕೆ ಬಂದಿದ್ದು, ಇದೇ ರೀತಿ ಬೇರೆ ಪ್ರಕರಣಗಳಿದ್ದಲ್ಲಿ ಅವುಗಳನ್ನು ಸಹ ರದ್ದು ಗೊಳಿಸಿ ಹೊಸದಾಗಿ E-Procurement ಮೂಲಕ ಟೆಂಡರ್ ಕಂ ಹರಾಜುಗಳನ್ನು ಆಹ್ವಾನಿಸಿ ನಿರ್ವಹಣೆ ಮತ್ತು ಜಾಹೀರಾತು ಪ್ರದರ್ಶನಕ್ಕೆ ನೆಲಬಾಡಿಗೆ, ಜಾರಿಯಲ್ಲಿರುವ ಜಾಹೀರಾತು ಶುಲ್ಕ, ಮತ್ತು ಸೇವಾ ತೆರಿಗೆ ಪಾವತಿಸುವಂತೆ ಕ್ರಮಕೈಗೊಳ್ಳುವುದೆಂದು, ಸಮಿತಿಯು ತೀರ್ಮಾನಿಸಿತು.***

**ಜಿ. ಮಂಜುನಾಥ್‌ರಾಜು**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**